ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ತಿದ್ದುಪಡಿಯಾದ ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ತಿದ್ದುಪಡಿಯಾದ ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, "2009ರ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವನೆ ಏನೆಂದರೆ, "2009ರ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕಗಳನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

4. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಎಸ್. ಎ. ರವೀಂದ್ರನಾಥ್ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, "2009ರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕವನ್ನು" ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಸ್.ಎ.ರವೀಂದ್ರನಾಥ್ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನವರು (India Council of Agriculture Research) 09–02–1995 ರಂದು ರಾಜ್ಯ ಕೃಷಿ ವಿಶ್ವವಿದ್ಯಾಲಯಗಳ ಒಂದು ಮಾದರಿ ವಿಧೇಯಕವನ್ನು ಕಳುಹಿಸಿಕೊಟ್ಟಿದೆ ಮತ್ತು 2008ರಲ್ಲಿ ಒಂದು ಪರಿಷ್ಕೃತ ಮಾದರಿ ವಿಧೇಯಕವನ್ನು ಕಳುಹಿಸಿ ಕೊಟ್ಟಿದೆ. ಸದರಿ ಮಾದರಿ ವಿಧೇಯಕವನ್ನು ರಾಜ್ಯ ಸರ್ಕಾರಗಳು ಪರಿಗಣಿಸ ಬೇಕೆಂದು, ಅವಶ್ಯವಾಗಬಹುದಾದಂಥ ಮಾರ್ಪಾಟುಗಳೊಡನೆ ಅವುಗಳನ್ನು ಅಳವಡಿಸಿಕೊಳ್ಳಬೇಕೆಂದು ಅಪೇಕ್ಷಿಸಲಾಗಿದೆ. ಪ್ರತಿಯೊಂದು ರಾಜ್ಯವು ಸಮಗ್ರ ರೀತಿಯಲ್ಲಿ ತರಬೇತಿ ಹಾಗೂ ವಿಧ್ಯಾಭ್ಯಾಸವನ್ನು ನೀಡುವಂತಹ ವಿವಿಧ ವಿದ್ಯಾಭ್ಯಾಸ ವಿಷಯಗಳನ್ನು ಒಳಗೊಂಡ ಒಂದು ಶಿಕ್ಷಣ ಕ್ರಮವನ್ನು ಹೊಂದಿರಬೇಕೆಂದು ಸದರಿ ವಿಧೇಯಕಕ್ಕೆ ಉಪಬಂಧದಲ್ಲಿ ಕಲ್ಪಿಸಲಾಗಿದೆ.

ಅದಕ್ಕನುಗುಣವಾಗಿ ಒಂದು ವ್ಯಾಪಕ ಶಾಸನವನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕ 2009ರ ಕೆಲವು ಪ್ರಮುಖ ಅಂಶಗಳು ಈ ಮುಂದಿನಂತಿವೆ:

1. ರಿಜೆಂಟ್‌ಗಳ ಮಂಡಳಿ ಎಂಬುದನ್ನು ವ್ಯವಸ್ಥಾಪನಾ ಮಂಡಳಿ ಎಂದು ಬದಲಾಯಿಸಲಾಗಿದೆ.
2. ದೇಣಿಗೆಗಳನ್ನು ಸ್ವೀಕರಿಸಲು ಮತ್ತು ಭಾರತದ ಹೊರಗೆ ಕೆಲಸ ಮಾಡುತ್ತಿರುವ ವಿದ್ಯಾಸಂಸ್ಥೆಗಳನ್ನು ವಿಶ್ವವಿದ್ಯಾಲಯ ವಿಶೇಷಾಧಿಕಾ ರಗಳಿಗೆ ಸೇರಿಸಿಕೊಳ್ಳಲು, ಮತ್ತು ಕೃಷಿ ಹಾಗೂ ಸಂಬಂಧಪಟ್ಟ ವಿಜ್ಞಾನಗಳ ಬೋಧನೆಯನ್ನು ನಡೆಸಲು, ಅವುಗಳಿಗೆ ಸಂಯೋಜನೆ ಯನ್ನು ನೀಡಲು ಉಪಬಂಧಗಳಲ್ಲಿ ಪ್ರಸ್ತಾವಿಸಲಾಗಿದೆ.
3. ಕುಲಾಧಿಪತಿಯವರು ಕೃಷಿ ಮತ್ತು ಸಂಬಂಧಪಟ್ಟ ವಿಜ್ಞಾನ ರಂಗಗ ಳಲ್ಲಿನ ಒಬ್ಬ ಖ್ಯಾತ ಶಿಕ್ಷಣ ತಜ್ಞರನ್ನು ಅಥವಾ ವಿಜ್ಞಾನಿಯನ್ನು ನಾಮನಿರ್ದೇಶನ ಮಾಡಲು ಒಂದು ಉಪಬಂಧವನ್ನು ಸೇರಿಸಲಾಗಿದೆ.

4. ಕೃಷಿ ಉದ್ಯಮ ರಂಗದ ಒಬ್ಬ ವ್ಯಕ್ತಿಯನ್ನು ವ್ಯವಸ್ಥಾಪನ ಮಂಡಳಿಗೆ ಸೇರಿಸಿಕೊಳ್ಳಲು ಉದ್ದೇಶಿತ ವಿಧೇಯಕದಲ್ಲಿ ಉಪಬಂಧ ಕಲ್ಪಿಸಲಾಗಿದೆ.
5. ನಾಮನಿರ್ದೇಶಿತ ಸದಸ್ಯರ ಗರಿಷ್ಠ ಪದಾವಧಿಯು ಕೇವಲ ಮೂರು ವರ್ಷಗಳು ಹಾಗೂ ಅವರು ಒಂದಕ್ಕಿಂತ ಹೆಚ್ಚು ಸಲ ನಾಮನಿರ್ದೇಶಿತರಾಗಲು ಅವಕಾಶ ಇಲ್ಲ ಎಂಬುದನ್ನು ಸಹ ಉದ್ದೇಶಿತ ವಿಧೇಯಕದಲ್ಲಿ ಸೇರಿಸಲಾಗಿದೆ.
6. ಪದವಿ ಅಧ್ಯಯನ ಮತ್ತು ಸ್ನಾತಕೋತ್ತರ ಪದವಿ ಅಧ್ಯಯನಗಳಿಗೆ ಪ್ರತ್ಯೇಕ ಅಧ್ಯಯನ ಮಂಡಳಿಗಳನ್ನು ಉಪಬಂಧಿಸಲಾಗಿದೆ.
7. ಸಂಶೋಧನಾ ಪರಿಷತ್ತು ಮತ್ತು ವಿಸ್ತರಣಾ ಶಿಕ್ಷಣ ಪರಿಷತ್ತುಗಳಿಗೆ ಹೆಚ್ಚಿನ ಪ್ರತಿನಿಧಿಗಳನ್ನು ಸೇರಿಸಿ ಪುನರ್ ಸಂಘಟಿಸಲಾಗಿದೆ.
8. ಕುಲಪತಿಗಳ ಪದಾವಧಿ ನಾಲ್ಕು ವರ್ಷಗಳು.
9. ಕೃಷಿ ಶಿಕ್ಷಣ ಮತ್ತು ಸಂಶೋಧನೆಗಳಿಗೆ ರಾಜ್ಯ ಸಮನ್ವಯ ಸಮಿತಿ ಸ್ಥಾಪಿಸಲು ಉಪಬಂಧ ಕಲ್ಪಿಸಲಾಗಿದೆ.
10. ಖಾಸಗಿ ಕಾಲೇಜುಗಳ ಸ್ಥಾಪನೆಗೆ ಮತ್ತು ಅದಕ್ಕೆ ಸಂಯೋಜನೆ ನೀಡುವುದಕ್ಕೆ ಒಂದು ಉಪಬಂಧ ಕಲ್ಪಿಸಲಾಗಿದೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ರವೀಂದ್ರನಾಥ್‌ರವರೆ, ನೀವು provision ಹೇಳಿ, ಏನೇನು amendment ತಂದಿದ್ದೀರೆಂದು ಹೇಳಿ.

ಶ್ರೀ ಎಸ್.ಎ.ರವೀಂದ್ರನಾಥ್ : ಅದನ್ನೇ ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ನೀವು ಓದಿಬಿಟ್ಟರೆ ಗೊತ್ತಾಗುವುದಿಲ್ಲ. 1963 Actಗೂ ಇದಕ್ಕೂ ಏನೇನು Changes ಮಾಡಿದ್ದರೆ ಎನ್ನುವುದನ್ನು ಹೇಳಲಿ.

ಅಧ್ಯಕ್ಷರು : ಹೇಳುತ್ತಾರೆ. ಅವರು ಏನು ಹೇಳುತ್ತಾರೆ ಎನ್ನುವುದನ್ನು ನೀವು ಸ್ವಲ್ಪ ಕೇಳಿ.

ಶ್ರೀ ಎಸ್.ಎ.ರವೀಂದ್ರನಾಥ್ : ಸ್ವಲ್ಪ ನಾನು ಹೇಳುವ ತನಕ ಕೇಳಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಬಿಲ್ ಅನ್ನು ಸೆಪ್ಟೆಂಬರ್ ಅಧಿವೇಶನದಲ್ಲಿ ಬೇಕಾದರೆ, ತೆಗೆದುಕೊಳ್ಳಲಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಬಿಲ್ ಅನ್ನು ಓದಿಕೊಂಡು ಕುಳಿತುಕೊಳ್ಳುವುದಕ್ಕಾಗುತ್ತದೆಯೇ?

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ಅವರು ಮೊದಲು ಹೇಳಲಿ, ಚರ್ಚೆ ಮಾಡಿ, ಬೇಕಾದಷ್ಟು ಅವಕಾಶ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ರವೀಂದ್ರನಾಥ್‌ರವರೆ, ನೀವು secretary ಅವರ ಹತ್ತಿರ ಸರಿಯಾಗಿ brief ಮಾಡಿಸಿಕೊಂಡು ಬರಬೇಕು.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಅವರು ಬಿಲ್ ಅನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಹೇಳಿ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ನೀವು ಚರ್ಚೆ ಮಾಡಿ, ಬೇಕಾದಷ್ಟು ಅವಕಾಶವನ್ನು ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಚರ್ಚೆ ಮಾಡುವುದಕ್ಕೆ ಸುಮಾರು 56 ಪುಟ ಇದೆ.

ಅಧ್ಯಕ್ಷರು : ಮೊದಲು ಅವರು ಹೇಳಲಿ, ಆಮೇಲೆ ನೀವು ಹೇಳಿ. ನೀವು explain ಮಾಡುವುದಕ್ಕೂ ಬಿಡುವುದಿಲ್ಲವಲ್ಲ. ನನಗೆ ಅರ್ಥವಾಗುತ್ತಿಲ್ಲ. ಆಮೇಲೆ ಚರ್ಚೆ ಮಾಡಿ ನಿಮಗೆ ಯಾರು ಬೇಡವೆನ್ನುತ್ತಾರೆ?

ಶ್ರೀ ಎಸ್.ಎ.ರವೀಂದ್ರನಾಥ್ : ಸನ್ಮಾನ್ಯ ಅಧ್ಯಕ್ಷರೆ, ನಾನೆಲ್ಲಾ ಹೇಳಿದ ಮೇಲೆ, ಅವರು ಕೇಳಿದ ಪ್ರಶ್ನೆಗೆ ನಾನು ಉತ್ತರವನ್ನು ಹೇಳುತ್ತೇನೆ. ಹನ್ನೊಂದನೆಯದಾಗಿ, ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾಲಯದ ಸ್ಥಾಪನೆಯಿದೆ.

ಮೇಲ್ಕಂಡ ಉದ್ದೇಶಗಳ ಸಾಧನೆಗಾಗಿ ಒಂದು ವ್ಯಾಪಕ ಶಾಸನವನ್ನು ತರಲು ಉದ್ದೇಶಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾದದ್ದರಿಂದ ಮತ್ತು ಕರ್ನಾಟಕ ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ಅಧ್ಯಾದೇಶ, 2008ನ್ನು (ಕರ್ನಾಟಕ ಅಧ್ಯಾದೇಶ 3) ದಿನಾಂಕ: 22-11-2008 ರಂದು ಪ್ರಖ್ಯಾಪಿಸಲಾಗಿತ್ತು. ಕರ್ನಾಟಕ ವಿಧಾನ ಸಭೆಯಲ್ಲಿ 2009ರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ವಿಧೇಯಕ ಮಂಡಿಸಲಾಗಿತ್ತು. ಆದರೆ, ವಿಧಾನಮಂಡಲದ ಅಧಿವೇಶನದಲ್ಲಿ ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಲು

ಸಾಧ್ಯವಾಗಲಿಲ್ಲ ಮತ್ತು ಕರ್ನಾಟಕ ವಿಧಾನ ಮಂಡಲವು ಮರು ಸಮಾವೇಶಗೊಂಡು ಆರು ವಾರಗಳು ಮುಕ್ತಾಯವಾದ ಕಾರಣ ದಿನಾಂಕ: 26-2-2009ರಂದು ಈ ಅಧ್ಯಾದೇಶದ ಕಾರ್ಯಾಚರಣೆಯು ನಿಂತುಹೋಗಿ ರುತ್ತದೆ. ವಿಷಯವು ತುರ್ತು ಸ್ವರೂಪದ್ದಾಗಿದ್ದರಿಂದ ಮತ್ತು ಕರ್ನಾಟಕ ರಾಜ್ಯ ವಿಧಾನ ಮಂಡಲದ ಎರಡೂ ಸದನಗಳ ಅಧಿವೇಶನವು ಇರದೇ ಇದ್ದುದರಿಂದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ಅಧ್ಯಾದೇಶ, 2009 ಅನ್ನು ದಿನಾಂಕ: 2-6-2009ರಂದು ಪ್ರಸ್ತಾಪಿಸಲಾಗಿದೆ.

(ಗೊಂದಲ)

ಅಧ್ಯಕ್ಷರು : ನಿಮಗೆಲ್ಲರಿಗೂ ಅವಕಾಶ ಕಲ್ಪಿಸಿಕೊಡುತ್ತೇನೆ. ಏಕೆ ಅವಸರ ಪಡುತ್ತೀರಿ? ನಿಮಗೆ ಅವಕಾಶ ಕೊಡುತ್ತೇನೆ. ಆಯಿತು, ಹಿಂದಿನ ಎರಡನೇ ಸಾಲಿನ ಆಸನಗಳಲ್ಲಿರುವವರಿಗೆ ಅವಕಾಶ ಕೊಡುತ್ತೇನೆ. ಅಮರೇಗೌಡ ಬಯ್ಯಾಪುರ್‌ರವರೆ, ನೀವೇ ಮೊದಲು ಮಾತನಾಡಿ. ಏನೇ ಹೇಳಬೇಕಿದ್ದರೂ ಹೇಳಿ. ಮಾನ್ಯ ಸಚಿವರು ತಮ್ಮ ಮಾತುಗಳನ್ನು ಮುಗಿಸಲಿ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಇದೊಂದೇ amendment ಅಲ್ಲ, comprehensive amendment ತಂದಿದ್ದಾರೆ.

ಅಧ್ಯಕ್ಷರು : ಮೊದಲು ಅವರು ಹೇಳುವುದು ಮುಗಿಯಲಿ. ನಂತರ, ಏನಾದರೂ ಸಂಶಯಗಳಿದ್ದಲ್ಲಿ, ಸರಿಪಡಿಸೋಣ. ಅವರ ವಿವರಣೆ ಮುಗಿಯಲಿ. ಏಕೆ ಅವಸರ ಪಡುತ್ತೀರಿ?

ಶ್ರೀ ಎಸ್. ಎ. ರವೀಂದ್ರನಾಥ : ಅಧ್ಯಕ್ಷರೆ, ನಾನು ಹೊಸದನ್ನು ಯಾವುದೂ ತಂದಿಲ್ಲ. ಹಿಂದೆ, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಇದರಲ್ಲಿ ಪ್ರಾವಿಜನ್ ಇರಲಿಲ್ಲ. ಈಗ ತಿದ್ದುಪಡಿ ತರುವ ಮೂಲಕ ಅವರಿಗೆ ಪ್ರಾವಿಜನ್ ಕಲ್ಪಿಸಿಕೊಟ್ಟಿದ್ದೇವೆ. ಹೆಚ್ಚಿನ ತಿದ್ದುಪಡಿಗಳೇನೂ ಇಲ್ಲ, ಇಷ್ಟೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ(ಕುಷ್ಟಗಿ) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈಗ ತಂದಿರುವ ವಿಧೇಯಕವು ಸಂಪೂರ್ಣ ವಾಗಿ ರೈತರ ವಿರೋಧಿಯಾಗಿದೆ. ಇದನ್ನು ಸಂಪೂರ್ಣವಾಗಿ ಕೈಬಿಡುವ ಕೆಲಸವಾಗಬೇಕು. ಇದರಲ್ಲಿ ಯಾವುದರ ಬಗ್ಗೆಯೂ ಚರ್ಚಿಸದೆ, ಎಲ್ಲಾ ವಿಷಯಗಳನ್ನೂ ಹಿಂದಕ್ಕೆ ತೆಗೆದುಕೊಳ್ಳಬೇಕೆಂಬುದು ನನ್ನ ಮೊದಲನೆಯ ಬೇಡಿಕೆಯಾಗಿದೆ. ವಿಧೇಯಕವನ್ನು ಸನ್ಮಾನ್ಯ ಸಚಿವರು ಹಿಂದಕ್ಕೆ ತೆಗೆದು ಕೊಳ್ಳಬೇಕು. ಏಕೆಂದರೆ, ಈಗಿನ ಸಂದರ್ಭದಲ್ಲಿ ಯಾವುದೇ ವಿಶ್ವವಿದ್ಯಾ ನಿಲಯಕ್ಕೂ ಏನೂ ತೊಂದರೆಯಾಗಿಲ್ಲ. 1963ರ ಆ್ಯಕ್ಟ್ ಪ್ರಕಾರ ಒಳ್ಳೆಯ

ರೀತಿಯಿಂದ ಆಡಳಿತ ನಡೆಸುವುದು ನಮ್ಮೆಲ್ಲರಿಗೂ ಗೊತ್ತಿದೆ. ಅದರಲ್ಲೂ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಇಡೀ ಭಾರತಕ್ಕೆ ಮಾದರಿ ಯಾಗಿರುವ ವಿಶ್ವವಿದ್ಯಾನಿಲಯವೆಂದು ಹೆಸರು ಪಡೆದಿದೆ. ಅದಕ್ಕೋಸ್ಕರ, ಈ ವಿಧೇಯಕವನ್ನು ತರುವ ಅವಶ್ಯಕತೆಯಿಲ್ಲ. ಈಗ ಹೊಸದಾಗಿ ಪ್ರಾರಂಭಿಸ ಬೇಕಾಗಿರುವ ಎರಡು ವಿಶ್ವವಿದ್ಯಾನಿಲಯಗಳ ಕುರಿತು ನಾವು ಸ್ವಾಗತಿಸುತ್ತೇವೆ. ಈಗಿರುವ ಧಾರವಾಡ ಮತ್ತು ಬೆಂಗಳೂರಿನ ವಿಶ್ವವಿದ್ಯಾ ನಿಲಯಗಳೇನಿವೆ, ಆ್ಯಕ್ಟ್ ಅನ್ನು ಅಲ್ಲಿ ಜಾರಿಗೊಳಿಸಿದರೆ ನಾವು ಯಾರೂ ಮಾತನಾಡುವು ದಿಲ್ಲವೆಂದು ನನ್ನ ಅನಿಸಿಕೆಯನ್ನು ವ್ಯಕ್ತಪಡಿಸುತ್ತೇನೆ.

ಒಳ್ಳೆಯ ರೀತಿಯಿಂದ ಮತ್ತು ಎಲ್ಲಾ ರೈತ ಪ್ರತಿ ನಿಧಿಗಳನ್ನು ಒಳಗೊಂಡಿರುವ Board of Regents ಏನಿದೆ, ಅದನ್ನು Board of Management ಎಂದು ಅವರು ಮಾಡಿಕೊಂಡಿದ್ದಾರೆ. ಅದರಲ್ಲಿ Management ಎಂಬುದನ್ನು ತೆಗೆದು ಹಾಕಬೇಕು ಮತ್ತು ಮೊದಲಿದ್ದಂತೆ Regents ಎಂಬುದನ್ನೇ ಮುಂದುವರೆಸಬೇಕು. ಸನ್ಮಾನ್ಯ ಸಚಿವರು ಮಾತನಾಡುತ್ತಾ, ನಾವು Board of Management ಎಂದು ಮಾಡಿ, Board of Regents ಎಂಬುದನ್ನು ತೆಗೆದು ಹಾಕಿದ್ದೇವೆಂದರು. 1963 ಆ್ಯಕ್ಟ್‌ನಲ್ಲಿ ಅವರಿಗೆ ಏನು ತೊಂದರೆಯಾಗಿದೆ? ಸರ್ಕಾರಕ್ಕೆ ಏನು ತೊಂದರೆಯಾಗಿದೆ? ಇದರಿಂದ ನಮ್ಮ ಮಕ್ಕಳಿಗೆ, ಜನರಿಗೆ ಏನಾದರೂ ತೊಂದರೆಯಾಗುತ್ತದೆಯೇ ಎಂಬುದನ್ನು ಸನ್ಮಾನ್ಯ ಸಚಿವರು ಹೇಳಬೇಕಾಗುತ್ತದೆ.

ಇನ್ನು ಈ Model Act ಇಂಡಿಯಾದಲ್ಲಿ ಎಲ್ಲಿಯೂ ಇಲ್ಲ. ಇದನ್ನು ಪ್ರಥಮವಾಗಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಅಳವಡಿಸಲಾಗಿದೆ. 1995ರಲ್ಲಿ ಈ ಆ್ಯಕ್ಟ್ ತರಬೇಕೆಂದು insist ಮಾಡಲಾಗಿತ್ತು. ಆದರೆ, ಇದುವರೆಗೂ ಯಾವುದೇ ರಾಜ್ಯದಲ್ಲೂ ಜಾರಿಗೊಳಿಸಿಲ್ಲ. ನಮ್ಮ ಕರ್ನಾಟಕದಲ್ಲಿ ಯಾವುದೇ ಸರ್ಕಾರ ಕೂಡ ಇದನ್ನು ಕೈಗೆತ್ತಿಕೊಂಡಿಲ್ಲ. ಈಗಿನ ಸರ್ಕಾರವು ಬೆಳಗಾಂ ಅಧಿವೇಶನದಲ್ಲಿ ಈ ಕುರಿತಾದ ವಿಧೇಯಕ ಮಂಡಿಸಿದ ಸಂದರ್ಭದಲ್ಲಿ ಅದನ್ನು ಎಲ್ಲರೂ ಸಂಪೂರ್ಣವಾಗಿ ವಿರೋಧಿಸಿದಾಗ ಮುಂದೂಡಲಾಗಿತ್ತು. ಆದರೆ, ಪುನಃ ಈ ವಿದೇಯಕವನ್ನು ತರುವ ಅವಶ್ಯಕತೆ ಇರಲಿಲ್ಲ. ಇವತ್ತು ತಾವು ಯಾವ ಉದ್ದೇಶದ ಯಾವ ಹಿನ್ನೆಲೆಯಲ್ಲಿ ತಂದಿದ್ದೇರೆಂಬುದನ್ನು ಉತ್ತರಿಸುವಾಗ ತಿಳಿಸಬೇಕಾಗುತ್ತದೆ. 1963ರ ಆ್ಯಕ್ಟ್ ಪ್ರಕಾರ Board of

Regents ಇರುವ ಸಂದರ್ಭದಲ್ಲಿ ಆಡಳಿತ ಮಂಡಳಿಯಲ್ಲಿ 13 ಜನ ಸದಸ್ಯರು, 6 ಜನ ರೈತ ಪ್ರತಿನಿಧಿಗಳು ಮತ್ತು 6 ಜನ ಅಧಿಕಾರಿಗಳು ಮತ್ತು ಇನ್ನೊಬ್ಬರು ಸರ್ಕಾರದ ಪ್ರತಿನಿಧಿ. ಆದರೆ, ಈಗ ಮಾಡಿರುವ ಬದಲಾವಣೆ ಏನೆಂದರೆ, ಇವರು 16 ಜನರನ್ನು ನೇಮಿಸಿ, ಅದರಲ್ಲಿ ಕೇವಲ 6 ಜನ ರೈತರನ್ನೊಳಗೊಂಡಂತೆ 10 ಜನ ಅಧಿಕಾರಿಗಳಿದ್ದಾರೆ. ಇದು ಪ್ರಜಾಪ್ರಭುತ್ವಕ್ಕೆ ವಿರೋಧಿಯಾಗಿರುವ ಕಾನೂನು ಎಂದು ನಾನು ಹೇಳಬೇಕಾಗುತ್ತದೆ. ಈ ಆರು ಜನರಲ್ಲಿಯೂ 3 ಜನರು ರೈತ ಪ್ರತಿನಿಧಿಗಳು. ಮತ್ತು ಈ 3 ಜನರು ಅವರಿಗೆ ಬೇಕಾದವರು. ವೈಸ್ ಚಾನ್ಸಲರ್‌ರವರು ಯಾರನ್ನು ನಾಮಿನೇಟ್ ಮಾಡುತ್ತಾರೋ, ಅವರು ಮಾತ್ರ ಇರುತ್ತಾರೆ. ಆಡಳಿತ ಮಂಡಳಿಯಲ್ಲಿ ಎಂತಹವರು ಇರುತ್ತಾರೆಂದರೆ, ವಿಶ್ವವಿದ್ಯಾನಿಲಯ ದಲ್ಲಿರುವ Dean ಒಬ್ಬರು ಆಡಳಿತ ಮಂಡಳಿಯ ಸದಸ್ಯರಾಗಿರುತ್ತಾರೆ ಮತ್ತು Education Director ಎಂದು ಯಾರನ್ನು ವಿ.ಸಿ.ಯವರು ನೇಮಿಸಿರುತ್ತಾರೋ, ಅವರು ಕೂಡ ಒಬ್ಬ ಸದಸ್ಯರಾಗಿರುತ್ತಾರೆ. ವಿ.ಸಿ. ಕೂಡ ಅವರ ಅಧ್ಯಕ್ಷರಾಗಿರುತ್ತಾರೆ.

ಇವತ್ತು ಇದೆಲ್ಲವನ್ನೂ ನೋಡಿದರೆ ಈ ಸರ್ಕಾರಕ್ಕೆ ಅಧಿಕಾರಿಗಳು ಹೇಳಿ ಮಾಡಿಸಿರುವ ವಿಧೇಯಕವೆಂದು ನನಗೆ ತಿಳಿದು ಬರುತ್ತದೆ. ಆ ನಂತರ, ಮೂರು ಜನರು ನಾನು ಹೇಳಿದಂತೆ ವಿ.ಸಿ.ಯವರ ಇಚ್ಛಾನುಸಾರ ಗೊಳಪಟ್ಟಿರುವ ಸದಸ್ಯರಾಗಿರಬೇಕು. ಅದಕ್ಕೋಸ್ಕರ, ದಯವಿಟ್ಟು ಅದನ್ನು ಗಮನಿಸಬೇಕು. ಮಂಡಳಿಯ ಸಭೆ ನಡೆಯಬೇಕಾದರೆ, ಇವತ್ತು ಯಾವುದಾದರೊಂದು ಪಂಚಾಯತ್ ಸಭೆ ನಡೆಯಬೇಕಾದರೆ ಶೇಕಡಾ 50ರಷ್ಟು ಕೋರಂ ಇರಬೇಕೆಂದು ಹೇಳುತ್ತೇವೆ. ಆದರೆ, ಇಲ್ಲಿ ಏನು ಹೇಳುತ್ತಾರೆಂದರೆ, ಈ ಮೊದಲು 2/3 ಮೆಜಾರಿಟಿ ಇರಬೇಕೆಂದು ಇದ್ದುದನ್ನು ಇವರು 1/3 ಮೆಜಾರಿಟಿ ಇದ್ದರೆ ಸಾಕು ಎನ್ನುತ್ತಾರೆ ಇದು ಹೇಗೆಂದು ನನಗೆ ಅರ್ಥವಾಗುವುದಿಲ್ಲ. ಬರೀ ನಾಲ್ಕು ಜನ ಅಧಿಕಾರಿಗಳು ಸೇರಿದರೆ ಸಾಕು, ಸಭೆ ನಡೆಸುತ್ತಾರೆ. ಆದುದರಿಂದ, ಇದನ್ನು ಗಮನಿಸಬೇಕಾಗುತ್ತದೆ. ಈ ಶಿಫಾರಸ್ಸುಗಳನ್ನು ಮಾಡಿರುವುದು ಅಥವಾ ಮಂಡಳಿ ಸಭೆ ನಡೆದಾಗ ಅದು ಹಿಂದೆ ಇರಬಹುದು ಒಂದು ಸಲ ಕೋರಂ ಇಲ್ಲದಿದ್ದರೆ, ಎರಡನೇ ಸಲ ಸಭೆ ಸೇರಿದಾಗ ಕೋರಂ ಇಲ್ಲದಿದ್ದರೂ ಎಲ್ಲಾ ವಿಷಯಗಳಲ್ಲೂ ಅಪ್ರೂವ್ ಮಾಡುವ ಒಂದು ಆದೇಶವನ್ನು ಇದರಲ್ಲಿ ಸೇರಿಸಿದ್ದಾರೆ.

ಇನ್ನು ಸಂಶೋಧನಾ ವಿಷಯದಲ್ಲಿ ಸಂಶೋಧನಾ ಪರಿಷತ್ತಿಗೆ ಸಂಶೋಧನಾ ಇಲಾಖೆಯಲ್ಲಿ ಯಾರು ನಿರ್ದೇಶಕರಾಗಿರುತ್ತಾರೋ, ಅವರು ಮಾತ್ರ ಅಧ್ಯಕ್ಷರಾಗಬೇಕೆಂದಿದೆ. ಆದರೆ, ಇದರಲ್ಲಿ ಕುಲಪತಿಯವರೇ ಅಧ್ಯಕ್ಷರಾಗಬೇಕೆಂದು ಸೇರಿಸಿದ್ದಾರೆ. ಇನ್ನು ಇದರಲ್ಲಿ ಸಾಕಷ್ಟು ನ್ಯೂನತೆಗಳಿದ್ದರೂ ಕೆಲವೇ ಕೆಲವನ್ನು ತಮ್ಮ ಮುಂದೆ ಮಂಡಿಸುತ್ತಿದ್ದೇನೆ. ಈ ವಿಷಯ ಈಗಾಗಲೇ ಕೋರ್ಟ್‌ನಲ್ಲಿರುವುದರಿಂದ ಸರ್ಕಾರ ಇದನ್ನು ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲ. ಆದರೂ ಕೈಗೆತ್ತಿಕೊಳ್ಳುವುದು ತಪ್ಪು. ಇದಲ್ಲದೆ, ರೈತ ಪ್ರತಿನಿಧಿಯಾದವರು ಸರ್ಕಾರದಿಂದ ಒಂದು ಸಲ ನಾಮ ನಿರ್ದೇಶನ ಹೊಂದಿದಲ್ಲಿ, ಅವರನ್ನು ಕುಲಪತಿಗಳು ಬೇಡವೆಂದರೆ ಆರು ತಿಂಗಳಲ್ಲಿ ಅವರು ಮನೆಗೆ ಹೋಗಬೇಕು. ಈ ಕಾನೂನಿನಲ್ಲಿ ಸರ್ಕಾರಕ್ಕೆ ಯಾವುದೇ ಅಧಿಕಾರವಿಲ್ಲ. ಕುಲಪತಿಗಳಿಗೆ ಬೇಡವೆಂದರೆ ಅವರನ್ನು ವಾಪಸ್ಸು ಕರೆಸಿಕೊಳ್ಳಬೇಕು ಅಥವಾ ಒಮ್ಮೆ ನಾಮಿನೇಟ್ ಹೊಂದಿರುವ ಸದಸ್ಯರನ್ನು ಒಂದು ವರ್ಷವಾಗಲಿ, ಆರು ತಿಂಗಳಾಗಲಿ, ಮೂರು ವರ್ಷವಾಗಲಿ, ಮುಂದಿನ ಅವಧಿಗೆ ಅವರು ನಾಮಿನೇಶನ್ ಆಗುವಂತಿಲ್ಲ. ಇದು ಯಾವ ನ್ಯಾಯ? ಹಾಗಾದರೆ, ಇಲ್ಲಿರುವ ಎಲ್ಲಾ ಶಾಸಕರು ಒಮ್ಮೆ ಶಾಸಕರಾದ ಬಳಿಕ ಮತ್ತೊಮ್ಮೆ ಶಾಸಕರಾಗಬಾರದೆಂದು ನಿಯಮವೊಂದನ್ನು ಜಾರಿಗೆ ತರಬೇಕು. ಏಕೆಂದರೆ, ಇದು ಬಹಳ ಉಗ್ರವಾಗಿರುವಂಥದ್ದು. ರೈತ ಪ್ರತಿನಿಧಿಗಳ ಮೇಲೆ ಬಹಳ ಅನ್ಯಾಯ ಮಾಡುವ ಕೆಲಸವನ್ನು ಅಧಿಕಾರಿಗಳು ಹೇಳಿದಂತೆ ಈ ಕಾನೂನು ರಚಿಸಲಾಗಿದೆ. ಆದುದರಿಂದ, ಇದನ್ನು ಸಂಪೂರ್ಣವಾಗಿ ನಾನು ವೈಯಕ್ತಿಕವಾಗಿ ವಿರೋಧಿಸುತ್ತೇನೆ. ಇದನ್ನು ಹಿಂದಕ್ಕೆ ಪಡೆಯಬೇಕೆಂದು ಸರ್ಕಾರದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ನಾರಾಯಣಸ್ವಾಮಿ (ಬಂಗಾರಪೇಟೆ) : ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷಿ ಸಚಿವರು ತಂದಿರುವ ಈ ತಿದ್ದುಪಡಿಯನ್ನು ನಾನು ವಿರೋಧ ಮಾಡುತ್ತೇನೆ. ಇದು ರೈತರಿಗೆ ಅನ್ಯಾಯವಾಗತಕ್ಕ ವಿಧೇಯಕ, ರೈತರಿಗೆ ಮೋಸ ಮಾಡುವ ಕೆಲಸವಾಗುತ್ತಿದೆ. ಇಲ್ಲೂ ಬ್ಯೂರೋಕ್ರಸಿ ಕೆಲಸ ಮಾಡುತ್ತಿದೆ. ಈ ಮೊದಲು 1963ರ Act ಏನಿತ್ತು ಅದರಲ್ಲಿ ಐ.ಎ.ಎಸ್. ಮತ್ತು ವಿ.ಸಿ. ಸೇರಿಕೊಂಡು 5 ಜನರಿದ್ದರು. ಈಗ ಐ.ಎ.ಎಸ್. Officers, Composition of Board of Managementನವರು ಸೇರಿಕೊಂಡು Professorಗೆ 33%, ಆಮೇಲೆ farmer communityಗೆ 46%ಗೆ 26%

ಬರುತ್ತಿದೆ. ಇವತ್ತು ರೈತರಿಗೆ ಅನುಕೂಲವಾಗದ, ರೈತರ ವಿರುದ್ಧವಿರುವ ಈ ವಿಧೇಯಕವನ್ನು ದಯಮಾಡಿ ಪಾಸ್ ಮಾಡಬಾರದು. ಕಾರಣ ಅದರಲ್ಲಿ ಅನೇಕ ತಾರತಮ್ಯ ಇದೆ. ಇದರ ಬಗ್ಗೆ ಅರ್ಧ ದಿವಸ ಚರ್ಚೆ ಮಾಡಿ ಮುಂದಿನ ಅಧಿವೇಶನದಲ್ಲಿ ಮಂಡಿಸಬಾರದು. 1963ರ Act ಇದ್ದರೆ ರೈತರಿಗೆ ಅನುಕೂಲವಾಗುತ್ತದೆ. ಯಾವುದೇ ತೊಂದರೆಯಾಗುವುದಿಲ್ಲ. ಇಲ್ಲದಿದ್ದರೆ ಬ್ಯೂರೋಕ್ರಸಿಯವರು ತಮ್ಮ ಸಂಖ್ಯೆಯನ್ನು ಹೆಚ್ಚಿಸಿಕೊಂಡು ಕೋರಂನ್ನು ಕಡಿಮೆ ಮಾಡುವುದು ಸಹ ನಡೆಯುತ್ತಿದೆ. ದಯವಿಟ್ಟು ಇದರ ಬಗ್ಗೆ ಸುದೀರ್ಘವಾಗಿ ಪರ್ಯಾಲೋಚನೆ ಮಾಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು) : ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ಕೃಷಿ ಸಚಿವರು ಮಂಡಿಸುವಾಗ Indian Council of Agriculture Research (ICAR) ಬಗ್ಗೆ ರೆಫರ್ ಮಾಡಿದರು. ಈ ಐ.ಸಿ.ಎ.ಆರ್. ರವರು Government of India ದಲ್ಲಿ ಏನು suggestion ಕೊಟ್ಟಿದ್ದಾರೆ, ನನಗೆ ತಿಳಿದ ಮಟ್ಟಿಗೆ, it is under the consideration of Government of India. ಅದು ಅಲ್ಲಿ consider ಆಗಿಲ್ಲ. ಕೇಂದ್ರದ ಕೃಷಿ ಸಚಿವರಾದ ಶ್ರೀ ಶರದ್‌ಪವಾರ್ ರವರು ಇದ್ದು ಅವರ ರಾಜ್ಯವಾದ ಮಹಾರಾಷ್ಟ್ರದಲ್ಲೇ ಇದು ಇನ್ನು implement ಆಗಿಲ್ಲ. ಈ ಐ.ಸಿ.ಎ.ಆರ್.ನ್ನು ರೆಫರ್ ಮಾಡಿ ಇವತ್ತು ಈ ಕಾಯಿದೆಗೆ ಸಮಗ್ರವಾಗಿ ತಿದ್ದುಪಡಿಯನ್ನು ತರಲು ಹೊರಟಿದ್ದಾರೆ. ಇದರಲ್ಲಿ ಮೂಲಭೂತವಾಗಿ ಅಧಿಕಾರಿಗಳು ತಮ್ಮ ಬಲವನ್ನು ಹೆಚ್ಚಿಸಿಕೊಂಡು non-officials ನ್ನು ಕಡಿಮೆ ಮಾಡುವುದಕ್ಕೆ ಅವಕಾಶ ಮಾಡಿದ್ದಾರೆ. ಅದರಲ್ಲೂ ರೈತರು, non-officials ಯಾರೂ ಇರಬಾರದು ಎಂದು 6 ಮತ್ತು 6 ಇದ್ದದನ್ನು 15 ಮತ್ತು 6 ಕ್ಕೆ ತಂದಿದ್ದಾರೆ. ನೀವು ಅಧಿಕಾರಿಗಳನ್ನು 6 ಬಿಟ್ಟು 10 ಮಾಡಿಕೊಳ್ಳಿ. ಅದರ ಜೊತೆಗೆ ರೈತರನ್ನೂ 10 ಮಾಡಿ. ಅದಕ್ಕೆ ನಮ್ಮ ತಕರಾರೇನಿಲ್ಲ. ಇಲ್ಲದಿದ್ದರೆ ಈ ಮೊದಲು ಏನು 1963 ರ Act ನಲ್ಲಿತ್ತು ಅದನ್ನಾದರು maintain ಮಾಡಿ. ಮೊದಲು ಇದ್ದ Act ನಲ್ಲಿ ಕಾರ್ಯದರ್ಶಿ ಅಥವಾ ಜಂಟಿ ಕಾರ್ಯದರ್ಶಿಗಿಂತ ಕಡಿಮೆ ಇಲ್ಲದ ಅಧಿಕಾರಿ ಎಂದು ಇತ್ತು. ಅಲ್ಲಿ ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಥವಾ ಕಾರ್ಯದರ್ಶಿಗಳು ಅಥವಾ ಇಲಾಖೆ ಅಥವಾ ಉಪಕಾರ್ಯದರ್ಶಿಗಳು ಎಂದು ಮಾಡಿದ್ದಾರೆ. ಅಂದರೆ ಜಂಟಿ

ಕಾರ್ಯದರ್ಶಿಗಳು ತೆಗೆದು ಉಪಕಾರ್ಯ ದರ್ಶಿಗಳನ್ನು ಮಾಡುತ್ತಾರೆ. ಉಪಕಾರ್ಯದರ್ಶಿಗಳು ಅಲ್ಲಿ ಹಿರಿಯ ಅಧಿಕಾರಿಗಳ ಮುಂದೆ ಮಾತನಾಡು ವಂತಿಲ್ಲ, ನೋಡುವಂತಿಲ್ಲ. ಈ ಹಿಂದಿನ ದಾಖಲೆಗಳನ್ನು ನೋಡಿದರೆ ಈ ಅಧಿಕಾರಿಗಳು ಎಂದಿಗೂ ಹೋಗಿಲ್ಲ. ಹೋಗುವುದೂ ಇಲ್ಲ. ಯಾವಾಗ ಅವಶ್ಯಕತೆ ಇರುತ್ತದೋ ಅವತ್ತು ಹೋಗಿ ಮಾಡಿ ಮುಗಿಸಿಬರುತ್ತಾರೆ. ಆ ರೀತಿಯಾಗಿ ಅವರನ್ನು 15 ಮತ್ತು 6 ಮಾಡುವುದ ಬದಲು ನಮ್ಮನ್ನಾದರೂ ಕಳುಹಿಸಿದರೆ ನಾವು ಅಲ್ಲಿ ಹೋಗಿ ಚರ್ಚೆಯಾದರು ಮಾಡುತ್ತೇವೆ. ಡೀನ್ ಮತ್ತು ಇತರ ಹಿರಿಯ ಅಧಿಕಾರಿಗಳನ್ನು ಆಡಳಿತ ಮಂಡಳಿಯವರೇ ನೇಮಕ ಮಾಡುತ್ತಾರೆ. ಅಂತವರನ್ನು ಮತ್ತೆ ಅದರ ಸದಸ್ಯರನ್ನಾಗಿ ಮಾಡುತ್ತಾರೆ. ಯಾರು ಆಡಳಿತ ಮಂಡಳಿಯಿಂದ ನೇಮಕವಾಗಿದ್ದಾರೆ ಅವರು ಆಡಳಿತ ಮಂಡಳಿಯಲ್ಲಿ ಅದಸ್ಯರಾಗಿ ಬಂದು ಕುಳಿತುಕೊಳ್ಳುವುದು ಎಷ್ಟು ಸಮಂಜಸ? ಎಜಿಸ್ಟ್ರಾರ್ ಇರಬಹುದು, ಡೀನ್ ಇರಬಹುದು ಅವರೆಲ್ಲಾ appointed by the Board. ಆ ರೀತಿ ಬೋರ್ಡ್‌ನಲ್ಲಿ appoint ಆಗಿರುವವರೇ ಮತ್ತೆ ಇಲ್ಲಿ Member ಮಾಡುವುದಕ್ಕೆ ಅವಕಾಶ ಮಾಡಿದ್ದಾರೆ. ಈ ರೀತು ಹತ್ತು ಹಲವು ನ್ಯೂನತೆಗಳಿದೆ. ಕರ್ನಾಟಕ ಕೃಷಿ ವಿಶ್ವವಿದ್ಯಾನಿಲಯಗಳ ಅಧಿನಿಯಮ 63ರ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಪದವನ್ನು ಧಾರಣ ಮಾಡುವ ವ್ಯಕ್ತಿ ಒಬ್ಬರೆ, ತಮಗಷ್ಟೆ ಇಟ್ಟುಕೊಂಡರು. ಈ ಮೊದಲು ಕುಲಪತಿಗಳು ಮತ್ತು ಆಡಳಿತ ಮಂಡಳಿ ಎಂದು ಇತ್ತು. ಆಡಳಿತ ಮಂಡಳಿಯನ್ನು ತೆಗೆದುಹಾಕಿದರು. ಏಕೆ? ಆಡಳಿತ ಮಂಡಳಿ ಇರಬಾರದೇ? ಈ ರೀತಿಯ ನ್ಯೂನತೆಗಳನ್ನು ಬೇಕಾದಷ್ಟು ಮಾಡಿದ್ದಾರೆ. ಆದ್ದರಿಂದ ಈ ವಿಧೇಯಕ ಇವತ್ತು ಏಕೆ ಮಂಡನೆಯಾಗಿದೆಯೆಂದರೆ, ಹೊಸ ಕೃಷಿ ವಿಶ್ವವಿದ್ಯಾನಿಲಯ ರಾಯಚೂರಿನಲ್ಲಿ ಆಗುತ್ತಿದೆ. ಅದಕ್ಕೆ ತಿದ್ದುಪಡಿಗಳನ್ನು ಮಾಡಬೇಕಾದ ಅವಶ್ಯಕತೆ ಇದೆ. ಅಷ್ಟಕ್ಕೇ ಬೇಕಾದರೆ ತಿದ್ದುಪಡಿಗಳನ್ನು ಮಾಡಿಕೊಳ್ಳಲಿ. ಉಳಿದ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಿ ಮಾಡಿಕೊಳ್ಳಲಿ. ಇಲ್ಲಾ ಈ ಮೊದಲು ಇದ್ದ 1964ರ Act ಪ್ರಕಾರವೇ ಮಾಡುತ್ತೇವೆಂದರೆ ನಾವೇನು ಚರ್ಚೆ ಮಾಡುವುದಿಲ್ಲ. 63ರ Act ನಲ್ಲಿ ಏನೇನು ನ್ಯೂನತೆಗಳಿವೆ, ಏಕೆ ಇದರ ಬದಲಾವಣೆಯಾಗುತ್ತಿದೆ, ಇಂಥ ಕಾರಣಕ್ಕೆ ಇದನ್ನು ತಿದ್ದುಪಡಿ ಮಾಡುತ್ತಿದ್ದೇವೆ ಎನ್ನುವ ಬಗ್ಗೆ ಸಚಿವರು ಬೆಳಕು ಚೆಲ್ಲಬೇಕು. ಐ.ಸಿ.ಎ.ಆರ್. ಅನ್ನು ರೆಫರ್ ಮಾಡಿ ಅಧಿಕಾರಿಗಳ

ಕೈಯಲ್ಲಿ ಎಲ್ಲವನ್ನು ಮಾಡಿಸುವುದು ಎಷ್ಟು ಸಮಂಜಸ ಎಂಬ ಬಗ್ಗೆ ಯೋಚನೆ ಮಾಡಬೇಕು. ಈ ನಿಟ್ಟಿನಲ್ಲಿ ಇದರ ಬಗ್ಗೆ ಇನ್ನೊಂದು ಸಲ ಆಲೋಚನೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ (ಶಿರಾ) : ಮಾನ್ಯ ಅಧ್ಯಕ್ಷರೆ, ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾನಿಲಯ ವಿಧೇಯಕವನ್ನು ಮಾನ್ಯ ಸಚಿವರು ಸದನದ ಒಪ್ಪಿಗೆಗೋಸ್ಕರ ಮಂಡಿಸಿದ್ದಾರೆ. ಅವರು ಮಂಡಿಸುವಾಗ ಯಾವ ಉದ್ದೇಶಕ್ಕೋಸ್ಕರ ಈ ಮಸೂದೆಯನ್ನು ಮಂಡನೆ ಮಾಡಿದ್ದೇವೆಂದು ಹೇಳುವಾಗ ಅವರು ಆಧರಿಸಿರತಕ್ಕದ್ದು ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನವರು 9–2–1995 ರಂದು ಒಂದು ಮಾದರಿ ಕೃಷಿ ವಿಶ್ವವಿದ್ಯಾನಿಲಯ ವಿಧೇಯಕವನ್ನು ಕಳುಹಿಸಿಕೊಟ್ಟಿದೆ. 15 ವರ್ಷಗಳ ಹಿಂದೆ ಇದನ್ನು ಕಳುಹಿಸಿಕೊಟ್ಟಿದೆ. 2008ರಲ್ಲಿ ಒಂದು ಪರಿಷ್ಕೃತ ಮಾದರಿಯನ್ನೂ ಕಳುಹಿಸಿಕೊಟ್ಟಿದೆ. ಅದನ್ನು ಆಧರಿಸಿ ಈ ವಿಧೇಯಕಕ್ಕೆ ಸದನದ ಒಪ್ಪಿಗೆಗೆ ತಂದಿದ್ದೇವೆಂದು ಹೇಳುತ್ತಾರಲ್ಲಾ, ಒಂದು ಮಾತನ್ನು ನಾನು ಮಾನ್ಯ ಸಚಿವರಲ್ಲಿ ಕೇಳಲು ಇಚ್ಛೆಪಡುತ್ತೇನೆ. ಕೃಷಿ ಸಂಶೋಧನಾ ಪರಿಷತ್ ಅದು ಒಂದು ಸಂಸ್ಥೆಯೇ? ಅದು ಯಾವ ರೀತಿಯಾದ ಸಂಸ್ಥೆ? ಅದಕ್ಕೆ ಏನಾದರು statute ಇದೆಯೇ? ಜವಾಬ್ದಾರಿಕೆ ಇದೆಯೇ? ಎನ್ನುವ ವಿಚಾರಗಳನ್ನು ನೀವು ಅರ್ಥಮಾಡಿಕೊಂಡಿದ್ದರೆ ಬಹುಶಃ ಈ ಸದನದ ಮುಂದೆ ಈ ರೀತಿಯ ತಪ್ಪು ಹೇಳಿಕೆಯನ್ನು ನೀವು ಮಾಡುತ್ತಿರಲಿಲ್ಲ. ಮಾನ್ಯ ಸದಸ್ಯರ ಗಮನಕ್ಕೆ ಒಂದು ವಿಷಯವನ್ನು ನಾನು ತರುತ್ತೇನೆ. Indian Council of Agriculture Research (ICAR) – September 23, 2008, ಅವರು ಕಳುಹಿಸಿಕೊಟ್ಟಿರುವುದು ಯಾವ ಉದ್ದೇಶಕ್ಕೋಸ್ಕರ ಅಂದರೆ: Indian Council of Agriculture Research (ICAR), New Delhi has revised the ICAR Model Act for Agriculture Universities in India. Any comments, suggestions of the Vice Chancellors of the Agricultural Universities on the revised draft are welcome and you may be communicated to the following within 15 days.

(ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅವರು Vice Chancellorಗಳನ್ನು 1995 ರಲ್ಲಿ ತಂದಿದ್ದೇವೆ, ಈ 2000 ರಲ್ಲಿ ಮಾಡಿಫೈ ಮಾಡಿ ತರಬೇಕು ಎಂದು ಉದ್ದೇಶ ಮಾಡಿದ್ದೇವೆ, ಅದಕ್ಕೆ ನಿಮ್ಮ ಕಾಮೆಂಟ್ಸ್ ಕೊಡಿಯೆಂದು ಅವರು ಕೇಳಿದರೆ ನೀವು ಕಾಮೆಂಟ್ಸ್ ಬಿಟ್ಟು ಬದಲಾವಣೆ ಮಾಡಲು ಹೊರಟುಬಿಟ್ಟಿರಿ. ಕೇಂದ್ರ ಕೃಷಿ ಸಚಿವರಾದ ಶ್ರೀ ಶರದ್ ಪವಾರ್. ಅವರು ಮಹಾರಾಷ್ಟ್ರದವರು. ಇವತ್ತು ಕೃಷಿಯಲ್ಲಿ ಕ್ರಾಂತಿಯನ್ನು ಮಾಡಿರುವಂಥ ಮಹಾರಾಷ್ಟ್ರದಂಥ ರಾಜ್ಯದಲ್ಲೇ ಈ ರೀತಿಯಾದ ವಿಧೇಯಕವನ್ನು ತರಲಿಲ್ಲ, ಪಾಸ್ ಮಾಡಲಿಲ್ಲ. ಈ ದೇಶದಲ್ಲಿ ಯಾವ ರಾಜ್ಯದಲ್ಲೂ ಈ ವಿಧೇಯಕವನ್ನು ಪಾಸ್ ಮಾಡಿದಂಥ ಸಂದರ್ಭ ಇಲ್ಲ.

ಶ್ರೀ ಬಿ.ಎಸ್.ಬಚ್ಚೇಗೌಡ : ಮಾಡಬಾರದೆಂದೂ ಸಹ ಇಲ್ಲ.

ಶ್ರೀ ಟಿ.ಬಿ.ಜಯಚಂದ್ರ : ತಮ್ಮ ಬಾಯಿಯಲ್ಲಿ ಈ ರೀತಿ ಮಾತು ಬರಬಾರದು. ಅವರು ನಿಮಗೆ ಇದರ ಬಗ್ಗೆ ಸಲಹೆಗಳನ್ನು ಕೊಡಿಯೆಂದು ಕೇಳಿದರೆ ವಿನಹಃ ವಿಧೇಯಕ ಮಾಡಿ ಎಂದಿಲ್ಲ. ಈ ವಿಧೇಯಕದಿಂದ ಲಾಭವೇನು ಎನ್ನತಕ್ಕದ್ದು, ನಾನೂ ಕೃಷಿ ಸಚಿವನಾಗಿದ್ದಾಗ ಇದೇ ಸಮಸ್ಯೆ ನಮ್ಮ ಮುಂದೆ ಬಂತು. ಆ ಸಂದರ್ಭದಲ್ಲೂ ಕೂಡ ವಿಶ್ವವಿದ್ಯಾನಿಲಯದ ಅಧಿಕಾರಿಗಳು ನಾವು New model Act ಪ್ರಕಾರ ಪಾಸ್ ಮಾಡಿಬಿಟ್ಟರೆ ನೂರಾರು ಕೋಟಿ ಹಣ ಬರುತ್ತದೆ ಎನ್ನತಕ್ಕ ರೀತಿಯಲ್ಲಿ ಮಾಹಿತಿ ಹೇಳಿದ್ದರು. ನಾವಿದ್ದಾಗ ಆ ರೀತಿ ಇತ್ತು. ಆದರೆ, ನಿಮ್ಮ ಕಾಲದಲ್ಲಿ ನೂರಾರು, ಸಾವಿರಾರು ಕೋಟಿ ಬರುವಂತಿದ್ದರೆ, ನಾವು ಇದುವರೆಗೆ ಐ.ಸಿ.ಎ.ಆರ್. ನಿಂದ ನಮಗೆ ಕೊಟ್ಟಿರುವ ಹಣದ ಪ್ರಮಾಣ 5–6 ಕೋಟಿ ಮೀರುವುದಿಲ್ಲ. ಅದೇ ಇನ್ನು ಅಂತಿಮ ತೀರ್ಮಾನವಾಗಿಲ್ಲ, ಆದರೆ, ನೀವು ಆಗಲೇ ಬದಲಾವಣೆ ಮಾಡುವುದಕ್ಕೆ ಹೊರಟಿದ್ದೀರಲ್ಲಾ? ನಿಮ್ಮ ಹಳೆಯ Act 1963 ಏನಿತ್ತು ಒಳ್ಳೆಯ ರೀತಿಯಿಂದ ಚರ್ಚೆ ಮಾಡಿ. ನಾವು ಕೃಷಿಯಲ್ಲಿ, ಇವತ್ತು ಕೃಷಿ ವಿಶ್ವವಿದ್ಯಾನಿಲಯ ಸಾಕಷ್ಟು ರೀತಿಯಲ್ಲಿ ಪ್ರಗತಿ ಮಾಡುವುದಕ್ಕೆ ಸಾಧ್ಯವಾಗಿದೆ.

ಅದು ಕೇವಲ ವಿಶ್ವವಿದ್ಯಾನಿಲಯಗಳಲ್ಲಿ ಬೋಧನೆಯಲ್ಲ, extension ಕೂಡ ಇದೆ, ಸಂಶೋಧನೆಗೂ ಕೂಡ ಇದೆ. ಅದೆಲ್ಲವನ್ನೂ ಕೂಡ ಸಮರ್ಪಕವಾಗಿ ಮಾಡಿಕೊಂಡು ಇವತ್ತು ಧಾರವಾಡ ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯ ಇಡೀ ರಾಷ್ಟ್ರದಲ್ಲಿ No.1

ಮತ್ತು 2ನೇ ಸ್ಥಾನದಲ್ಲಿ ಇರತಕ್ಕ ವಿಶ್ವವಿದ್ಯಾನಿಲಯಗಳಾಗಿವೆ. ಆದರೆ ಇವತ್ತು ಆ ವಿಶ್ವವಿದ್ಯಾನಿಲಯಗಳ Act ನಲ್ಲಿ ನೀವು ಬದಲಾವಣೆ ಮಾಡಬೇಕೆಂದು ಹೊರಟಿದ್ದೀರಿ. ಇದು ಇವತ್ತೇನಲ್ಲ, ಈಗಾಗಲೇ ಸುಮಾರು 4–5 ತಿಂಗಳು ಗಳಿಂದ ಈ Act ಅನ್ನು ತರಬೇಕು ಅನ್ನುವಂತಾದ್ದು ಇತ್ತು. ಅದರ ಉದ್ದೇಶ ಏನು ಎನ್ನುವಂಥಾದ್ದು ಎಲ್ಲರಿಗೂ ಗೊತ್ತಿದೆ, ಈಗಾಗಲೇ ಬೆಳಗಾಂನಲ್ಲಿ ಅದನ್ನು ಮಂಡನೆ ಮಾಡಿದ್ದೀರಿ. ಮಂಡನೆ ಮಾಡಿ ಅಲ್ಲಿ ಪಾಸ್ ಆಗುವುದಿಲ್ಲ. ಇವತ್ತು ಇಲ್ಲಿ ತಂದಿದ್ದೀರಿ. ದಯಮಾಡಿ ತಾವು ತಮ್ಮ ಯಾವುದಾದರೂ ವಿಧೇಯಕವನ್ನು ತಂದಾಗ, ಅದರಲ್ಲೂ ಕೃಷಿಗೆ ಸಂಬಂಧಪಟ್ಟ, ಸಂಶೋಧನೆಗೆ ಸಂಬಂಧಪಟ್ಟ, ವಿಶ್ವವಿದ್ಯಾನಿಲಯದ ಒಂದು ಸಮಗ್ರವಾದಂತಹ ವಿಧೇಯಕವನ್ನು ತರಬೇಕಾದಾಗ, ಅದನ್ನು ಸಾರ್ವಜನಿ ಕವಾಗಿ ಯಾವ ರೀತಿಯಾಗಿ ಜನ receive ಮಾಡಿದ್ದಾರೆ ಎನ್ನುವುದನ್ನು ನೋಡಬೇಕಾಗುತ್ತದೆ. ಈ ಬಗ್ಗೆ ನಾನು ಹೆಚ್ಚು ಹೇಳತಕ್ಕಂಥ ಅವಶ್ಯಕತೆಯಿಲ್ಲ ಎಂದು ಭಾವನೆ ಮಾಡಿದ್ದೇನೆ. ಆದರೂ ಕೂಡ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ನಮ್ಮಲ್ಲಿ ಕೃಷಿ ತಜ್ಞರಿದ್ದಾರೆ, ಪರಿಣಿತರಿದ್ದಾರೆ, ಕೃಷಿ ವಿಜ್ಞಾನಿಗಳಿದ್ದಾರೆ. ಕರ್ನಾಟಕದಲ್ಲಿ ಕೃಷಿಗೋಸ್ಕರ ತ್ಯಾಗ ಮಾಡಿರತಕ್ಕಂಥ ಜನ ಒಬ್ಬರಲ್ಲ, ನೂರಾರು ಜನ ಇರತಕ್ಕದ್ದನ್ನು ನಾವು ನೋಡಿದ್ದೇವೆ. ಇವತ್ತು ಕೃಷಿ ಎನ್ನತಕ್ಕದ್ದು ನಾವು ತಿಳಿದುಕೊಂಡಷ್ಟು ಸುಲಭವಾದಂತಹ subject ಅಲ್ಲ. ಕೃಷಿಯಲ್ಲ ಕ್ರಾಂತಿಯಾಗಬೇಕಾಗಿರತಕ್ಕಂಥ ಹಿನ್ನೆಲೆಯಲ್ಲಿ, ಪ್ರಸಕ್ತ ಸಂದರ್ಭದಲ್ಲಿ ಇವತ್ತು ಕೃಷಿ ಯಾವ ಮಟ್ಟಕ್ಕೆ ಹೋಗಿದೆ ಎಂದು ನೋಡಬೇಕಾಗಿದೆ. ನಮ್ಮ Agriculture production ಇವತ್ತು ಯಾವ ನಾಗಾಲೋಟದಲ್ಲಿ ಬೆಳೆಯಬೇಕಾಗಿತ್ತೋ, ಆ ವೇಗದಲ್ಲಿ ಅದು ಬೆಳೆಯುತ್ತಿಲ್ಲ. ಅದಕ್ಕೆ ಕಾರಣಗಳು ಏನೇ ಇದ್ದರೂ ಕೂಡ, ಇವತ್ತು University ಅದಕ್ಕೆ ಮೂಲಾಧಾರವಾಗಿದೆ. ಇದೆಲ್ಲವನ್ನೂ ಕೂಡ assess ಮಾಡಬೇಕಾದಾಗ ಇವತ್ತು ಆ ವಿಶ್ವವಿದ್ಯಾನಿಲಯಗಳದ್ದೂ ನೋಡಬೇಕಾಗುತ್ತದೆ. ವಿಶ್ವವಿದ್ಯಾನಿಲ ಯಗಳಲ್ಲಿ ಏನಾದರೂ ತಪ್ಪಿದ್ದು, ಅದರಲ್ಲಿ ಏನಾದರೂ ಸಮಗ್ರ ಬದಲಾವಣೆ ಮಾಡುವುದರಿಂದ ಕೃಷಿಗೆ ಸಹಾಯವಾಗುತ್ತದೆ ಎನ್ನುವುದಾದರೆ ಅದನ್ನು ನಾನೂ ಕೂಡ ಒಪ್ಪುತ್ತಿದ್ದೆ. ಹಳೆಯ Act ನ್ನು ತಲೆ ಮೇಲೆ ಹೊತ್ತಿಕೊಳ್ಳಬೇಕು ಎನ್ನತಕ್ಕಂಥ ಪ್ರಶ್ನೆಯಲ್ಲ. ಇವತ್ತು ಹೊಸ Act ನಲ್ಲಿ ಮಾಡಿರತಕ್ಕಂಥದ್ದು ಏನಿದೆ ಎಂಬ ಬಗ್ಗೆ ಒಂದೆರಡು ಮಾತನ್ನು ಹೇಳುತ್ತೇನೆ.

'ಕೃಷಿ ವಿಶ್ವದ್ಯಾನಿಲಯದ ವಿಧೇಯಕ: ರೈತರ ಕಂಗೆಣ್ಣು' ಇದು ಬೆಳಗಾಂನಲ್ಲಿ ಬಿಲ್ ಮಂಡನೆಯಾದಂತಹ ಸಂದರ್ಭದಲ್ಲಿ ಪತ್ರಿಕೆಯಲ್ಲಿ ಬಂದಂತಹ ಒಂದು comment. ಎಲ್ಲಾ ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನ ಓದಿ ಹೇಳಬೇಕಾದರೆ ಸಮಯವಾಗುತ್ತದೆ. ಬಹುಶಃ ನಿಮಗೆಲ್ಲಾ ಅದು ಗೊತ್ತಿರುತ್ತದೆ, ಗೊತ್ತಿಲ್ಲವೆಂದಲ್ಲ. ಓದಿ ಹೇಳಬೇಕೆಂದರೆ ನಾನು ಹೇಳುತ್ತೇನೆ. ಇದರಿಂದ ಏನು message ಹೋಗಿದೆ ಎಂದರೆ, "ಈಗಾಗಲೇ ಜಾರಿಯಲ್ಲಿ ಇರತಕ್ಕಂಥ 1963ನೇ ಕಾಯ್ದೆ ರೈತರ ಪರವಾಗಿದ್ದು, ಹೊಸ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾನಿಲಯ ಸ್ಥಾಪನೆ ನೆಪದಲ್ಲಿ ಹೊಸ ಸುಗ್ರೀವಾಜ್ಞೆ ವಿಶ್ವವಿದ್ಯಾನಿಲಯಗಳನ್ನು ಸರ್ಕಾರಿ ಸಂಸ್ಥೆಗಳನ್ನಾಗಿ ಪರಿವರ್ತಿಸಲಾಗುತ್ತಿದೆ ಎಂಬುದು ರೈತ ಮುಖಂಡರ ಆರೋಪವಾಗಿದೆ. ಕೃಷಿ ವಿಶ್ವವಿದ್ಯಾನಿಲಯದ ಕಾಯ್ದೆ ತಿದ್ದುಪಡಿ ಮಾಡುವ ಹುನ್ನಾರದ ಹಿಂದೆ ಅಧಿಕಾರಶಾಹಿಗಳ ಕೈವಾಡವಿದೆ." ಈ ಪತ್ರಿಕಾ ವರದಿಗಳೆಲ್ಲವನ್ನೂ ಸಹ ನಾನು ನಿಮಗೆ ಕಳುಹಿಸಿಕೊಡುತ್ತೇನೆ. ಇದರಲ್ಲಿ ಎಲ್ಲೋ ಒಂದು ಕಡೆ ಏನಾಗಿದೆ ಎಂದರೆ, ವಿಶ್ವವಿದ್ಯಾನಿಲಯ ಎಂದರೆ ಅದೊಂದು ರೈತರ ಸಂಸ್ಥೆ, ರೈತರ ಮಾರ್ಗದರ್ಶನದಲ್ಲಿ ನಡೆಯತಕ್ಕಂಥ ಒಂದು ಸಂಸ್ಥೆ, ರೈತರಿಗೋಸ್ಕರ ಇರತ್ಕಕಂಥ ಸಂಸ್ಥೆ ಎನ್ನತಕ್ಕಂಥ ಭಾವನೆಯಿತ್ತು. ಇವತ್ತು ನೀವು ಏನು ಮಾಡಿದ್ದೀರಿ ಎಂದರೆ, ಅದನ್ನು ಅಮೂಲಾಗ್ರವಾಗಿ ಬದಲಾವಣೆಯನ್ನು ಮಾಡಿ, ಎಲ್ಲೋ ಕೆಲವು ಜನ ಅಧಿಕಾರಿಗಳ ಕೈಗೆ ಕೊಡತಕ್ಕಂಥ ರೀತಿಯಲ್ಲಿ ಇವತ್ತು ನೀವು ಮಾಡಿದ್ದೀರಲ್ಲಾ, ಇದರಿಂದಾಗಿ ಆ ಕೃಷಿಯ ಸ್ವಾಮ್ಯತೆ ಎನ್ನುವುದು ಇದೆಯಲ್ಲಾ, ಆ ರೈತರ supremacy ಎಂಬುದು ಇದೆಯಲ್ಲಾ? ಅದು ಉಳಿಯುವುದಕ್ಕೆ ಸಾಧ್ಯವೇ? ಎನ್ನುವುದನ್ನು ದಯವಿಟ್ಟು ಅರ್ಥಮಾಡಿಕೊಳ್ಳಿ. ಇದೊಂದು ವಿಚಾರವಲ್ಲ. ಇನ್ನೂ ಕೆಲವು comments ಇದೆ. 'Ordinance and Farm Varsities were criticized' ಡಾ: ದ್ವಾರಕನಾಥ್ ಎಂಬುವವರು Vice Chancellor ಆಗಿ ಬಹಳ ವರ್ಷಗಳಿದ್ದರು. ನಾವು ಕೃಷಿ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಅವರು ಕೃಷಿ ಆಯೋಗದ ಅಧ್ಯಕ್ಷರಾಗಿದ್ದರು. ಡಾ: ಸ್ವಾಮಿನಾಥನ್‌ರವರ ಸಲಹೆಯಂತೆ ಧಾರವಾಡದಲ್ಲಿ ನಡೆದಂತಹ Agriculture summitನ ಅಧ್ಯಕ್ಷರನ್ನಾಗಿ ಡಾ: ದ್ವಾರಕನಾಥ್‌ರವರನ್ನು ಮಾಡಲಾಯಿತು. ಅವರು ಸರ್ಕಾರಕ್ಕೆ ಸಾಕಷ್ಟು ರೀತಿಯಲ್ಲಿ ಸಲಹೆಗಳನ್ನು ಕೊಟ್ಟರು. ಅವತ್ತು ದ್ವಾರಕನಾಥ್‌ರವರು, ಈ ಮಸೂದೆಯನ್ನು ಮಂಡನೆ

ಮಾಡಲಾಗುತ್ತದೆಂದು ತಿಳಿದಾಗ, ಅವರು comment ಮಾಡಿರತಕ್ಕದ್ದು ಇಲ್ಲಿದೆ. "Mr.Dwarkanath, who is also a former Vice Chancellor of University for Agriculture Sciences, Bangalore took exception to the increasing representation to bureaucracy in the University Governing Board which is headed by the Vioce Chancellor. He told the 'Hindu'; Having 5 IAS officers on the Board will affect the autonomy of the universities as the officials will dominate the Board proceedings. This will harm the interest of the University. He pointed out that the University powers to appoint a controller has also been curtailed though the Vice Chancellor had given the power to appoint the controller from the panel of three persons. The actual selection of the panel would be made by the Government. He noted. Referring to the statement in the Ordinance, it is based on the model Bill recommended by ICAR, Mr. Dwarkanath said; actual amendment affected through the Ordinance went beyond the suggestion made by the ICAR." ಅಂದರೆ ICAR ನಲ್ಲಿ ಏನು letter and spirit ಇದೆ, ಅದನ್ನು ಬಿಟ್ಟು, ಬೇರೆಯದನ್ನೇ ಮಾಡಿದ್ದೀರಿ ಎನ್ನತಕ್ಕಂಥ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದರ ಜೊತೆಗೆ ಮೊನ್ನೆ ಕೂಡ 'ಪ್ರಜಾವಾಣಿ' ಪೇಪರ್‌ನಲ್ಲಿ 'ಮಸೂದೆ ರೈತರ ಪ್ರಾತಿನಿಧ್ಯಕ್ಕೆ ಕೊಡಲಿಪೆಟ್ಟು' ಎಂಬ ವರದಿ ಬಂದಿದೆ. ಇದೆಲ್ಲವನ್ನೂ ಕೂಡ ನಾನು ಇಲ್ಲಿ ಓದಿ ಹೇಳತಕ್ಕಂಥ ಅವಶ್ಯಕತೆ ಇಲ್ಲ. ದಯಮಾಡಿ ನೀವು ಇದನ್ನು ಅರ್ಥಮಾಡಿ ಕೊಳ್ಳಬೇಕು. ಇವತ್ತು ನೀವು ತಂದಿರತಕ್ಕಂಥ ಮಸೂದೆ ಏನಿದೆ, ಅದು ಕೇವಲ ಏಕಪಕ್ಷೀಯವಾಗಿರತಕ್ಕಂಥದ್ದು. ನನಗೆ ಒಂದು ದುಃಖ ಏನೆಂದರೆ, ಇವತ್ತು ಪರಿಣಿತ ಇರತಕ್ಕಂಥ ಅಧಿಕಾರಿಗಳು ನಿಮ್ಮಲ್ಲಿದ್ದಾರೆ. ಅವರು ಏಕೆ ಈ ರೀತಿಯಾಗಿ advice ನಿಮಗೆ ಮಾಡಿ, ನೀವು ಈ ಬಿಲ್ ತಂದಿದ್ದೀರೋ ನನಗೆ ಅರ್ಥವಾಗಲಿಲ್ಲ. ಎಲ್ಲೋ ಒಂದು ಕಡೆಗೆ ಮಂತ್ರಿಗಳ ಒಳ್ಳೆಯತನ ಎನ್ನುವುದು ದುರುಪಯೋಗವಾಗುತ್ತಿದೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕಾಗಿಲ್ಲ. ಇವತ್ತು ಮಾನ್ಯ ಯಡಿಯೂರಪ್ಪನವರು ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿರತಕ್ಕಂಥವರು, ರೈತರ ಬಗ್ಗೆ ಅಲ್ಪ ಸ್ವಲ್ಪ ಕಾಳಜಿ ಇರತಕ್ಕಂಥವರು, ಅವರ ಕಾಲದಲ್ಲೇ ಇಂತಹ ರೈತರಿಗೆ

ಕೊಡಲಿಪೆಟ್ಟು ಕೊಡತಕ್ಕಂಥ ಮಸೂದೆಯನ್ನು ನೀವು ಮಂಡನೆ ಮಾಡಿರುವುದು ಸರಿಯಲ್ಲ. ಈ ಬಗ್ಗೆ ನೀವು ಏನಾದರೂ ಯೋಚನೆ ಮಾಡಿದ್ದೀರಾ? ನೀವು ರೈತರಾಗಿ ಚಿಂತನೆ ಮಾಡಿದ್ದೀರಾ? ದಯಮಾಡಿ ನಾನು ಹೇಳುತ್ತೇನೆ. ಇದನ್ನು ಪಾಸ್ ಮಾಡುವುದಕ್ಕೆ ಹೋಗಬೇಡಿ. ನಿಮ್ಮ ಮಸೂದೆಯಲ್ಲಿ ಇರತಕ್ಕಂಥದ್ದು ಏನೆಂದರೆ, ಕೇವಲ ಐ.ಎ.ಎಸ್. ಅಧಿಕಾರಿಗಳಿಗೆ ಅಧಿಕಾರ ಕೊಡತಕ್ಕಂಥದ್ದು. ಸಭೆ ಕರೆಯಬೇಕಾದಾಗ ಆಗಲಿ, ಕೋರಂ ಕರೆಯಬೇಕಾದಾಗ ಆಗಲಿ, ಏನು ಮಾಡಬೇಕಾದರೂ ಐ.ಎ.ಎಸ್. ಅಧಿಕಾರಿಗಳು ಮತ್ತು Vice Chancellor ಗೆ ಸಂಪೂರ್ಣವಾಗಿ ಇರತಕ್ಕಂಥ ಅಧಿಕಾರವನ್ನು ಕೊಟ್ಟಿದ್ದೀರಿ. ಒಂದು ರೀತಿಯಲ್ಲಿ ಹೇಳಬೇಕೆಂದರೆ, Universityಯನ್ನೇ ಅವರಿಗೆ ಒತ್ತೆ ಇಟ್ಟಂಥ ರೀತಿಯಲ್ಲಿ ಇವತ್ತು ಮಸೂದೆಯನ್ನು ತಂದಿದ್ದೀರಲ್ಲಾ, ಇದು ಸರಿಯೇ? ದಯಮಾಡಿ ಕೃಷಿ ಮಂತ್ರಿಗಳೇ, ನಾನು ಕೇಳುತ್ತೇನೆ. ನೀವು ಇಷ್ಟು ಹೊತ್ತು ಓದಿ ಹೇಳಿದಿರಿ. ಅದರಲ್ಲಿ ICARಗೆ ಸಂಬಂಧಪಟ್ಟಂತಹ ಏನಾದರೂ ಒಂದು ವಿಚಾರ ಇದೆಯೇ? ಬರೀ letter and spirit. ಬರೀ ಎಲ್ಲಾ ಅವರಿಗೆ ಅಧಿಕಾರ ಕೊಡು, ಇವರಿಗೆ ಕಿತ್ತು ಹಾಕು; ಇವರಿಗೆ ಅಧಿಕಾರ ಬೇಡ, ಅವರಿಗೆ ಇರಲಿ. Board of Management ಎಂದು ಇರಲಿ, Board of Regents ಎಂದು ಬೇಡ. ಏನು ಇದೆಲ್ಲಾ? ಈ ರೀತಿಯಾಗಿರತಕ್ಕಂಥ ಮಸೂದೆಯನ್ನು ತಂದಿರತಕ್ಕದ್ದು ನಿಜವಾಗಿಯೂ ಕೂಡ ನಾಚಿಕೆಗೇಡು ಎನ್ನತಕ್ಕ ಮಾತನ್ನು ಹೇಳುತ್ತೇನೆ. ದಯಮಾಡಿ ಇದನ್ನು ಅರ್ಥ ಮಾಡಿಕೊಂಡಿದ್ದೀರಿ ಎಂದು ಕೊಂಡಿದ್ದೇನೆ. ದಯಮಾಡಿ ಸೂಕ್ತವಾಗಿರತಕ್ಕಂಥ amendment ಅನ್ನು ತರುವುದಕ್ಕೆ ಪ್ರಯತ್ನ ಪಡಿ. ಈಗಲೂ ಕೂಡ ಸಮಗ್ರವಾಗಿ ತಿದ್ದುಪಡಿ ತನ್ನಿ. ಕೇವಲ ಈ ಭಾಗದಲ್ಲಿ ಇರತ್ತಕಂಥ ಶಾಸಕರು ಎಂದಲ್ಲ, ಆ ಭಾಗದ ಎಲ್ಲಾ ಶಾಸಕರಿಗೂ ಕೂಡ ಇವತ್ತು ಈ ಮಸೂದೆ ಎಷ್ಟರಮಟ್ಟಿಗೆ ಪೂರಕವಾಗಿ ಸಹಾಯವಾಗಿದೆ ಎನ್ನತಕ್ಕಂಥದ್ದು ಗೊತ್ತಿದೆ. ಹಾಗಾಗಿಯೇ ಈ ಮಸೂದೆ ಪಾಸ್ ಆಗುವುದು ಯಾರಿಗೂ ಬೇಕಾಗಿಲ್ಲ. ಆದರೆ ನಿಮಗೆ ಬಹುಮತ ಇದೆ ಎನ್ನುವ ಕಾರಣಕ್ಕೋಸ್ಕರ ಇವತ್ತು ಕೈ ಎತ್ತಿ ಪಾಸ್ ಮಾಡುವುದಾದರೆ, ರೈತರಿಗೆ ದೊಡ್ಡ ಅನ್ಯಾಯ ಮಾಡಿದಂತಾಗುತ್ತದೆ ಎನ್ನುವುದನ್ನು ನೀವು ಮರೆಯಬೇಡಿ. ಅಂತಹ ಒಂದು ಕರಾಳ ತೀರ್ಮಾನ ನಿಮ್ಮ ಕಾಲದಲ್ಲಿ ಆಗಬಾರದು ಎನ್ನುವುದು ನನ್ನ ಅಪೇಕ್ಷೆ. ದಯಮಾಡಿ ನಾನು ಹೇಳುತ್ತೇನೆ.

ಈಗಾಗಲೇ ಸೂಕ್ಷ್ಮವಾಗಿ ಮಾತನಾಡಿದಂತಹ ಎಲ್ಲರೂ ಕೂಡ ಏನೇನು ಬದಲಾವಣೆಗಳನ್ನು ತರಬೇಕು ಎನ್ನುವುದರ ಬಗ್ಗೆ ಹೇಳಿದ್ದಾರೆ. ಬಹುಶಃ ನೀವು ಅವಕಾಶ ಕೊಟ್ಟರೆ ಏನೇನು ಬದಲಾವಣೆ ತರಬೇಕು ಎಂದು ಹೇಳುವುದಕ್ಕೆ ನಾನೂ ತಯಾರಾಗಿದ್ದೇನೆ. ದಯಮಾಡಿ ಈಗ ನಮ್ಮ ಮುಂದೆ ಉಳಿದಿರತಕ್ಕಂಥದ್ದು ಇಷ್ಟೇ. ಇವತ್ತು ನಾವು ಕೊಡತಕ್ಕಂಥ ಸಲಹೆಯನ್ನು ರೈತರ ಹಿತದೃಷ್ಟಿಯಿಂದ ಒಪ್ಪಿಕೊಳ್ಳಿ. ಇದನ್ನು ಪಾಸ್ ಮಾಡುವುದಕ್ಕೆ ಇಷ್ಟ ಪಡುತ್ತೀರೋ ಅಥವಾ ಇಲ್ಲವೋ? ನಾನು ತಂದಿದ್ದೇ ಸರಿ, ನಾನು ಮಾಡಿದ್ದೇ ಮಾಡಿದ್ದು ಎನ್ನತಕ್ಕಂಥ ರೀತಿಯಲ್ಲಿ ಏನಾದರೂ ಹೇಳುತ್ತೀರೋ, ಅದರ ಮೇಲೆ ಇವತ್ತು ಅವಲಂಬಿಸಿದೆ. ದಯಮಾಡಿ ನಾನು ಹೇಳುತ್ತೇನೆ. ಏಕಪಕ್ಷೀಯವಾಗಿ ಅಧಿಕಾರಿಗಳಿಗೆ ಮತ್ತು Vice Chancellor ಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟು, ಅಧಿಕಾರ ಮತ್ತು ಹಣದ ದುರುಪಯೋಗ ಮಾಡತಕ್ಕಂಥ ಎಲ್ಲಾ ಅವಕಾಶಗಳನ್ನೂ ಕೂಡ ಅವರಿಗೆ ಕಲ್ಪಿಸಿಕೊಟ್ಟಿದ್ದೀರಿ. ಈ ಬಗ್ಗೆ ನಿಮಗೆ ಯಾರು Advice ಮಾಡಿದರೋ, ನನಗಂತೂ ಅರ್ಥವಾಗಲಿಲ್ಲ. ಬಹುಶಃ ನಾನು ನಿಜವಾಗಿಯೂ ಕೂಡ ಹೇಳಬೇಕೆಂದರೆ, ಇದನ್ನು ಎಲ್ಲರೂ ಕೂಡ ಒಕ್ಕೊರಲಿನಿಂದ ಇವತ್ತು ವಿರೋಧವನ್ನು ಮಾಡಬೇಕಾಗುತ್ತದೆ. ದಯಮಾಡಿ ನಾನು ಹೇಳುತ್ತೇನೆ. ಈ ಮಸೂದೆಯನ್ನು ವಾಪಸ್ ಪಡೆಯಿರಿ. ಬೇಕಾದರೆ ಶಾಸಕರನ್ನು ಕರೆದು, ಅದರಲ್ಲಿ ಯಾರ್ಯಾರು interested ಇರುತ್ತಾರೋ, ಅವರನ್ನು ಕರೆದು ಸಲಹೆಯನ್ನು ಕೇಳಿ, ತದನಂತರ ತನ್ನಿ.

ಈಗ ನಿಮಗೆ ಅರ್ಜೆನ್ಸಿ ಇರುವುದೇನೆಂದರೆ, ಬಾಗಲಕೋಟೆ ಮತ್ತು ರಾಯಚೂರು, ಅಲ್ಲಿ Agriculture University ಮಾಡಿದ್ದೀರಿ, ಇಲ್ಲಿ Horticulture University ಮಾಡಿದ್ದೀರಿ. ಆ ಯೂನಿವರ್ಸಿಟಿಗಳನ್ನು ಮಾಡುವುದಕೋಸ್ಕರ ಈ ಮಾಡೆಲ್ ಆಕ್ಟನ್ನು ತರುವುದಕ್ಕೆ ಯಾರು ನಿಮಗೆ ಸಲಹೆ ಮಾಡಿದ್ದು, ನನಗಂತು ಅರ್ಥವಾಗಲಿಲ್ಲ. ನಿಮ್ಮ 1963 ರ ಆಕ್ಟ್ ಪ್ರಕಾರ ಬಾಗಲಕೋಟೆ ಮತ್ತು ರಾಯಚೂರು ವಿಶ್ವವಿದ್ಯಾಲಯಗಳ ಮಸೂದೆಯನ್ನು ತನ್ನಿ ನಾವು ಪಾಸ್ ಮಾಡಿಕೊಡುತ್ತೇವೆ, ಅದರಿಂದ ಖಂಡಿತವಾಗಿಯೂ ಸಹಾಯವಾಗುತ್ತದೆ. ಅದಾದ ಮೇಲೆ ನೀವೇನು ICAR ಗೈಡ್ ಲೈನ್ಸ್ ಪ್ರಕಾರ ಆಗಬೇಕೆಂದು ಹೇಳುತ್ತೀರಿ, ಆ ಗೈಡ್ ಲೈನ್ಸ್ ಅಂತಿಮವಾಗಲಿ, ನಂತರದ ಸಂದರ್ಭದಲ್ಲಿ ಆ ಬದಲಾವಣೆಯನ್ನು

ಮಾಡುವುದಕ್ಕೆ ಪ್ರಯತ್ನ ಮಾಡೋಣ. ಈಗ ಮಾತ್ರ ಹಳೆಯ ಆಕ್ಟ್ ಪ್ರಕಾರ ಎರಡು ವಿಶ್ವವಿದ್ಯಾಲಯಗಳ ಆಕ್ಟ್ ಪಾಸ್ ಆಗಲಿ ಎಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಇದಕ್ಕೆ ಪ್ರತ್ಯುತ್ತರ, ಯಾವುದೇ ಸಬೂಬನ್ನು ಹೇಳುವುದಕ್ಕೆ ಹೋಗದ ರೀತಿಯಲ್ಲಿ, ದಯಮಾಡಿ ಸೌಹಾರ್ದವಾಗಿ ಎಲ್ಲರ ಸಲಹೆ, ಅಭಿಪ್ರಾಯವನ್ನು ಪಡೆದು ಇವತ್ತು ಮಸೂದೆಯನ್ನು ತರುವುದು, ಬದಲಾವಣೆಯನ್ನು ತರುವುದು ಸೂಕ್ತವೆನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಇಲ್ಲ, ಇದೇನಾಗುತ್ತದೆ ನೋಡೋಣವೆನ್ನುವುದಾದರೆ ನಿಮಗೆ ಒಂದು ಸಹಾಯವನ್ನು ಮಾಡಬಹುದು. ಈಗ 1963ರ ಆಕ್ಟ್ ಪ್ರಕಾರ ರಾಯಚೂರು ಮತ್ತು ಬಾಗಲಕೋಟೆ ವಿಶ್ವವಿದ್ಯಾಲಯಗಳ ಆಕ್ಟ್‌ನ್ನು ಪಾಸ್ ಮಾಡಿಕೊಟ್ಟು, ಮಿಕ್ಕ ವಿಚಾರಗಳನ್ನೇ ಬೇಕಾದರೆ ಜಂಟಿ ಸದನ ಸಮಿತಿಗೆ ಕೊಡಿ. ಜಂಟಿ ಸದನ ಸಮಿತಿಯವರು ಕುಳಿತು ಅದನ್ನು ವಿಚಾರ ಮಾಡಿ, ಯಾವುದನ್ನು ಸೇರಿಸಬೇಕು, ಯಾವುದನ್ನು ಸೇರಿಸಬಾರದೆಂಬುದನ್ನು ವಿಚಾರ ಮಾಡೋಣ. ನಿಜವಾಗಿ ನೀವು ತಿಳಿದುಕೊಳ್ಳಬೇಕು, ICAR ಅವರ ಉದ್ದೇಶ ವೇನೆಂದರೆ, ಇವತ್ತು ICAR ನಲ್ಲಿರುವುದು ಸಂಶೋಧನೆ, extension & teachingಗೆ ಹೆಚ್ಚು ಒತ್ತು ಬರಬೇಕೆಂಬುದು, ಅವರ ಗುರಿ ಮತ್ತು ಆಶಯವಾಗಿದೆ. ಆ ಗುರಿಯನ್ನು ಬಿಟ್ಟು ಇವತ್ತು ಮೂಲವಾಗಿ ತರುವ ಆಕ್ಟ್‌ನಲ್ಲೇ ಎಲ್ಲವೂ ಕೂಡ ಅಡಕವಾಗಿದೆ, ಅದನ್ನು ನೆಗ್ಲೆಕ್ಟ್ ಮಾಡಿ, ಯಾರೋ ಒಬ್ಬ Vice Chancellor ಮತ್ತು ಒಬ್ಬ ಅಧಿಕಾರಿಯನ್ನು ಮೆಚ್ಚಿಸುವುದಕ್ಕೋಸ್ಕರ ಇಂಥ ಒಂದು ಬಿಲ್ ಅನ್ನು ತಂದಿದ್ದರಲ್ಲ, ನಿಜವಾಗಿ ಇಂಥ ಒಂದು ಬಿಲ್ಲನ್ನು ತಾವು ತರಬಾರದಾಗಿತ್ತು, ಯೋಚನೆ ಮಾಡಬೇಕಾಗಿತ್ತು. ಇವತ್ತಿನ ಪತ್ರಿಕೆಗಳಲ್ಲಿ ಸಾಕಷ್ಟು ರೀತಿಯಲ್ಲಿ ಕಾಮೆಂಟ್ಸ್ ಬಂದಿವೆ. ಇವತ್ತು ಕೃಷಿ ತಜ್ಞರನ್ನು ನೀವಾಗಿಯೇ ಸಂಪರ್ಕಿಸಬಹುದಾಗಿತ್ತು, ಅದನ್ನೆಲ್ಲಾ ನೀವು ಮಾಡುವುದನ್ನು ಬಿಟ್ಟು, ಇವತ್ತು ಏಕಾಏಕಿಯಾಗಿ ಮಸೂದೆಯನ್ನು ತಂದು, ನಮಗೆ ಬಹುಮತವಿದೆ, ನಾವು ಪಾಸ್ ಮಾಡಿಕೊಳ್ಳುತ್ತೇವೆಂದು ಪಾಸ್ ಮಾಡಿಕೊಳ್ಳುವುದಾದರೆ, ನಿಜವಾಗಿಯು ರೈತರಿಗೆ ಮತ್ತು ವಿಶ್ವವಿದ್ಯಾಲಯಗಳಿಗೆ ವಿಶೇಷವಾಗಿ ಸಂಶೋಧನೆಗೆ ಹೆಚ್ಚು ಕೊಡಲಿಪೆಟ್ಟಾಗುತ್ತದೆಂಬುದನ್ನು ತಿಳಿದುಕೊಳ್ಳಬೇಕು. ಬಹುಶಃ ಎಲ್ಲೋ ಒಂದು ಕಡೆ ನಮ್ಮ ವಿಶ್ವವಿದ್ಯಾಲಯಗಳಲ್ಲಿರುವ ವಿಜ್ಞಾನಿಗಳು ಎಲ್ಲೋ Multi National Companyಗೆ ಒಂದಲ್ಲ ಒಂದು ರೀತಿ ಯೀಲ್ಡಾಗಿ,

ಸಂಶೋಧನೆಯನ್ನು ಕಾಣದಂತೆ ಮಾಡುವ ಸಂದರ್ಭಗಳು ಬರುತ್ತದೆ. ದಯಮಾಡಿ ಇದಕ್ಕೆಲ್ಲಾ ಅವಕಾಶ ಕೊಡಬೇಡಿ, Vice Chancellor ಗೆ ಸಂಪೂರ್ಣವಾಗಿರುವ ವಿಶ್ವವಿದ್ಯಾಲಯಗಳನ್ನು ಮಾಡತಕ್ಕಂಥ ರೀತಿಯಲ್ಲಿ ಅಧಿಕಾರವನ್ನು ಕೊಡುವುದಲ್ಲ. ಇವತ್ತು ರೈತ ಪ್ರತಿನಿಧಿಗಳಿರುವ ಆ ಬಾಡಿ ಇದೆಯಲ್ಲ, Board of Regents ಎಂದು ಹೇಳುತ್ತಾರಲ್ಲ, ಆ Board of Regents ಅಧಿಕಾರವಿರಬೇಕು ಮತ್ತು ಯಾವುದೇ ಸಂದರ್ಭದಲ್ಲಿ ಅಧಿಕಾರವನ್ನು ಚಲಾಯಿಸಬೇಕಾದಾಗ ಇವತ್ತು Vice Chancellor ಅಲ್ಲ, ಬೋರ್ಡ್ ಅಧಿಕಾರವನ್ನು ಚಲಾಯಿಸಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) : ಮಾನ್ಯ ಸದಸ್ಯರು, ಹಿಂದೆ ಕೃಷಿ ಸಚಿವರಾಗಿದ್ದರು. What is the difference in the earlier 1963 Act and Board of Management in the 2008 Act? ಅದರಲ್ಲಿ difference ಏನಿದೆ? What difference do you find in that?

ಶ್ರೀ ಟಿ.ಬಿ.ಜಯಚಂದ್ರ : ಇಲ್ಲಿ ಕೇಳಿ ಸ್ವಾಮಿ, Board of Management ಅಂದರೆ ಏನು, Board of Regents ಎಂದರೆ ಏನು ಎನ್ನುವ ಅರ್ಥವನ್ನು ಅವರೇ ಹೇಳಬೇಕು.

(ಗೊಂದಲ)

SRI B.N.BACHCHEGOWDA : You were Agriculture Minister, you did not take any stand in this case and you are representing now, ಈ ತರಹ ಇರಲಿ, ಆ ತರಹ ಇರಲಿ ಅಂತ you are arguing. What is the difference between the Board of Regents and the Board of Management? Either Regents in those days or managing the affairs of University as a Board, what is the difference you are seeing in that? Opposing every thing, is the way?

ಶ್ರೀ ಟಿ. ಬಿ. ಜಯಚಂದ್ರ : ರೈತರ ಪರವಾಗಿರುವ ಮಂತ್ರಿಗಳು ಈ ರೀತಿ ಮಾತನಾಡಬಾರದು.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಅಬಕಾರಿ ಸಚಿವರು) : ಬಚ್ಚೇಗೌಡರೆ, ಅವರ ತೊಂದರೆ ಬೇರೆ, ಅದೇನೆಂದರೆ, ನನ್ನ ಕಾಲದಲ್ಲಿ ನಾನೇನು ಮಾಡಲಿಲ್ಲವಲ್ಲ, ಬಿಜೆಪಿ ಸರ್ಕಾರ ಬಂದು ಇದನ್ನು ತರುತ್ತಿದ್ದಾರಲ್ಲ, ಇದನ್ನು

ಹೇಗೆ ಸಹಿಸಿಕೊಳ್ಳುವುದು, ಇವರಿಗೆ ಒಳ್ಳೆಯ ಹೆಸರು ಬರುತ್ತದಲ್ಲ, ಇದರ ಬಗ್ಗೆ ಏನಾದರು ಹುಡುಕಬೇಕಲ್ಲ ಎಂಬುದು.

ಶ್ರೀ ರಮಾನಾಥ ರೈ : ಅಧಿಕಾರಶಾಹಿಗಳಿಗೆ ಮಣೆ ಹಾಕತಕ್ಕಂಥ ಧೋರಣೆ, ಇದು ರೈತರ ಪ್ರಗತಿಪರವಾದುದ್ದಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಇದು Fishery ಅಲ್ಲ Agriculture. This is not Fishery, it is Agriculture, ಕುಳಿತುಕೊಳ್ಳಿ.

ಶ್ರೀ ಟಿ. ಬಿ. ಜಯಚಂದ್ರ : ಯಾಕೆ ಮಾತನಾಡುತ್ತೀರಿ, Fishery ಸಹ Agriculture ನಲ್ಲೇ ಬರುತ್ತದೆ.

ಶ್ರೀ ಬಿ.ಎನ್.ಬಚ್ಚೇಗೌಡ : ನೀವು ಏನು ಅಗ್ರಿಕಲ್ಚರ್ ಮಾಡುತ್ತೀರಿ?

ಶ್ರೀ ಟಿ.ಬಿ.ಜಯಚಂದ್ರ : ನೀವು ಏನು ಮಾತನಾಡುತ್ತೀರಿ? Fishery is also a part of Agriculture.

SRI B. N. BACHCHEGOWDA : Fishery is different.

SRI T. B. JAYACHANDRA : Who told you?

(ಗೊಂದಲ)

ಶ್ರೀ ರಮಾನಾಥ ರೈ : ನಾವು ಕೂಡ ಸಾವಿರಾರು ಎಕರೆ ಜಮೀನಿನಲ್ಲಿ ಕೃಷಿ ಮಾಡಿದವರು, ತಾವು ಆ ರೀತಿಯಾಗಿ ಮಾತನಾಡಬೇಡಿ, ನಾವು ರೈತರೆ, ರೈತರಿಗೆ ಮೋಸ ಮಾಡುವಂಥದ್ದು ಇದಾಗಿದೆ.

ಶ್ರೀ ಬಿ.ಎನ್.ಬಚ್ಚೇಗೌಡ : ಮಾಜಿ ಕೃಷಿ ಸಚಿವರಲ್ಲಿ ಅವರ ಅನುಭವವನ್ನು ನಾನು ಕೇಳಿದೆ.

ಶ್ರೀ ಟಿ.ಬಿ.ಜಯಚಂದ್ರ : ತಾವು ಆಗಲೇ ಫಿಷರೀಸ್, ತಮಗೆ ಸಂಬಂಧವಿಲ್ಲವೆಂದು ಹೇಳಿದಿರಿ.

ಶ್ರೀ ಬಿ. ಎನ್. ಬಚ್ಚೇಗೌಡ : ಮಾನ್ಯ ಜಯಚಂದ್ರರವರೆ, Earlier the Regent was the agent, now the Management is the …

ಶ್ರೀ ಬಿ.ಟಿ.ಜಯಚಂದ್ರ : ಮಾನ್ಯ ಬಚ್ಚೇಗೌಡರೆ, ನಾವೆಲ್ಲಾ ವ್ಯವಸಾಯ ಮಾಡುವವರು, ಅದಕ್ಕಾಗಿ ಯೂನಿವರ್ಸಿಟಿಗಳು ಬಹಳ ಮುಖ್ಯ, ಆ ಕಾರಣಕ್ಕೋಸ್ಕರ ಹೇಳಿದೆ, Board of Regents and Board of Management ಎನ್ನುವುದಕ್ಕೆ ಬಹಳ ವ್ಯತ್ಯಾಸವಿಲ್ಲ. ಆದರೆ Board of Regents ಎನ್ನುವುದು, ಇವತ್ತಿನಿಂದಲ್ಲ ಬಹಳ ವರ್ಷಗಳಿಂದಲೂ, ಯುನಿವರ್ಸಿಟಿಗಳಿಗೆ Board of Regents ಎಂದರೆ ಒಂದು ದೊಡ್ಡ ಘನತೆ

ತರುವಂಥ ಶಬ್ಧವಷ್ಟೆ, ಅದರಲ್ಲೇನು ಬಹಳ ಬದಲಾವಣೆ ಇದೆ ಎಂದಲ್ಲ. ಬಚ್ಚೇಗೌಡ, ಬಚ್ಚೇಗೌಡ್ರು ಎಂಬುದಕ್ಕೆ ಎಷ್ಟು ವ್ಯತ್ಯಾಸವಿದೆ ಎಂಬುದು ಮುಖ್ಯ. ಅದು ಬರೀ nomenclature ಆಯಿತು ಬಿಡಿ. ಬೇರೆ ಬೇರೆ ವಿಚಾರ ಗಳಿಗೆ ಸಂಬಂಧಿಸಿದಂತೆ, ಎಲ್ಲಾ ಅಧಿಕಾರವನ್ನು ಕಿತ್ತು Vice Chancellorಗೆ ಕೊಡುವುದು ಮತ್ತು Board of Regents of Management, ಅವರಿಗೆ ಯಾವುದೇ ರೀತಿಯ ಅಧಿಕಾರವಿಲ್ಲರುವುದು. ಒಂದು ನಿದರ್ಶನವನ್ನು ನಾನು ಹೇಳಬೇಕಾಗುತ್ತದೆ. ನಾನು ಕೃಷಿ ಮಂತ್ರಿಯಾಗಿದ್ದೆ, ನನ್ನ ಹತ್ತಿರ ಒಳ್ಳೆಯ ಮಂತ್ರಿಗಳಿದ್ದರು. ಇವತ್ತು ನನ್ನ ಹತ್ತಿರ ಯಾರು ಕಮಿಷನರ್ ಆಗಿದ್ದರೊ, ಅವರು ಇವತ್ತು ಅಗ್ರಿಕಲ್ಚರ್ ಸೆಕ್ರೆಟರಿಯಾಗಿದ್ದಾರೆ. ಒಳ್ಳೆಯ ಅಧಿಕಾರಿ, ನಿಮ್ಮ ಅಧಿಕಾರವಿರುವಾಗ ಅವರನ್ನು 4 ವರ್ಷ ಬದಲಾವಣೆ ಮಾಡಬೇಡಿ ಎಂದು ನಾನು ಅನೇಕ ಸಾರಿ ಹೇಳಿದ್ದೇನೆ. ಅವರೆಲ್ಲರೂ ಇದ್ದಾಗಲೂ ಈ ಮಸೂದೆಯನ್ನು ಏತಕ್ಕೆ ತಂದರೆಂಬುದು ನನ್ನ ಆಕ್ರೋಶ. ಇದು ಸತ್ಯವನ್ನು ಹೇಳುತ್ತಿದ್ದೇನೆ, ಒಬ್ಬರು ಡೆವಲಪ್‌ಮೆಂಟ್ ಕಮಿಷನರ್ ಇದ್ದರು, ಒಂದು ಜಾಗ ಖಾಲಿಯಾದಾಗ, ಬಹಳ ದಿವಸ ಖಾಲಿ ಇದ್ದಾಗ ಒಬ್ಬ ಡೆವಲಪ್‌ಮೆಂಟ್ ಕಮಿಷನರ್ ಅನ್ನು ಆಯ್ಕೆ ಮಾಡಿಕೊಂಡೆವು, ಪರವಾಗಿಲ್ಲ ಇವರನ್ನು ಹಾಕಿ ಕೊಡಿ ಎಂದು ಮುಖ್ಯಮಂತ್ರಿಗಳ ಹತ್ತಿರ ಹೇಳಿದೆ. ರೈತರ ಮುಖಂಡರ ಸಭೆಯನ್ನು ಕರೆದು, ಹೊಸ ಹೊಸ ವಿಚಾರಗಳನ್ನು ಚರ್ಚೆ ಮಾಡುವಾಗ, ಅಡಿಷನಲ್ ಚೀಫ್ ಸೆಕ್ರೆಟರಿಯಾಗಿರುವ ಡೆವೆಲಪ್‌ಮೆಂಟ್ ಕಮಿಷನರ್ ನನ್ನ ಚೇಂಬರ್‌ಗೆ ಬಂದಾಗ ಒಂದು ಮಾತನ್ನು ಕೇಳಿದರು.

ಕೊಬ್ಬರಿಯಲ್ಲಿ ನೀರನ್ನು ಹೇಗೆ ವಾಪಸ್ ತೆಗೆಯುತ್ತೀರಿ ಎಂದು ಕೇಳಿದರು. ಕೊಬ್ಬರಿಯಲ್ಲಿ ನೀರನ್ನು ಹೇಗೆ ವಾಪಸ್ ತೆಗೆಯುತ್ತೀರಿ, ಅದು ಹೇಗೆ ಕೊಬ್ಬರಿ ಆಗುತ್ತದೆ ಎಂದು ಕೇಳಿದವರು Development Commissioner. ಅವರ ಕೈಯಲ್ಲಿ ಇಡೀ ಕೃಷಿ ಇಲಾಖೆಯನ್ನು ಕೊಟ್ಟಿದ್ದಾರೆ.

ಶ್ರೀ ಎಸ್. ಎ. ರವೀಂದ್ರನಾಥ್ : ಮಾನ್ಯ ಉಪಾಧ್ಯಕ್ಷರೆ, ಪ್ರಧಾನ ಮಂತ್ರಿ ಆದಂತಹವರು ಕೆಂಪು ಮೆಣಸಿನ ಕಾಯಿಗೂ ಹಸಿ ಮೆಣಸಿನ ಕಾಯಿಗೂ ಏನು ವ್ಯತ್ಯಾಸ ಎಂದು ಕೇಳಿದ್ದರು. ತಮಗೆಲ್ಲಾ ಗೊತ್ತಿರುವುದೇ ಇದು.

ಶ್ರೀ ಟಿ.ಬಿ.ಜಯಚಂದ್ರ : ಒಬ್ಬ ಪ್ರಧಾನಮಂತ್ರಿ ತಪ್ಪು ಮಾಡಬಹುದು, ಒಬ್ಬ ಅಧಿಕಾರಿ ತಪ್ಪು ಮಾಡಬಾರದು. ಪ್ರಧಾನಮಂತ್ರಿ is guided by So

many officers not by one officer. ಏನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೋಗುತ್ತೀರಿ. ನೀವು. ಒಬ್ಬ ಅಭಿವೃದ್ಧಿ ಅಧಿಕಾರಿ ಆಗಿರುವವನು ಈ ಮಟ್ಟಕ್ಕೆ ಕೃಷಿ ಬಗ್ಗೆ ತಿಳಿದುಕೊಂಡಿದ್ದಾರೆಂದು ಇವರಿಂದ ಸುಧಾರಣೆ ಆಗುತ್ತದೆ ಎಂದು ನೀವೇನಾದರೂ ಹೇಳುವುದಾದರೆ, ನನಗನ್ನಿಸುತ್ತದೆ, ಖಂಡಿತ ಸುಧಾರಣೆ ಆಗುವುದಕ್ಕೆ ಸಾಧ್ಯವಿಲ್ಲ. ಅಮೆಂಡ್‌ಮೆಂಟ್ ಏನೇನು ಬದಲಾವಣೆ ಮಾಡಬೇಕೆಂದು ಕೇಳಿ ನಾನು ಹೇಳುವುದಕ್ಕೆ ತಯಾರಿದ್ದೇನೆ. ಈಗಾಗಲೇ ಸೂಕ್ಷ್ಮವಾಗಿ ಏನೇನು ಬದಲಾವಣೆ ಮಾಡಬೇಕೆಂದು ಎಲ್ಲರೂ ಹೇಳಿದ್ದಾರೆ. ನಮ್ಮ ಒಟ್ಟಾರೆ ಅಭಿಪ್ರಾಯ ಏನೆಂದರೆ, ವಿಶ್ವವಿದ್ಯಾನಿಲಯದಲ್ಲಿ Board of Management ಅಂತಲೇ ಕರೆದುಕೊಳ್ಳಿ ಯಾರು ಬೇಡ ಎಂದರು? ಅವರಿಗೆ ಹೆಚ್ಚಿನ ಅಧಿಕಾರ ಇರಬೇಕು. ಯಾವ ದಿಕ್ಕಿನಲ್ಲಿ ಸಂಶೋಧನೆ ಆಗಬೇಕೆಂದು ಹೇಳಿ, ಇವತ್ತು ನಮ್ಮ ಯೂನಿವರ್ಸಿಟಿಯಲ್ಲಿ ಕೇವಲ ಬೋಧನೆ ನಡೆಯುತ್ತಿರುವುದು. ಬರೀ ಟೀಚಿಂಗ್ ಅಷ್ಟೇ ಆಗುತ್ತಿದೆ. ಹೆಚ್ಚಾಗಿ ಸಂಶೋಧನೆ ಆಗುತ್ತಿಲ್ಲ. ಸಂಶೋಧನೆ ಹೊರಗಡೆ ಬರುತ್ತಿಲ್ಲ, extension work ಜಾಸ್ತಿ ಆಗುತ್ತಿಲ್ಲ. ಅದು ಆಗಬೇಕೆಂದರೆ ರೈತರ ಪ್ರತಿನಿಧಿಗಳು, ರೈತರ ಬಗ್ಗೆ ಕಾಳಜಿ ಇರತಕ್ಕಂತಹ ಜನಗಳು ಇರಬೇಕೇ ವಿನಹಃ ಅಧಿಕಾರಿಗಳು ಮತ್ತು ಯೂನಿವರ್ಸಿಟಿ ಪ್ರೊಫೆಸರ್‌ಗಳು ಇದ್ದರೆ ಮಾತ್ರ ಸಾಧ್ಯವಾಗುವುದಿಲ್ಲ. ಇವತ್ತು ನೀವು ಅವರಿಗೇ ಹೆಚ್ಚು ಮಾನ್ಯತೆ ಕೊಟ್ಟಿರುವುದರಿಂದ ದಯಮಾಡಿ ಈ ಮಸೂದೆಯನ್ನು ನೀವು ವಾಪಸ್ ತೆಗೆದುಕೊಳ್ಳಿ. ಇಲ್ಲದಿದ್ದರೆ Joint Select Committee ಮಾಡಿ. ಇಲ್ಲವೆಂದರೆ ಬದಲಾವಣೆ ತರುವುದಕ್ಕೆ ನೀವು ಒಪ್ಪಿಗೆ ಕೊಟ್ಟರೆ ಏನೇನು ಬದಲಾವಣೆ ತರಬೇಕೆಂದು ನಾನು ಸೂಕ್ಷ್ಮವಾಗಿ ಹೇಳುತ್ತೇನೆ. ಆಗ ನೀವು ತರುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : (ಮಾಗಡಿ) ಮಾನ್ಯ ಉಪಾಧ್ಯಕ್ಷರೆ, ಈ ತಿದ್ದುಪಡಿ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಇದು ಸಮಗ್ರವಾದ ಬದಲಾವಣೆ. ಯಾವುದೋ ಒಂದು ಕ್ಲಾಸ್‌ಗೆ ತಿದ್ದುಪಡಿ ತಂದಿದ್ದರೆ ಈಗಲೇ ಯೋಚನೆ ಮಾಡಿ, ಚರ್ಚೆ ಮಾಡಿ, ಕ್ಲೀಯರ್ ಮಾಡಿ ಎಂದು ಸರ್ಕಾರಕ್ಕೆ ಹೇಳಬಹುದಾಗಿತ್ತು. ಇದು ರೈತರಿಗೆ ಬಹಳ ಅವಶ್ಯಕವಾಗಿರುವಂಥದ್ದು. ಈ Act ನಿಂದ ರೈತರಿಗೆ ಅನುಕೂಲ ಆಗುತ್ತದೋ ಅನಾನುಕೂಲ ಆಗುತ್ತದೋ ಎಂದು ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ ಸರ್ಕಾರ ರೈತರ

ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದೆ, ಗೊಬ್ಬರದ ಸಮಸ್ಯೆಯಾದಂತೆ ಆಗುವುದು ಬೇಡ. ಗೊಬ್ಬರ ಇದೆ ಎಂದು ಒಬ್ಬರು ಹೇಳುವುದು, ಅಲ್ಲಿ ಸ್ಟ್ರೈಕ್ ನಡೆಯುವುದು ಆ ಕೆಲಸ ಆಗುವುದು ಬೇಡ ಇದರಲ್ಲಿ. ಈ ವಿಧೇಯಕ 55 ಪುಟ ಇದೆ, ಇದನ್ನು ನಾವೆಲ್ಲಾ ಓದುವುದು ಬೇಡವಾ? ಅವರೇನೋ ಕೃಷಿ ಸಚಿವರಾಗಿದ್ದರು ಅವರಿಗೆ ಅದರ ಬಗ್ಗೆ ಹೆಚ್ಚು ಜ್ಞಾನ ಇದೆ, ಅವರು ಅರಿತುಕೊಂಡಿದ್ದರು, ಅದರ ಬಗ್ಗೆ ಚರ್ಚೆ ಮಾಡಿದರು. ಇದು ಏನೆಂದು ನಮಗೆ ಇನ್ನೂ ಗೊತ್ತೇ ಇಲ್ಲ. ICAR Act ಅಂದರೆ ಏನು, ಅದು ಏಕೆ, ಅದು ಬೇಕಾ? ಬೇಡವಾ? ಅದರಿಂದ ರೈತರಿಗೆ ಅನುಕೂಲ ಏನು? ಅನಾನುಕೂಲ ಏನು? ಎನ್ನುವುದರ ಬಗ್ಗೆ ಚರ್ಚೆ ಆಗಬೇಕಾಗುತ್ತದೆ. ಇಲ್ಲಿ ಮೇಲ್ನೋಟಕ್ಕೆ ಏನು ಕಾಣುತ್ತಿದೆ ಎಂದರೆ, ವೈಸ್‌ಚಾನ್ಸಲರ್‌ಗೋ ಯಾರಿಗೋ ಅಧಿಕಾರಿಗಳಿಗೆ ಅನುಕೂಲ ಮಾಡಿಕೊಡತಕ್ಕಂತಹ ರೀತಿಯಲ್ಲಿ ಈ ಬದಲಾವಣೆಯನ್ನು ತರಲಿಕ್ಕೆ ಹೊರಟಿದ್ದಾರೆಂದು ಮೇಲ್ನೋಟಕ್ಕೆ ಕಾಣುತ್ತಿದೆ. 1963 Actನಿಂದ ಇದುವರೆಗೆ ಏನು ತೊಂದರೆ ಆಗಿದೆ, ಅದನ್ನು ಇದರಲ್ಲಿ ವಿವರಿಸಬೇಕು, ಆ Act ನಿಂದ ಏನು ತೊಂದರೆ ಇದೆ? ಸಣ್ಣ ಪುಟ್ಟ ಬದಲಾವಣೆ ಮಾಡಿಕೊಂಡು ಇದುವರೆಗೂ ಚೆನ್ನಾಗಿ ನಡೆಸಿಕೊಂಡು ಬಂದಿದ್ದಾರೆ. ಇವತ್ತು ಅಧಿಕಾರಿಗಳಿಗೆ ನೀವು ಹೆಚ್ಚಿನ ಒತ್ತು ಕೊಡುತ್ತಿದ್ದೀರಿ. ಹೊಸ ತಿದ್ದುಪಡಿಯಲ್ಲಿ 15 ಜನ ಅಧಿಕಾರಿಗಳಲ್ಲಿ 10 ಜನ ಅಧಿಕಾರಿಗಳು 5 ಜನ ರೈತರ ಪ್ರತಿನಿಧಿಗಳು ಇದ್ದಾರೆ. ಇದನ್ನು ನೀವು ಈಗಲೇ ಅಮೆಂಡ್‌ಮೆಂಟ್ ಪಾಸ್ ಮಾಡುವ ಬದಲು ರೈತ ಪ್ರತಿನಿಧಿಗಳಿಗೆ ಬಿಡಿ ಅವರು ಚರ್ಚೆ ಮಾಡಲಿ, ವ್ಯಾಪಕವಾಗಿ ಚರ್ಚೆ ಆಗಲಿ, ನಿಮಗೂ ಒಳ್ಳೆಯ ಹೆಸರು ಬರಲಿ, ಏನೋ ಕೃಷಿ ಸಚಿವರು ಒಳ್ಳೆಯ ತಿದ್ದುಪಡಿಯನ್ನು ಮಂಡಿಸಿದ್ದಾರೆ, ಇದರಿಂದ ಅನುಕೂಲ ಆಗುತ್ತದೆ ಎಂದಾದರೆ, ಇದರ ಬಗ್ಗೆ ಚರ್ಚೆ ಆಗಲಿ. ಮುಂದಿನ ಅಧಿವೇಶನದಲ್ಲಿ ಇದನ್ನು ಮಂಡಿಸಿ. ನಾವೇನು ಅದನ್ನು ವಿರೋಧ ಮಾಡುವುದಿಲ್ಲ. ಇದರಿಂದ ರೈತರಿಗೆ ಅನುಕೂಲ ಆಗುವುದಾದರೆ ಆಗಲಿ. ಕೋರಂ ಇಲ್ಲದೆ ಮೀಟಿಂಗ್ ಮಾಡುವುದು ಈ ದೇಶದಲ್ಲಿ ನಾವು ಇದೇ ಮೊದಲನೆಯದಾಗಿ ಕೇಳುತ್ತಿರುವುದು, ಒಂದು ಸಲ ಕೋರಂ ಇಲ್ಲದೇ ಮೀಟಿಂಗ್ ಮುಂದಕ್ಕೆ ಹಾಕಿದರೆ, ಇನ್ನೊಂದು ಸಲ ಮೂರು ಜನ ಇರಲಿ, ನಾಲ್ಕು ಜನ ಇರಲಿ, ಅವರಿಗೆ ಬೇಕಾದ ವಿಷಯಗಳನ್ನು ಕೋರಂ ಇಲ್ಲದೆ ಪಾಸ್ ಮಾಡಿಕೊಂಡು ಹೋಗುವುದು.

ಇದು ಎಲ್ಲಾದರೂ ಕೇಳಿದ್ದೇವಾ? $1/3^{rd}$ ಕೋರಂ ಬೇಡ, ಅದೂ ಇಲ್ಲದೆ ಎರಡನೇ ಮೀಟಿಂಗ್ ಮಾಡಬಹುದು. ಕೋರಂ ಇಲ್ಲದೆ ಮೀಟಿಂಗ್ ಮಾಡುವುದು ಇದು ಹೊಸದಾಗಿ ಕೇಳುತ್ತಿದ್ದೇವೆ. ದಯಮಾಡಿ ಮಾನ್ಯ ಸಚಿವರು ಇದರ ಬಗ್ಗೆ ಗಮನ ಹರಿಸಬೇಕು. ಸರಿಯಾದ ರೀತಿಯಲ್ಲಿ ಕೆಲಸ ಮಾಡಿದರೆ ರೈತ ಪ್ರತಿನಿಧಿಗಳು ಎಲ್ಲರೂ ಬಂದು ಸಹಕಾರ ಕೊಡುತ್ತಾರೆ. ಇದು ಬಹಳ ಸಮಗ್ರವಾದ ಬದಲಾವಣೆ. ಯಾವುದೋ ಒಂದು ಕ್ಲಾಸ್ ತಿದ್ದುಪಡಿ ಮಾಡಿದ್ದರೆ ನಾವು ನಿಮಗೆ ಕೇಳುತ್ತಿರಲಿಲ್ಲ. ಏನೋ ನೋಡಿಕೊಂಡು ಅದರ ಬಗ್ಗೆ ನಮಗೆ ಏನು ವಿಚಾರ ಗೊತ್ತಿತ್ತು ಅದನ್ನು ಹೇಳುತ್ತಿದ್ದೆವು. ಆದ್ದರಿಂದ ಈ ICAR Act ಬಗ್ಗೆ ಅನೇಕರು ಚರ್ಚೆಗಳನ್ನು ಮಾಡಿದ್ದಾರೆ. ಕೇಂದ್ರದ ಕೃಷಿ ಸಚಿವರು ಇರತಕ್ಕಂತಹ ರಾಜ್ಯದಲ್ಲಿಯೇ ICAR Act implement ಮಾಡಿಲ್ಲ. ICAR Act ನಿಂದ ಈ ವಿಶ್ವವಿದ್ಯಾನಿಲಯಗಳಿಗೆ ಬಹಳಷ್ಟು ಹಣ ಬರುವುದಿಲ್ಲ. ಅದಕ್ಕಾಗಿ ನಾನು ಹೇಳುತ್ತಿರುವುದು ಇದರ ಬಗ್ಗೆ ಚರ್ಚೆ ಮಾಡೋಣ. ಆತುರವಾಗಿ ಪಾಸ್ ಮಾಡಿಕೊಂಡು ಹೋಗುವಂತಹ ಅವಶ್ಯಕತೆ ಏನು? ನಾನು ಆಗಲೇ ನೋಡಿದೆ, ಮಾನ್ಯ ಸುರೇಶ್ ಕುಮಾರ್‌ರವರು ಮಾನ್ಯ ಕೃಷಿ ಸಚಿವರ ಪಕ್ಕದಲ್ಲಿ ಕುಳಿತು ಹೇಳಿಕೊಂಡು ಬಂದರು. ಅವರು ಏನಾದರೂ ಹೇಳಿಕೊಳ್ಳಲಿ ಪಾಸ್ ಮಾಡೋಣ. ನೀವು ಫ್ರೀ ಆಗಿ ಇರಿ ಎಂದು ಹೇಳಿದರು. Regents ಎಂದರೆ ಏನು management ಅಂದರೆ ಏನು ಎಂದು ಮಾನ್ಯ ಬಚ್ಚೇಗೌಡರು ಮಾಜಿ ಕೃಷಿ ಸಚಿವರಿಗೆ ಕೇಳಿದರು. ಕೆಲವು ಗೌರವಾನ್ವಿತ ಪದಗಳು ಇರುತ್ತವೆ, ಅದನ್ನು ಉಪಯೋಗಿಸಿ. ರೈತರಿಗಾಗಲಿ, ರೈತ ಪ್ರತಿನಿಧಿಗಳಿಗಾಗಲಿ ಗೌರವಾನ್ವಿತ ಪದಗಳನ್ನು ಉಪಯೋಗಿಸಿ ಎನ್ನತಕ್ಕಂಥದ್ದು ಇದರಲ್ಲಿ ಅಡಕವಾಗಿದೆ. ಅದು ಬಿಟ್ಟರೆ ನೀವು ಗೌರವ ಕೊಟ್ಟರೂ ರೈತನೇ, ನೀವು ಗೌರವ ಕೊಡದಿದ್ದರೂ ರೈತ ರೈತನೇ. ಅದನ್ನು ಮಾಜಿ ಕೃಷಿ ಸಚಿವರಿಗೆ ತಾವು ಕೇಳಿದಿರಿ. ಇದು ಸಮಗ್ರವಾದ ಬದಲಾವಣೆ ಆಗಿರುವುದರಿಂದ, ಅಧಿಕಾರಿಗಳಿಗೆ ಹೆಚ್ಚಿನ ಶಕ್ತಿ ಕೊಡತಕ್ಕಂತ ಬಿಲ್ ಆಗಿರುವುದರಿಂದ ಇದನ್ನು ನಾವು ವಿರೋಧ ಮಾಡುತ್ತೇವೆ. ದಯಮಾಡಿ ಇದರ ಬಗ್ಗೆ ಹಠಕ್ಕೆ ಬೀಳಬೇಡಿ, ಏನೋ ನಾನು ಮಂಡಿಸಿಬಿಟ್ಟಿದ್ದೇನೆ, ಇದನ್ನು ನಾನು ಪಾಸ್ ಮಾಡಿಸಬೇಕು ಎನ್ನುವುದನ್ನು ಬಿಡಿ. ಇದು ರೈತರ ವಿಚಾರ. ಇದು ಯಾರದೋ ಒಬ್ಬರು ಇಬ್ಬರ ವಿಚಾರ ಅಲ್ಲ, ರೈತರಿಗೆ

ತೊಂದರೆ ಆಗತಕ್ಕಂತಹ ವಿಚಾರ. ಆದ್ದರಿಂದ ರೈತರ ಬಗ್ಗೆ ಅಪಾರವಾದ ಕಾಳಜಿ ಇಟ್ಟುಕೊಂಡಿರತಕ್ಕಂತಹ ಕೃಷಿ ಸಚಿವರು ದಯಮಾಡಿ ಇದರ ಬಗ್ಗೆ ವ್ಯಾಪಕವಾದ ಚರ್ಚೆ ಆಗುವುದಕ್ಕೆ ಹೊರಗಡೆ ಬಿಡಿ. ರೈತ ಪ್ರತಿನಿಧಿಗಳು ಚರ್ಚೆ ಮಾಡಲಿ. ಅವರು ಅವರ ಅಭಿಪ್ರಾಯಗಳು ಏನು ಕೊಡುತ್ತಾರೆ ಕೊಡಲಿ. ಮತ್ತೆ ಮುಂದಿನ ಅಧಿವೇಶನದಲ್ಲಿ ಇದನ್ನು ಪಾಸ್ ಮಾಡಿಕೊಳ್ಳಿ ನಾವೇನು ಬೇಡವೆಂದು ಹೇಳುವುದಿಲ್ಲ. ಇದರಿಂದ ಅನುಕೂಲ ಆಗುವುದಾದರೆ ಖಂಡಿತ ಪಾಸ್ ಮಾಡಿಕೊಳ್ಳಿ ಎಂದು ಹೇಳಿ, ಇವತ್ತು ತಂದಿರತಕ್ಕಂತಹ ಬಿಲ್ಲನ್ನು ತಿರಸ್ಕಾರ ಮಾಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರಾದ ಬಾಲಕೃಷ್ಣರವರು ಹೇಳಿದರು. ಈ ಸದನಕ್ಕೆ ಬಂದ ಮೇಲೆ ನನಗೆ ಬಹಳ ದೊಡ್ಡ ಸಮಸ್ಯೆ ಆಗಿರುವುದು ಎಂದರೆ, ಈ ವಿಧೇಯಕಗಳ ಮಂಡನೆ. ಮೊದಲು ಏನು Act ಇರುತ್ತದೆ ಎಂದು ನಮಗೆ ಗೊತ್ತಿಲ್ಲ. ಅದನ್ನು ನಾವು ಯಾರೂ ಓದುವುದಿಲ್ಲ. ಅದನ್ನು ನಮ್ಮ ಕೈಗೆ ಕೊಡುವುದಿಲ್ಲ. ಇದನ್ನು ನೀವು ತಿದ್ದುಪಡಿ ಮಾಡಬೇಕು. ನಾವು ಏನನ್ನು ತಿದ್ದುಪಡಿ ಮಾಡಬೇಕು. ನಾವು ಏನನ್ನು ತಿದ್ದುಪಡಿ ಮಾಡುವುದು? ಮೊದಲು ಏನು Act ಇತ್ತು ಎನ್ನುವುದನ್ನು you have not supplied for us. ಮೊದಲನೇ Actಗೆ ನೀವು ಅಮೆಂಡ್‌ಮೆಂಟ್ ತರುತ್ತಿದ್ದೀರಿ. ಈಗ ಅಮೆಂಡ್‌ಮೆಂಟ್ ಏನಿದೆ, ಈಗ ನೀವು ಏನು ಅಮೆಂಡ್‌ಮೆಂಟ್ ತರಬೇಕು, ಅದನ್ನು ನೀವು ನಮ್ಮ ಕೈಗೆ ಕೊಟ್ಟಿದ್ದೀರಿ. ಮೊದಲಿನ Act ಏನಿತ್ತು ಎಂದು ಯ್ಯಾರಿಗೆ ಗೊತ್ತಿದೆ? you have not supplied. We are not Presumed to be know of things. ಇದು ಒಂದು ಭಾಗ. ಇದರೊಳಗೆ ಬಹಳ ನೋವಾಗತಕ್ಕಂಥದ್ದು ಎಂದರೆ ನೀವು ರೈತರ ಪರವಾಗಿ 40–50 ವರ್ಷ ಹೋರಾಟ ಮಾಡಿದಂತಹ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಇಂತಹ ಒಂದು ಅಮೆಂಡ್‌ಮೆಂಟ್ ತರತಕ್ಕಂಥದ್ದು ಇದು ಖಂಡಿತ ಸಾಧುವಲ್ಲ ಎಂದು ನನ್ನ ಭಾವನೆ. ಅವರು ಅನೇಕ ವರ್ಷಗಳ ಕಾಲ ಹೋರಾಟ ಮಾಡಿದ್ದಾರೆ. ನಾನು ಒಬ್ಬ ವಕೀಲನಾಗಿದ್ದಾಗಲೂ ಕೂಡ ಶಿಕಾರಿಪುರದಿಂದ 2000 ದಿಂದ 3000 ಜನ ರೈತರನ್ನು ಕರೆದುಕೊಂಡು ಕಾಲ್ನಡಿಗೆಯಲ್ಲಿ ಶಿವಮೊಗ್ಗಕ್ಕೆ ಬಂದು ರೈತರ ಪರವಾಗಿ ಪ್ರತಿಭಟನೆಯನ್ನು ಮಾಡಿರು

ವಂಥದನ್ನು ನೋಡಿದ್ದೇನೆ. ಸೈದ್ಧಾಂತಿಕವಾಗಿ ನಾವು ಭಿನ್ನ ಇರಬಹುದು ಆದರೆ ಅವರು ಹೋರಾಟವನ್ನು ಮೆಚ್ಚಬೇಕಾಗುತ್ತದೆ. ಇದರಲ್ಲಿ ಮಾನ್ಯ ಕೃಷಿ ಸಚಿವರು ಮತ್ತು ಮಾನ್ಯ ಕಾರ್ಮಿಕ ಸಚಿವರು ಅನೇಕ ಸಾರಿ ಇದರೊಳಗೆ ಮಾತನಾಡಿದರು. ರೈತರ ಪರವಾಗಿರತಕ್ಕಂತಹ ಒಂದು ತಿದ್ದುಪಡಿಯನ್ನು ನೀವು ಇದರಲ್ಲಿ ತೋರಿಸಿದರೆ, ರೈತರಿಗೆ ಪೂರಕವಾಗಿರತ್ಕಕಂಥ ಒಂದು ತಿದ್ದುಪಡಿಯನ್ನು ನೀವು ತೋರಿಸಿದರೆ, ನಾನು ಸಭೆಯಿಂದ ಹೊರಗಡೆ ಹೋಗುತ್ತೇನೆ. ಮಾನ್ಯ ಅಧ್ಯಕ್ಷರೆ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರಲ್ಲಿ ರೈತರ ಪರವಾಗಿರುವ ಒಂದು ತಿದ್ದುಪಡಿ ಸಹ ಇಲ್ಲ. 1963ರ Act ನಲ್ಲಿ ಇರತಕ್ಕಂಥದ್ದರಲ್ಲಿ ನೀವು ಕರ್ನಾಟಕ ರಾಜ್ಯದಲ್ಲಿ ಎಷ್ಟು ವಿಶ್ವವಿದ್ಯಾನಿಲ ಯಗಳನ್ನು ಬೇಕಾದರೂ ಮಾಡಬಹುದು. ಆ Actನಲ್ಲಿಯೇ ಇದೆ. ಆ Act ನಲ್ಲಿ Provision ಇದೆ. There is a provision. You can make number of universities. ನೀವು ರಾಯಚೂರು ಜಿಲ್ಲೆಯಲ್ಲಿ ಒಂದು ಮಾಡಬಹುದು, ಬಾಗಲಕೋಟೆಯಲ್ಲಿ ಒಂದು ಮಾಡಬಹುದು, there is a provision. ಆ ಪ್ರಾವಿಷನ್ ಒಳಗೆ ನೀವು ಇನ್ನೊಂದು ಯೂನಿವರ್ಸಿಟಿ ಮಾಡಬಹುದು. ಈಗ ಅಮೆಂಡ್‌ಮೆಂಟ್ ತಂದಿರತಕ್ಕಂಥದ್ದರೊಳಗೆ ನಾನು ಇದರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆಡಳಿತ ಪಕ್ಷ ವಿರೋಧ ಪಕ್ಷ ಎಂದು ಎನ್ನತಕ್ಕಂಥ ಯೋಚನೆ ಮಾಡುವುದು ಬೇಡ. ಇವತ್ತು ನೀವು ಇರಬಹುದು, ನಾಳೆ ನಾನು ಹೋಗಬಹುದು. ಈಗ 15 ಜನರನ್ನು ಮಾಡಿದ್ದೀರಿ. 10 ಜನ ಅಧಿಕಾರಿಗಳು. ವೈಸ್‌ಚಾನ್ಸಲರ್‌ರನ್ನು ಪಾರ್ಟಿ ಮಾಡಿ ವೈಸ್‌ಚಾನ್ಸಲರ್‌ಗಿಂತ ಕೆಳಗಿರತಕ್ಕ ಅಧಿಕಾರಿ ವಿಚಾರಣೆ ಮಾಡತಕ್ಕದ್ದು. 9 ಜನ ಅಧಿಕಾರಿಗಳು, ವೈಸ್‌ಚಾನ್ಸಲರ್‌ಗಿಂತ ಕೆಳಗಿರತಕ್ಕ ಅಧಿಕಾರಿಗಳು. ಈ ತಿದ್ದುಪಡಿ ಹೇಗಿದೆ ಎಂದರೆ, ಒಬ್ಬ ಡಿಸಿ ಮೇಲೆ ರೆವಿನ್ಯೂ ಇನ್ಸ್‌ಪೆಕ್ಟರ್‌ಗೆ ನೀನು investigate ಮಾಡು ಎಂದು ಹೇಳಿದ ಹಾಗೆ. ವೈಸ್‌ಚಾನ್ಸಲರ್‌ಗಿಂತ ಕೆಳಗಿರತಕ್ಕಂತಹ 9 ಜನ ಅಧಿಕಾರಿಗಳು ವೈಸ್‌ಚಾನ್ಸಲರ್‌ಗಿಂತ ಕೆಳಗಿರತಕ್ಕಂತಹ ಅಧಿಕಾರಿಗಳು. ಆ ಅಧಿಕಾರಿಗಳು ವೈಸ್‌ಚಾನ್ಸಲರ್ ಹೇಳಿದ್ದಕ್ಕೆ ಸಹಿ ಹಾಕಿ ಹೋಗುತ್ತಾರೆ ವಿನಹಃ ವೈಸ್‌ಚಾನ್ಸಲರ್ ಎದುರುಗಡೆ ನಿಂತು ನೀವು ಇದನ್ನು ಮಾಡಿದ್ದು ತಪ್ಪು ಎಂದು ಹೇಳುವುದಿಲ್ಲ. ತಾವು ಅರ್ಥ ಮಾಡಿಕೊಳ್ಳಬೇಕು. ಈ ತಿದ್ದುಪಡಿಯಲ್ಲಿ ಏನಿದೆ ಎಂದರೆ, 13 ಜನರಲ್ಲಿ 10 ಜನ ಅಧಿಕಾರಿಗಳು ಮೂರು ಜನ ರೈತರು ಇದ್ದಾರೆ.

ಇದರಲ್ಲಿ ರೈತರ ಪರವಾಗಿರತಕ್ಕಂಥ ಒಂದಂಶವನ್ನು ನೀವು ತೋರಿಸಿದರೂ ಕೂಡ ನಾನು ಈ ಸಭೆಯಿಂದ ಹೊರಗೆ ಹೋಗುತ್ತೇನೆ. ಇದರೊಳಗೆ ಲಾಭ ನಷ್ಟಗಳ ಪ್ರಶ್ನೆಯಲ್ಲ. ನೀವು ಹೇಳಿರುವಂತೆ ಈ ಮೀಟಿಂಗ್‌ನಲ್ಲಿ 13 ಜನರು ಇದ್ದಾರೆ, ಈ Vice Chancellor ಏನೋ ತಪ್ಪು ಮಾಡಿದ್ದರು, ಯಾವನೋ ಒಬ್ಬ ಅಧಿಕಾರಿ ತಪ್ಪು ಮಾಡಿದ್ದ ಎಂದರೆ ಆಗ No Confidence Motion Move ಮಾಡಬೇಕು ಎಂದರೆ ಏನಿದೆ ಇದರೊಳಗೆ? ಯಾರು ಇದನ್ನು ವಿರೋಧ ಮಾಡಬೇಕು? ಕೆಳಗಡೆ ಇದ್ದ ಅಧಿಕಾರಿಗಳು ಯಾರೂ ಮಾಡುವುದಿಲ್ಲ. ಆದರೆ ಈ ಹಿಂದೆ ಇರುವುದ ರೊಳಗೆ 6 ಜನ ರೈತರು, 6 ಜನ ಅಧಿಕಾರಿಗಳು, ಒಬ್ಬರು Vice Chancellor ಇದ್ದರು. Enquiryಯನ್ನು conduct ಮಾಡಬಹುದಾಗಿತ್ತು. ಆದರೆ ಈಗ Vice Chancellor ಗಿಂತ ಕೆಳಗಡೆಯ ಅಧಿಕಾರಿಗಳು ಅಲ್ಲಿರತಕ್ಕಂಥದ್ದು. 9 ಜನರಿದ್ದಾರೆ. ನೀವು ಅದನ್ನು ಹೇಗೆ ಮಾಡುತ್ತೀರಿ? ಈಗಾಗಲೇ ಹಾಲಿ ಇರತಕ್ಕಂಥದ್ದರಲ್ಲಿ ಇರುವ ತೊಂದರೆಯಾದರೂ ಏನು? ಮಾನ್ಯ ಕಾರ್ಮಿಕ ಸಚಿವರು ಉತ್ತರ ಕೊಡುತ್ತಾ ರೀಜೆಂಟ್‌ಗೂ ಮತ್ತು ಈಗಿರತಕ್ಕಂಥದ್ದಕ್ಕೂ ಏನು ವ್ಯತ್ಯಾಸ ಎಂದು ಕೇಳಿದರು. ವ್ಯತ್ಯಾಸವೇನೂ ಇಲ್ಲ. It is only a language. ಅಲ್ಲಿ ಆಡಳಿತ ಮಂಡಳಿ ಎಂದು ಇದೆ. ಇಲ್ಲಿ ರೀಜೆಂಟ್ ಎಂದು ಇದೆ. ವ್ಯತ್ಯಾಸವೇನೂ ಇಲ್ಲ. ಏನೆಂದರೆ ಈ Act ಅನ್ನು ಬದಲಾವಣೆ ಮಾಡಿದಾಗ Name will be different ಅಷ್ಟೆ. ಇಬ್ಬರದ್ದೂ ಒಂದೇ. ಅಲ್ಲಿ 10 ಜನರಿದ್ದರು. ಇಲ್ಲಿ 13 ಜನರಾದರು. ಅಲ್ಲಿ 6 ಜನ ರೈತರು ಮತ್ತು 6 ಜನ ಅಧಿಕಾರಿಗಳಿದ್ದರು. ಇಲ್ಲಿ ಕೇವಲ 3 ಜನ ರೈತರಿದ್ದಾರೆ ಮತ್ತು 10 ಜನ ಅಧಿಕಾರಿಗಳಿದ್ದಾರೆ. ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ರೈತ ಹೋರಾಟಗಳನ್ನು ಮಾಡಿರುವಂಥ ಯಡಿಯೂರಪ್ಪನವರ ನೇತೃತ್ವದ ಸರ್ಕಾರದಲ್ಲಿ ರೈತರಿಗೆ ಅವಕಾಶವೇ ಇಲ್ಲದಿರತಕ್ಕಂಥದ್ದು ಸರಿಯಲ್ಲ. ಇನ್ನೊಂದು ಬಹಳ ಪ್ರಮುಖ ಅಂಶವಿದೆ. ಬಹುಶಃ ಇದನ್ನು ನೀವು ಅಧ್ಯಯನ ಮಾಡಿಲ್ಲ. Vice Chancellor is having every right to remove any nominated person on the next day itself. ಇವತ್ತು ಮೂರು ಜನರನ್ನು nominate ಮಾಡಿ, he is having liberty to remove him. ಇವತ್ತು nominate ಮಾಡುತ್ತಾರೆ. He can remove it on the

following day. But ಹಿಂದಿನ Act ನಲ್ಲಿ they cannot be removed till 3 years. ಹಿಂದಿನ Act ನಲ್ಲಿ ಮೂರು ವರ್ಷ ಅವರು ಅಬಾಧಿತ, ಈಗ ಸರ್ಕಾರ ಮೂರು ಜನರನ್ನು ನಾಮಿನೇಟ್ ಮಾಡುತ್ತದೆ. ಅಥವಾ ಹಿಂದಿನ Actನಲ್ಲಿ 6 ಜನರನ್ನು ನಾಮಿನೇಟ್ ಮಾಡುವುದಕ್ಕೆ ಸರ್ಕಾರಕ್ಕೆ ಅವಕಾಶವಿದೆ. ಆ ಆರು ಜನರನ್ನು Vice Chancellor cannot be removed.

ಶ್ರೀ ಬಿ.ಎನ್. ಬಚ್ಚೇಗೌಡ : ಈಗ ರಾಜ್ಯಪಾಲರು ಮೂರು ಜನರನ್ನು nominate ಮಾಡುತ್ತಾರೆ. ಸರ್ಕಾರದವರು ಮೂರು ಜನರನ್ನು nominate ಮಾಡುತ್ತಾರೆ.

ಶ್ರೀ ಕಿಮ್ಮನೆ ರತ್ನಾಕರ್ : ನಾನು ಅದರ ಬಗ್ಗೆ ಹೇಳುತ್ತೇನೆ. I am addressing the Speaker, Please. He is listening to me.

ಶ್ರೀ ಅಮರೇಗೌಡ ಬಯ್ಯಾಪುರ್ : ಸರ್ಕಾರವೇ ಅಧಿಕಾರ ತೆಗೆದು ಕೊಂಡರೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಆ ಅಧಿಕಾರವನ್ನು ಒಬ್ಬ ವ್ಯಕ್ತಿಗೆ ಕೊಡುವುದು ಸರಿಯಲ್ಲ.

(ಗೊಂದಲ)

ಶ್ರೀ ಉಮೇಶ್ ವಿ.ಕತ್ತಿ : ಮಾನ್ಯ ಉಪಾಧ್ಯಕ್ಷರೆ, ಕೆ.ಜಿ.ಎಫ್.ಗೆ ನಾಮಿನೇಟ್ ಮಾಡಿದರೆ ಅದಕ್ಕೂ ವಿರೋಧ ಮಾಡುತ್ತಾರೆ. ಇಲ್ಲಿಗೆ ನಾಮಿನೇಟ್ ಮಾಡಿದರೆ ಇದಕ್ಕೂ ವಿರೋಧ ಮಾಡುತ್ತಾರೆ.

ಶ್ರೀ ಅಮರೇಗೌಡ ಬಯ್ಯಾಪುರ್ : ನಾಮಿನೇಶನ್‌ಗೆ ನಮ್ಮ ವಿರೋಧ ವಿಲ್ಲ. ಆದರೆ ಅದು ಸರ್ಕಾರದ ಸ್ವತ್ತಾಗಿರಬೇಕು. ಅದು ವೈಸ್‌ಛಾನ್ಸಲರ್‌ನ ಸ್ವತ್ತಿಗೆ ಹೋಗಬಾರದು. ಅವರ ಅಧಿಕಾರಕೊಳ್ಳಪಡಬಾರದು ಎಂಬುದೇ ನಮ್ಮ ಮನವಿ.

ಉಪಾಧ್ಯಕ್ಷರು : ಹೀಗೆ ಎಲ್ಲರೂ ಮಾತನಾಡಿದರೆ ಅದು ದಾಖಲೆಗೆ ಹೋಗುವುದಿಲ್ಲ.

ಶ್ರೀ ಬಿ. ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳ ಸಂಖ್ಯೆಯೇ ಹೆಚ್ಚಾದರೆ, , ,

ಉಪಾಧ್ಯಕ್ಷರು : ರಮಾನಾಥ ರೈರವರೆ, ನಾನು ನಿಮಗೆ ಮಾತನಾಡಲು allow ಮಾಡಿಲ್ಲ. ನೀವು ಇಬ್ಬರು ಮಾತನಾಡಿದ್ದು ದಾಖಲೆಗೆ ಹೋಗುವುದಿಲ್ಲ. ಪ್ಲೀಸ್, ನೀವು ಆಮೇಲೆ ಮಾತನಾಡಿ.

ಶ್ರೀ ಕಿಮ್ಮನೆ ರತ್ನಾಕರ್ : I will conclude my speech. ನಾನು ಹೇಳತಕ್ಕಂಥದ್ದು Vice Chancellorಗೆ ಈಗಿನ Actನಲ್ಲಿ ಯಾವುದೇ nominated member ಅನ್ನು at any movement he can be removed. ಆದರೆ ಹಿಂದೆ ಇದ್ದಂಥ Actನಲ್ಲಿ ಮೂರು ವರ್ಷದೊಳಗೆ ಆ ರೈತನನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಇದು liberty ಇದೆ.

(ಗೊಂದಲ)

ಶ್ರೀ ಬಿ.ಎಸ್. ಬಚ್ಚೇಗೌಡ : ಪಾಟೀಲ್ ಎನ್ನುವವರು 4 ಟರ್ಮ್ ಇದ್ದಾರೆ. ಅವರೇ ಸಾಯುವವರೆಗೂ ಇದ್ದುಬಿಡಬೇಕೆ?

(ಗೊಂದಲ)

ಉಪಾಧ್ಯಕ್ಷರು : ಕಿಮ್ಮನೆ ರತ್ನಾಕರ್‌ರವರು ಮಾತನಾಡುವಾಗ ಬೇರೆಯವರು ಮಧ್ಯೆ ಮಾತನಾಡಬೇಡಿ. ಪ್ಲೀಸ್. ರತ್ನಾಕರ್‌ರವರೆ ನೀವು ಬೇಗ ಮುಗಿಸಿ.

ಶ್ರೀ ಟಿ.ಬಿ.ಜಯಚಂದ್ರ : ಪಾಟೀಲ್‌ರವರು ಮೂರು ಟರ್ಮ್ ಇರುತ್ತಾರೋ, ನಾಲ್ಕು ಟರ್ಮ್ ಇರುತ್ತಾರೋ ಅದು ಪ್ರಶ್ನೆಯಲ್ಲ. ಸರ್ಕಾರ ಬೇಕೆಂದರೆ ಅವರನ್ನು one time ಮಾಡಬಹುದು ಅಥವಾ Two time ಮಾಡಬಹುದು. ಒಟ್ಟಿನಲ್ಲಿ ಆ ಅಧಿಕಾರವನ್ನು ಸರ್ಕಾರಕ್ಕೇ ಬಿಡಿ. ನೀವು ಆ ಅಧಿಕಾರವನ್ನೇಕೆ ಮೊಟಕು ಮಾಡುತ್ತಿದ್ದೀರಿ.

ಉಪಾಧ್ಯಕ್ಷರು : ಆಯಿತು ಅವರು ಉತ್ತರ ಕೊಡುತ್ತಾರೆ ಬಿಡಿ. ಪ್ಲೀಸ್, ರತ್ನಾಕರ್‌ರವರೆ ನೀವು ಬೇಗ ಮುಗಿಸಿ.

ಶ್ರೀ ಕಿಮ್ಮನೆ ರತ್ನಾಕರ್ : Sir, My humble request to learned Hon'ble Minister is not to interfere. ನಮ್ಮ ಬಚ್ಚೇಗೌಡರವರು ಗೌರವಾನ್ವಿತ ಸಚಿವರಾಗಿದ್ದಾರೆ. ಅವರು ನನಗೆ interfere ಮಾಡುತ್ತಾರೆ. ದಯವಿಟ್ಟು ನಾನು ಮೊದಲು ಹೇಳಿಬಿಡುತ್ತೇನೆ. ಆಮೇಲೆ ಅವರು ಉತ್ತರ ಕೊಡಲಿ. ನಾನು ಏನು ಅರ್ಥ ಮಾಡಿಕೊಂಡಿದ್ದೇನೆ ಅದನ್ನು ಸಭೆಯ ಗಮನಕ್ಕೆ ತರುವ ಪ್ರಯತ್ನವನ್ನು ಮಾಡುತ್ತೇನೆ. ದಯವಿಟ್ಟು ಮಧ್ಯದಲ್ಲಿ ನನ್ನನ್ನು mislead ಮಾಡಬೇಡಿ. Please, request ಮಾಡುತ್ತೇನೆ. You are at liberty to reply. ನನ್ನ ನಂತರದಲ್ಲಿ ನೀವು reply ಮಾಡಬಹುದು. ಇದರಲ್ಲಿ ಇರತಕ್ಕಂಥದ್ದರಲ್ಲಿ ಏನಿದೆಯೆಂದರೆ, ಅಕಸ್ಮಾತ್ Vice Chancellor

ಏನಾದರೂ ದುರ್ನಡತೆಗೆ ಸಾಬೀತಾದರೆ ಆಡಳಿತ ಮಂಡಳಿಯ ಎರಡನೇ ಮೂರರಷ್ಟು ಸದಸ್ಯರ ಶಿಫಾರಸ್ಸಿನನ್ವಯ ಕುಲಪತಿಯನ್ನು ಸ್ಥಾನದಿಂದ ತೆರವು ಗೊಳಿಸಬಹುದು. ಈಗೇನಾಗುತ್ತದೆಂದರೆ, ಅವರೆಲ್ಲ subordinates ಕುಳಿತು ಕೊಂಡು ಇವರನ್ನು remove ಮಾಡುವುದಾಗಲಿ enquiry ಮಾಡುವು ದಾಗಲಿ ಬರುವುದಿಲ್ಲ. Only option is High Court. One cannot question him. ಏಕೆಂದರೆ ಈಗ ರೆವಿನ್ಯೂ ಇನ್ಸ್‌ಪೆಕ್ಟರ್, ತಹಶೀಲ್ದಾರ್‌ರವರು ಡಿ.ಸಿ.ಯವರನ್ನು question ಮಾಡುವುದಕ್ಕೆ ಹೋಗುವುದಿಲ್ಲ. ಅದೇ ರೀತಿ Vice Chancellorರವರನ್ನು question ಮಾಡತಕ್ಕಂಥ ಯಾವುದೇ ಅಧಿಕಾರಿ ಇದರೊಳಗೆ ಇಲ್ಲ. ಇದರಲ್ಲಿ ಮಾಡಬಹುದು, he is equal to that. Suppose if on Official Vice Chancellor ಗೆ equal ಆಗಿರತಕ್ಕಂಥ cadre ಇರತಕ್ಕಂಥ Officials ಇದ್ದಾರೆಂದರೆ, it is not like that. All of them are subordinates to them. ಈಗ ನೀವೇನು ತಿದ್ದುಪಡಿಯನ್ನು ತಂದಿದ್ದೀರಿ all of them are subordinates. ನಾನು ಹೇಳತಕ್ಕಂಥದ್ದು ಏನೆಂದರೆ, ಇಂಥ ವಿಸ್ತಾರವಾದ ವ್ಯವಸ್ಥೆ ಇರಬೇಕಾದರೆ, ನಾನು ರಾಜಕೀಯ ವ್ಯವಸ್ಥೆಯಲ್ಲಿ ಇದ್ದುಕೊಂಡು ಈ ರೀತಿ ಹೇಳುತ್ತಿಲ್ಲ. ಖಂಡಿತವಾಗಿ ಇದರೊಳಗೆ ಸರ್ಕಾರ ನೇಮಕ ಮಾಡುವವರೇ ಬರುವವರು. ನಾನು ಹೇಳಿದವರು ಬರುವುದಿಲ್ಲ. ನೀವು ನೇಮಕ ಮಾಡುವವರೇ ಅದರೊಳಗೆ ಇರುವವರು. 6 ಜನ ರೈತರನ್ನು ಮಾಡಿ. ಆ ಅಧಿಕಾರಿಗಳನ್ನು ತೆಗೆಯಿರಿ ಎಂದು ನಾನು ಹೇಳುತ್ತಿರುವುದು. It is your liberty. The Government is having a right to nominate. ನೀವೇ ಸರ್ಕಾರದವರೇ ಇಟ್ಟುಕೊಂಡು ನೀವೇ ನಿಮ್ಮ ಅಧಿಕಾರಿಗಳನ್ನು ಕೂರಿಸುವ ಬದಲು ರೈತರನ್ನೇಕೆ ಕೂರಿಸಬಾರದು? ಎಷ್ಟು ಜನ ರೈತರಿದ್ದಾರೆ. ಕರ್ನಾಟಕದಲ್ಲಿ ಕೃಷಿಕ ರತ್ನ ಪಡೆದವರು ಇದ್ದಾರೆ. ಇಡೀ ಪ್ರಪಂಚದಲ್ಲಿಯೇ recognize ಮಾಡಿರುವಂಥ ರೈತರಿದ್ದಾರೆ. You give an opportunity for them.

ಶ್ರೀ ಉಮೇಶ್ ವಿ.ಕತ್ತಿ : ಮಾನ್ಯ ಉಪಾಧ್ಯಕ್ಷರೆ, ಈ ರೀತಿ ಗಂಟೆಗಟ್ಟಲೆ ಭಾಷಣ ಮಾಡಿದರೆ ಹೇಗೆ. ಈಗಾಗಲೇ ಆ ಕಡೆ ಬಹಳಷ್ಟು ಜನರು ಮಾತನಾಡಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ರತ್ನಾಕರ್‌ರವರೆ, ಬೇಗ ಮುಗಿಸಿ.

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಉಪಾಧ್ಯಕ್ಷರಲ್ಲಿ ಮತ್ತು ಮಾನ್ಯ ಸಚಿವರಲ್ಲಿ ನನ್ನ ವಿನಂತಿ ಇಷ್ಟೆ. ನಿಮಗೆ ಇರತಕ್ಕಂಥ ಅಧಿಕಾರದಲ್ಲಿ ನೀವು ಆರು ಜನ ರೈತರನ್ನು ಅಲ್ಲಿ ಕೂರಿಸಿ. ನಿಮ್ಮ ಕಡೆಯವರನ್ನೇ ಕೂರಿಸಿ. ಆದರೆ ನೀವು ಅಲ್ಲಿ ಅಧಿಕಾರಿಗಳನ್ನು ಕೂರಿಸಿ ನಿಮಗೆ ಅಧಿಕಾರ ಕೊಟ್ಟಂಥ ರೈತರನ್ನು ಮರೆಯಬೇಡಿ. ಇವತ್ತು ಈ ರಾಜ್ಯದಲ್ಲಿ ನಿಮ್ಮನ್ನು ಈ ಸ್ಥಾನದಲ್ಲಿ ಯಾರಾದರೂ ಕೂರಿಸಿದ್ದರೆ ಅವರು ಕಂಡಿತ ರೈತರು ಎನ್ನತಕ್ಕಂಥದ್ದನ್ನು ನೀವು ಮರೆಯ ಬಾರದು. ಖಂಡಿತ ನೀವು 6 ಜನ ಅಧಿಕಾರಿಗಳನ್ನು ತೆಗೆದು ಅಲ್ಲಿ 6 ಜನ ರೈತರನ್ನು ಸೇರಿಸಿ. ಈ ರೀತಿ ಮಾಡಿದರೆ ನಿಮಗೆ ಯಾವ ತೊಂದರೆಯೂ ಇದರೊಳಗೆ ಇರುವುದಿಲ್ಲ. ಈ ರೀತಿ ತೀರ ಆತುರದಲ್ಲಿ ಇದನ್ನು ಮಂಡನೆ ಮಾಡಿ ಒಪ್ಪಿಗೆ ತೆಗೆದುಕೊಳ್ಳಬೇಕೆಂದು ನೀವು ಪ್ರಯತ್ನ ಮಾಡದೆ ರೈತರ ಹಿತ ಕಾಪಾಡುವ ದೃಷ್ಟಿಯಿಂದ ಇದನ್ನು ವಾಪಸ್ ತೆಗೆದುಕೊಳ್ಳಿ. ಮುಂದಿನ ಅಧಿವೇಶನದಲ್ಲಿ ಇದರ ಬಗ್ಗೆ ವಿಸ್ತಾರವಾಗಿ, ವಿಸ್ತೃತವಾಗಿ ಚರ್ಚಿಸಲು ಮಂಡಿಸತಕ್ಕಂಥದ್ದು ಒಳ್ಳೆಯದು ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : (ಹೊಳೆನರಸೀಪುರ) ಮಾನ್ಯ ಅಧ್ಯಕ್ಷರೇ ಕೃಷಿ ವಿಶ್ವವಿದ್ಯಾಲಯ ವಿಧೇಯಕ 2009, ಇದು ಸುಮಾರು 56 ಪುಟಗಳ ಪುಸ್ತಕವನ್ನು ಕೊಟ್ಟಿದ್ದಾರೆ, ಇದನ್ನು ಅರ್ಧ ಗಂಟೆಯಲ್ಲಿ ಓದಿ ಮಾತನಾಡಿ ಮುಗಿಸಿ ಎಂದು ಹೇಳುತ್ತಿದ್ದಾರೆ. ನಾನು ಒಂದು ಉದಾಹರಣೆ ಕೊಡಬೇಕಾ ಗುತ್ತದೆ. ಮಾನ್ಯ ಕಾನೂನು ಸಚಿವರು ವಿರೋಧ ಪಕ್ಷದ ನಾಯಕರಿಗೆ ನೀಡುತ್ತಿರುವ ಸವಲತ್ತಿನ ಬಗ್ಗೆ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವಂತಹ ಒಂದು ವಿಚಾರವನ್ನು ಮೊನ್ನೆ quote ಮಾಡಿದರು.

(ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಹೆಚ್.ಡಿ.ರೇವಣ್ಣ : "ಕೃಷಿ ವಿಶ್ವವಿದ್ಯಾನಿಲಯ ವಿಧೇಯಕ, ರೈತರ ಕೆಂಗಣ್ಣು" ಇದನ್ನು ಬರೆದಿರುವುದು ನಾನಲ್ಲ, ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಅದನ್ನು

ತಮಗೆ ಕಳುಹಿಸಿಕೊಡುತ್ತೇನೆ. ಈ ವಿಧೇಯಕ ಸುಮಾರು 56 ಪುಟ ಇದೆ. ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಮಂತ್ರಿಗಳಿಗೆ ಅಧಿಕಾರಿಗಳು ಇದನ್ನು ಮಾಡಿ ಕಳುಹಿಸಿಕೊಟ್ಟಿದ್ದಾರೆ ಎಂದು ಹೇಳಬೇಕಾಗುತ್ತದೆ. 1963ರ ಆಕ್ಟ್ ಏನಿದೆ ಅದರ ಪ್ರಕಾರ ಆರು ಜನ ರೈತರು ಮತ್ತು ಆರು ಜನ ಅಧಿಕಾರಿಗಳೂ ಇರುತ್ತಾರೆ. ಆದರೆ ಈಗ ಹೊಸದಾಗಿ ತಂದಿರುವ ಆಕ್ಟ್‌ನಲ್ಲಿ ಕೇವಲ ಮೂರು ಜನ ರೈತರು ಮತ್ತು ಹತ್ತು ಜನ ಅಧಿಕಾರಿಗಳು. ಅದರಲ್ಲಿ ಒಂದು ಸಾಮಾನ್ಯ ವರ್ಗಕ್ಕೆ, ಒಂದು ಪರಿಶಿಷ್ಟ ಜಾತಿ ವರ್ಗಕ್ಕೆ, ಒಂದು ಮಹಿಳಾ ವರ್ಗಕ್ಕೆ ಎಂದು ಇಟ್ಟಿದ್ದಾರೆ. ಉದಾಹರಣೆಗೆ ಹೇಳುವುದಾದರೆ ICAR ನಿಂದ 18 ಕೋಟಿ ರೂಪಾಯಿ ಹಣ ಬರುತ್ತದೆ ಎಂದು ಇದರಲ್ಲಿ ಹೇಳಿದ್ದಾರೆ. ಕೇಂದ್ರದ ಕೃಷಿ ಸಚಿವರು ಇರುವಂತಹ ಮಹಾರಾಷ್ಟ್ರ ರಾಜ್ಯದಲ್ಲೇ ಇವತ್ತು 1963 ಆಕ್ಟ್ ಚಾಲ್ತಿಯಲ್ಲಿದೆ. ಅವರು ICAR ನಿಂದ ಏನಾದರೂ ತೆಗೆದುಕೊಂಡಿದ್ದಾರಾ? ಮಹಾರಾಷ್ಟ್ರ ಸರ್ಕಾರ ಏನಾದರೂ ಮಾಡಿದೆಯಾ? ಇದರಲ್ಲಿರುವ ಕೆಲವು ಅಮೆಂಡ್‌ಮೆಂಟ್‌ನ ಭಾಗಗಳನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಮೊದಲನೆಯದು ಕುಲಪತಿಯವರು ಆದಷ್ಟು ಬೇಗ ವ್ಯವಸ್ಥಿತ ಮಂಡಳಿಯನ್ನು ರಚಿಸತಕ್ಕದ್ದು. ಅದರಲ್ಲಿ ಈಗಾಗಲೇ ರಚಿತವಾಗಿರುವ ಬೆಂಗಳೂರು, ಧಾರವಾಡ ಬಗ್ಗೆ ಹೇಳಿದ್ದೀರಿ, ಆಯಿತು ಅದನ್ನು ಒಪ್ಪಿಕೊಳ್ಳೋಣ. ಕೆಲವು ಅಮೆಂಡ್‌ಮೆಂಟ್ ನಲ್ಲಿ ಏನಿದೆ ಎಂದರೆ ಉದಾಹರಣೆಗೆ ಹೇಳುವುದಾದರೆ ಮಂಡಲಿಯ ಸಭೆಗೆ 1/3 ಭಾಗದಷ್ಟು ಸದಸ್ಯರು ಕೋರಂಗೆ ಇರತಕ್ಕದ್ದು, ಪರಂತು ಕೋರಂ ಇಲ್ಲದಿದ್ದರೆ ಮಂಡಳಿಯ ಒಂದು ಸಭೆಯನ್ನು ಮುಂದೂಡಿದರೆ ಅದೇ ವ್ಯವಹಾರಗಳನ್ನು ನಡೆಸುವುದಕ್ಕೆ ಮುಂದಿನ ಸಭೆಗೆ ಅಧಿಕಾರ ಕೊಟ್ಟಿದ್ದೀರಿ. ಆದರೆ 1963ರ ಆಕ್ಟ್‌ನಲ್ಲಿ 1/3 ಭಾಗದಷ್ಟು ಸದಸ್ಯರು ಕೋರಂಗೆ ಇರಬೇಕೆಂದು ಇದೆ. ಇವತ್ತು 13 ಜನರಲ್ಲಿ 3 ಅಥವಾ 4 ಜನ ಮೆಂಬರ್ಸ್ ಇದ್ದರೆ ಏನು ಬೇಕಾದರೂ ಮಾಡಿಕೊಳ್ಳಬಹುದು. ಇದು ಏಕೆ ಇರಬೇಕು? ಮೂರು ಜನ ನಾಮಿನೇಷನ್ ಮೆಂಬರ್ಸ್ ಇದ್ದು, ಅದರಲ್ಲಿ ಮಹಿಳಾ, ಸಾಮಾನ್ಯ ಹಾಗೂ ಪರಿಶಿಷ್ಟ ಜಾತಿ ಎಂದು ರೈತರನ್ನು ಇಡುತ್ತೀರಿ. ಇನ್ನು ಬಾಕಿ ಹತ್ತು ಜನ ಅಧಿಕಾರಿಗಳಲ್ಲಿ ನಾಲ್ಕು ಜನ ಹೋದರೆ ಇದ್ದವರು ಏನು ಹೇಳಿದರೂ ಕೂಡ ಅದನ್ನು ಮಾಡಿಕೊಳ್ಳಬಹುದು ಎಂದು ಕಾನೂನು ಇದ್ದರೆ ಪ್ರಜಾವಾಣಿ ಪತ್ರಿಕೆಯಲ್ಲಿ ಬರೆದಿರುವುದೆಲ್ಲ ನಿಜ ಎಂದು ಹೇಳಬೇಕಾಗುತ್ತದೆ.

ಇದು ಯಾವ ಮಟ್ಟಕ್ಕೆ ಇದೆ ಎನ್ನುವುದನ್ನು ಹೇಳಬೇಕಾಗುತ್ತದೆ. ಮೂರು ಜನರ ಪ್ರತಿನಿಧಿಗಳು ಇದ್ದುದ್ದನ್ನು ಆರು ಜನ ಮಾಡಿದ್ದಾರಲ್ಲ, ಇದು ಸರಿಯೇ, ನಾಮಿನೇಷನ್ ಬಗ್ಗೆ ಹೇಳುವುದಾದರೆ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ Non officials ಅನ್ನು ತೆಗೆಯುವ ಅಧಿಕಾರ ಇದೆಯಲ್ಲ ಅದರ ಬಗ್ಗೆ ಸ್ಟೇ ಇದೆ. ಇದರ ಬಗ್ಗೆ ಹೈಕೋರ್ಟ್‌ನಲ್ಲಿ ಕೇಸ್ ಇದೆ ಎಂದು ತಾವೇ ಹೇಳಿದಿರಿ, ಮಾನ್ಯ ಬಚ್ಚೇಗೌಡರು point of Order ಎಂದು ಹೇಳಿದರು. ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದರು. ಹೈಕೋರ್ಟ್‌ನಲ್ಲಿ ಯಾವುದೇ ಕೇಸ್ ಇದ್ದರೂ ಕೂಡ.....

ಶ್ರೀ ಬಿ.ಎನ್. ಬಚ್ಚೇಗೌಡ : ರೇವಣ್ಣನವರೇ, ಈ ಆಕ್ಟ್ ಹೈಕೋರ್ಟ್‌ಗೆ ಹೋಗುವ ಹಾಗೆ ಇಲ್ಲ. ಇದು ಹಳೆಯ ಆಕ್ಟ್ ಅಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಹಳೆಯ ಆಕ್ಟ್ ಮೇಲೆ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಬಚ್ಚೇಗೌಡರೇ, ನನಗೆ ಗೊತ್ತಿಲ್ಲ, ನೀವು point of Order, Court ಎಂದು ಹೇಳುತ್ತೀರಿ ಅದಕ್ಕೆ ಹೇಳುತ್ತಿರುವುದು.

ಅಧ್ಯಕ್ಷರು : ಹೈಕೋರ್ಟ್‌ನ ಆರ್ಡರ್ ಕಾಪಿ ಕಳುಹಿಸಿಕೊಡಿ.

ಶ್ರೀ ಹೆಚ್.ಡಿ.ರೇವಣ್ಣ : ಕಳುಹಿಸಿಕೊಡುತ್ತೇನೆ. ಇವತ್ತು ಹೈಕೋರ್ಟ್‌ನಲ್ಲಿ ಸ್ಟೇ ಆರ್ಡರ್ ಇದ್ದು, ಇಲ್ಲಿ ನೀವು ಹೇಗೆ ಅಮೆಂಡ್‌ಮೆಂಟ್ಸ್ ತರುತ್ತೀರಿ? ಇದು ಯಾವುದೇ ಆಕ್ಟ್ ಇರಲಿ ಮೆಂಬರ್ಸ್ ಅನ್ನು ತೆಗೆಯಬಾರದು ಎಂದು ಇದೆ. ಇದರಲ್ಲಿ Vice Chancellor ಅಧಿಕಾರ ಕೊಡುವುದು ಎಂದು ಇದೆ. ಅದರ ಬಗ್ಗೆ ಕೋರ್ಟ್‌ನಲ್ಲಿ ತೀರ್ಮಾನವಾಗಲಿ. ಆಮೇಲೆ ಬಿಲ್ ತೆಗೆದುಕೊಂಡು ಬನ್ನಿ. ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾವು ಚರ್ಚೆ ಮಾಡಬೇಕೆಂದರೆ ಕನಿಷ್ಠ ಒಂದು ದಿನ ಬೇಕಾಗುತ್ತದೆ. ಇದು ಒಂದೆರಡು ಪುಟ ಅಲ್ಲ, 56 ಪುಟ ಇದೆ. 56 ಪುಟದ ಪುಸ್ತಕ ಮಾಡಿ ಸಾಯಂಕಾಲ ಏಳೂವರೆ ಗಂಟೆಯಲ್ಲಿ ಕೊಟ್ಟು ಏಳೂ ಮುಕ್ಕಾಲು ಗಂಟೆಗೆ ಪಾಸ್ ಮಾಡಿ ಎಂದರೆ ಯಾರು ಪಾಸ್ ಮಾಡುತ್ತಾರೆ? ಮೊನ್ನೆ BACನಲ್ಲಿ ಯಾವುದು important bills ಇವೆ ಅವು ಹತ್ತು ಬಿಲ್‌ಗಳನ್ನು ಪಾಸ್ ಮಾಡಿ ನಮ್ಮದೇನೂ ಅಭ್ಯಂತರವಿಲ್ಲವೆಂದು ಹೇಳಿದ್ದಾರೆ. ಈ ಬಿಲ್ ಬೇಡವೆಂದು ಹೇಳಿದ್ದೆವು. ಆದರೆ ಇದನ್ನೇ prestige ಆಗಿ ಇಟ್ಟುಕೊಂಡು ತಂದಿದ್ದಾರೆ. ಒಂದು ಕಡೆ ರೈತರ ಹೆಸರಿನಲ್ಲಿ ರೈತರ ಪರವಾಗಿ ಪ್ರಮಾಣ ವಚನ ಸ್ವೀಕಾರ ಮಾಡುತ್ತೀರಿ, ಇನ್ನೊಂದು ಕಡೆ ಪತ್ರಿಕೆಯಲ್ಲಿ ರೈತರ ಕೆಂಗಣ್ಣಿಗೆ ಗುರಿ ಎಂದು

ಬಂದಿದೆ. ಮಾನ್ಯ ಸುರೇಶ್ ಕುಮಾರ್‌ರವರು ಯಾವುದು ಕೇಳಿದರೂ ಪ್ರಜಾವಾಣಿ ಎಡಿಟೋರಿಯಲ್, ಸಂಯುಕ್ತ ಕರ್ನಾಟಕ ಎಡಿಟೋರಿಯಲ್ ಎಂದು ಹೇಳುತ್ತಾರೆ. ಪ್ರಜಾವಾಣಿ ಎಡಿಟೋರಿಯಲ್‌ನಲ್ಲಿ ಏನು ಬಂದಿದೆ ಹೇಳಿ.

ಶ್ರೀ ಎಂ. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೆ, ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದಂತಹ ಮಾನ್ಯ ಯಡಿಯೂರಪ್ಪನವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ಎಂದು ಅನೇಕ ಪೇಪರ್‌ನಲ್ಲಿ ಬಂದಿದೆ. ಆದರೆ ಈ ರೀತಿ ಯಾವುದೋ ಒಂದು ಪೇಪರ್‌ನಲ್ಲಿ. ಬಂದಿರುವುದನ್ನು ಮಾತ್ರ ತಾವು ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೇ, 50,000 ಕೋಟಿ ರೂಪಾಯಿಗಳ ಬಜೆಟ್ ಅನ್ನು ಪಾಸ್ ಮಾಡುವಾಗ ಹತ್ತು ನಿಮಿಷ ಹೈದರಾಬಾದ್ ಕರ್ನಾಟಕದ ಕುಂದುಕೊರತೆಯನ್ನು, ಆ ಭಾಗದ ಸದಸ್ಯರು ಹೇಳುತ್ತೇವೆಂದರೆ ಅದಕ್ಕೆ ಅವಕಾಶ ಕೊಡುವಷ್ಟು ತಾಳ್ಮೆ ಇಲ್ಲ. ಅದನ್ನು ಪತ್ರಿಕೆಯಲ್ಲಿ ಬರೆಯಬೇಕೆ? ಮಾನ್ಯ ಮುಖ್ಯಮಂತ್ರಿಯವರು ನಾಳೆ ಬೆಳಿಗ್ಗೆ 10 ಗಂಟೆಗೆ ಉತ್ತರ ಹೇಳಲಿ ಎಂದರೂ ಕೇಳಲಿಲ್ಲ, ಈ ಸರ್ಕಾರ ಈಗ written statement ಮಾಡಿಸಿದ್ದಾರೆ, ಈ ಸರ್ಕಾರದವರಿಗೆ ಯಾವುದನ್ನು ಕೇಳಿದರೂ written statement ಮಾಡಿಸಿ ಕೊಡುತ್ತಾರೆ. ಈ ವಿಧೇಯಕದ 56 ಪುಟಗಳನ್ನು written statement ಮಾಡಿಸಿಕೊಂಡು ಬಂದು ಕೊಟ್ಟುಬಿಡಿ. ಈಗ ಚರ್ಚೆ ಏಕೆ ಬೇಕು? ಮಾನ್ಯ ಮುಖ್ಯಮಂತ್ರಿಯವರು 60,000 ಕೋಟಿ ರೂಪಾಯಿಗಳಿಗೆ ಬಜೆಟ್ ಮೇಲೆ ನಡೆದ ಚರ್ಚೆಗೆ ಅಧ್ಯಕ್ಷರೆ, ನಮ್ಮ ಅಧಿಕಾರಿಗಳು written statement ಬರೆದುಕೊಟ್ಟಿದ್ದಾರೆ, ಅದನ್ನೆ ನಡಾವಳಿ ಗಳಲ್ಲಿ ಬರೆದುಕೊಳ್ಳಿ ಸ್ವಾಮಿ ಎಂದು ಹೇಳಿದ್ದಾರೆ, ತಾವು ಅದನ್ನೆ ಬರೆದುಕೊಂಡು ಆಯಿತು ತಾನೇ? ಏಕೆಂದರೆ ಈ ಸರ್ಕಾರ written statement ನಲ್ಲಿ ಉತ್ತರ ಕೊಡುವ ಸರ್ಕಾರ ಎಂದು ಹೇಳಬೇಕಾಗುತ್ತದೆ. Oppositionನವರು ಯಾರೂ ಕೂಡ ಹೈದರಾಬಾದ್-ಕರ್ನಾಟಕ ಭಾಗಕ್ಕೆ ಅನ್ಯಾಯವಾದರೆ ಕೇಳುವುದಕ್ಕೆ ಹೋಗಬೇಡಿ, ರೈತರ ಬಗ್ಗೆ ಯಾರೂ ಕೇಳುವುದಕ್ಕೆ ಹೋಗಬೇಡಿ, ಮಲೆನಾಡು ಅಭಿವೃದ್ಧಿ ಬಗ್ಗೆ ಕೇಳುವುದಕ್ಕೆ ಹೋಗಬೇಡಿ, ಬಯಲು ಸೀಮೆ ಪ್ರದೇಶ ಅಭಿವೃದ್ಧಿ ಬಗ್ಗೆ ಕೇಳುವುದಕ್ಕೆ

ಹೋಗಬೇಡಿ. ನೀವು ಕೇಳಿದರೆ ನಾವು ಉತ್ತರ written statement ನಲ್ಲಿ ಮಾಡುತ್ತೇವೆ. ವಿರೋಧ ಪಕ್ಷದ ನಾಯಕರು ಆರು ಗಂಟೆಗೆ ನಿಂತುಕೊಳ್ಳಿ ಎಂದರೆ ಆರು ಗಂಟೆಗೆ ನಿಂತುಕೊಳ್ಳಬೇಕು. ಕುಳಿತುಕೊಳ್ಳಿ ಎಂದರೆ ಕುಳಿತುಕೊಳ್ಳಬೇಕು, ನಿಮ್ಮ ಹತ್ತಿರ ಯಾವ ಕಡತ ಇದ್ದರೂ ಬೀರುವಿನಲ್ಲಿ ಇಟ್ಟುಕೊಳ್ಳಿ, ಆಮೇಲೆ ನೋಡೋಣ, ಇನ್ನು ನಾಲ್ಕು ವರ್ಷ ಟೈಂ ಇದೆಯಲ್ಲ. 60,000 ಕೋಟಿ ರೂಪಾಯಿಗೆ ನಾಲ್ಕು ವರ್ಷ ಟೈಂ ಇದೆ.

ಶ್ರೀ ಉಮೇಶ್ ವಿ.ಕತ್ತಿ : ವಿರೋಧ ಪಕ್ಷದ ನಾಯಕರಿಗೆ HKDB ಬಗ್ಗೆ ಮಾತನಾಡುವುದಕ್ಕೆ ಜವಾಬ್ದಾರಿ ಇದೆ. ಅವರು ಹಾಸನದ ಆಲೂಗಡ್ಡೆ ಬಗ್ಗೆ ಮಾತನಾಡುತ್ತಾರೆ, ಹಾಸನದಲ್ಲಿ ಮಳೆ ಬಗ್ಗೆ ಮಾತನಾಡುತ್ತಾರೆ, HKDB ಬಗ್ಗೆ ಮಾತನಾಡುವಂತಹ......

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಬಿಜಾಪುರದ ಕಬ್ಬು ಬೆಳೆಗಾರರ ವಿಚಾರದಲ್ಲಿ ನಾನು ಮಾತನಾಡಿದೆ. ಎಷ್ಟು ಜನ ಮೆಂಬರ್ಸ್ ಇದ್ದರು? ಈ ಸರ್ಕಾರದ್ದು ಏನೆಂದರೆ ಬಜೆಟ್ ಮೇಲೆ ನಡೆದ ಚರ್ಚೆಗೆ written statement ಮೂಲಕ ಉತ್ತರ ಕೊಟ್ಟರು. ಆ ಬಗ್ಗೆ ರಾಜ್ಯದ ಜನತೆಗೆ ಬೆಳಕು ಚೆಲ್ಲಬೇಕಲ್ಲ.

ಅಧ್ಯಕ್ಷರು : ರೇವಣ್ಣನವರೇ, ಬಿಲ್ ಬಗ್ಗೆ ಮಾತನಾಡಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಜಯಚಂದ್ರರವರೇ, ಇನ್ನೊಂದು ಪ್ರಮುಖ ವಿಷಯ ತಾವು ಮರೆತಿದ್ದೀರಿ. ಈ ಬೋರ್ಡ್, ಮೆಂಬರ್ಸ್, ಅಧಿಕಾರ, ಮ್ಯಾನೇಜ್‌ಮೆಂಟ್, ರಿಜೆಂಟ್ ಅದು ಒಂದು ಕಡೆ ಇರಲಿ, ಈಗಿರುವಂತಹ 1963ರ ಆಕ್ಟ್‌ನಲ್ಲಿ private Agriculture colleges ಬರುವುದಕ್ಕೆ ಅವಕಾಶ ಇಲ್ಲ. ಈ ಹೊಸ ಆಕ್ಟ್ ಪ್ರಕಾರ Private Agriculture colleges ಬರುವುದಕ್ಕೆ ಅವಕಾಶಗಳಿವೆ. ಅದು ಮೇಜರ್ ಚೇಂಜ್.

ಅಧ್ಯಕ್ಷರು : ರೇಣ್ಣನವರೇ continue ಮಾಡಿ.

ಶ್ರೀ ಬಸವರಾಜ ಬೊಮ್ಮಾಯಿ : ಈಗ ಯೂನಿವರ್ಸಿಟಿಯಿಂದ ಫಂಡ್ ತೆಗೆದುಕೊಳ್ಳುವುದಕ್ಕೆ ಬಹಳಷ್ಟು ಸುಲಭವಾಗಿ ಈ ಆಕ್ಟ್‌ನಲ್ಲಿ ಪ್ರಾವಿಜನ್ ಮಾಡಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ : ಅಧಿಕಾರವನ್ನು ರೈತರ ಕೈಗೆ ಕೊಡಿ ಎಂದು ಅಷ್ಟೇ ಕೇಳಿರುವುದು.

ಶ್ರೀ ಟಿ.ಬಿ.ಜಯಚಂದ್ರ : Vice Chancellorಗೆ ಅಧಿಕಾರ ಕೊಡಬಾರದು ಎಂದು ಮಾತ್ರ ಕೇಳಿದ್ದೇವೆ.

ಶ್ರೀ ಹೆಚ್.ಡಿ.ರೇವಣ್ಣ : ಈ ಸರ್ಕಾರ ಬಜೆಟ್‌ಗೆ ಉತ್ತರ ಕೊಡುವಾಗ written statement ಮೂಲಕ ಉತ್ತರ ಕೊಟ್ಟರು. ಈ ಬಿಲ್ 56 ಪುಟಗಳ written statement ಇದ್ದ ಹಾಗೆ ಇದೆ. ಕೃಷಿ ಸಚಿವರಿಗೆ ಇದರ ಬಗ್ಗೆ ಏನೂ ಗೊತ್ತಿಲ್ಲ. ಅಧಿಕಾರಿಗಳು ಮತ್ತು ಕೃಷಿ ವಿಶ್ವವಿದ್ಯಾನಿಲಯದ Vice Chancellor ರವರು ಏನು ಬರೆದು ಕೊಟ್ಟಿದ್ದಾರೋ ಅದನ್ನೇ ಬಿಲ್ ರೂಪದಲ್ಲಿ ತಂದು ಮಂಡಿಸಿದ್ದಾರೆ. ಈ ಬಿಲ್‌ನಲ್ಲಿ 10 ಜನ ಅಧಿಕಾರಿ ಗಳಿದ್ದಾರೆ. ನಾಚಿಕೆಯಾಗಬೇಕು. ಈ ಸರ್ಕಾರ ರೈತರ ಹೆಸರಿನ ಮೇಲೆ ಪ್ರಮಾಣವಚನ ತೆಗೆದುಕೊಳ್ಳುತ್ತಾರೆ. 10 ಜನ ಅಧಿಕಾರಿಗಳು, 3 ಜನ ರೈತರು ಅವರು ಅಲ್ಲಿ ಮಾತನಾಡುವುದಕ್ಕೆ ಅವಕಾಶವಿಲ್ಲ. ಕೋರಂ ಇಲ್ಲದೆ ಮೀಟಿಂಗ್ ಮಾಡುವುದೇ? ಇಂತಹ ಬಿಲ್‌ಗೆ ನಾವು ಅನುಮತಿಯನ್ನು ಕೊಡಬೇಕೆ, ಮಾನ್ಯ ವಿರೋಧ ಪಕ್ಷದ ನಾಯಕರ ಸವಲತ್ತಿನ ಬಗ್ಗೆ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ ಎಂದು ಹೇಳಿದರು. ಅದನ್ನೇ ಮಾನ್ಯ ಕಾನೂನು ಸಚಿವರು ಸಹ ಹೇಳಿದರು. ಈಗ ಇದಕ್ಕೆ ಏನು ಹೇಳುತ್ತಾರೆ? ಈ ಮಸೂದೆಯು ರೈತರ ಪ್ರಾತಿನಿದ್ಯಕ್ಕೆ ಬಿದ್ದ ಕೊಡಲಿಪೆಟ್ಟು ಎಂದು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ ಇದಕ್ಕೆ ಏನು ಹೇಳುತ್ತಾರೆ. ಇದನ್ನು ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಉಮೇಶ್ ವಿ.ಕತ್ತಿ : ಇದೇ ವಿಷಯ ಬೇರೆ ಬೇರೆ ರೀತಿಯಾಗಿ ಪತ್ರಿಕೆಯಲ್ಲಿ ಬಂದಿರಬಹುದು.

ಅಧ್ಯಕ್ಷರು : ಮಾನ್ಯ ಉಮೇಶ್ ಕತ್ತಿಯವರೆ, ತಾವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಮಂತ್ರಿಗಳು ಮಧ್ಯದಲ್ಲಿ ಮಾತನಾಡುವುದು ಸರಿಯಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ನಂಬರ್ ಪ್ಲೇಟ್.....

ಅಧ್ಯಕ್ಷರು : ಮಾನ್ಯ ರೇವಣ್ಣನವರೆ conclude ಮಾಡಿ ಮುಗಿಸಿ. ಅವರು ಮಾತನಾಡುವುದನ್ನು complete ಮಾಡಲಿ.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ : ಅವರು ಏನು ಬೇಕಾದರೂ ವಾದ ಮಂಡಿಸಲಿ.

ಅಧ್ಯಕ್ಷರು : ಮಂತ್ರಿಗಳು ಪದೇ ಪದೇ ಈ ರೀತಿ ಉತ್ತರವನ್ನು ಕೊಡುವುದಕ್ಕೆ ಹೋಗಬೇಡಿ. ಮಾನ್ಯ ರೇವಣ್ಣನವರು ಮೊದಲು ಮಾತನಾಡಿ ಮುಗಿಸಲಿ. ಪದೇ ಪದೇ ಎಲ್ಲರೂ reply ಕೊಡುವುದಕ್ಕೆ ಹೋದರೆ ಅದಕ್ಕೆ end ಇಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ತೋಟಗಾರಿಕೆ ಮಂತ್ರಿಗಳು ನಂಬರ್ ಪ್ಲೇಟ್ ಬಗ್ಗೆ ಹೇಳುತ್ತಾರೆ. ಅವರು ತನಿಖೆ ಆದೇಶ ವನ್ನು ಮಾಡಲಿ, ಇವತ್ತು ನಾನು prove ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರು, ಈ ಬಗ್ಗೆ ಸ್ವಲ್ಪ ಹೇಳಬೇಕು. ನಾನು ಮೊದಲನೇ ದಿನವೂ ಹೇಳಿದೆ ಈಗಲೂ ಸಹ ಹೇಳುತ್ತಿದ್ದೇನೆ. ನಿಮ್ಮ ಅನುಮತಿಯನ್ನು ಕೇಳಿದ ಮೇಲೆ ಎದ್ದು ನಿಂತು ಅವರು ಮಾತನಾಡ ಬೇಕಲ್ಲವೇ?

ಅಧ್ಯಕ್ಷರು : ಅವರು ಪದೇ ಪದೇ ಎದ್ದು ನಿಂತುಕೊಳ್ಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಮಂತ್ರಿಗಳೇ ಈ ರೀತಿಯಾಗಿ ಮಾಡಿದರೆ ಏನು ಮಾಡಬೇಕು?

ಅಧ್ಯಕ್ಷರು : ಆ ಬಗ್ಗೆ ನಾನು ಅವರಿಗೆ ಹೇಳುತ್ತಿದ್ದೇನೆ. ಆದರೂ ಪದೇ ಪದೇ ಎದ್ದುನಿಂತುಕೊಂಡು ಮಾತನಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಮೇಷ್ಟ್ರೆ ಈ ರೀತಿಯಾಗಿ ಎದ್ದುನಿಂತುಕೊಂಡು ಕುಣಿದರೆ ಸ್ಟೂಡೆಂಟ್ಸ್ ಏನು ಮಾಡುತ್ತಾರೆ?

ಅಧ್ಯಕ್ಷರು : ಮಾನ್ಯ ಕೃಷಿ ಸಚಿವರು ಉತ್ತರವನ್ನು ಕೊಡಬೇಕು. ಅವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಸಿದ್ದರಾಮಯ್ಯ : This is not correct.

ಅಧ್ಯಕ್ಷರು : ಯಾರಾದರೂ explain ಮಾಡಲಿ.

ಶ್ರೀ ಸಿದ್ದರಾಮಯ್ಯ : ನಾನು ಕೊಡುತ್ತೇನೆ ಎಂದು ಮಂತ್ರಿಗಳು ಕೇಳಬೇಕು. ಅವರು ಅನುಮತಿಯನ್ನು ತೆಗೆದುಕೊಂಡು ಮಾತನಾಡಲಿ.

ಶ್ರೀ ಹೆಚ್.ಡಿ.ರೇವಣ್ಣ : ನಮ್ಮ ಬ್ರದರ್ ಮಾತನಾಡಲಿ, ಆಮೇಲೆ ಏನಾದರೂ ಹೊಸ ವಿಷಯ ಇದ್ದರೆ ಮಾತನಾಡೋಣ.

ಅಧ್ಯಕ್ಷರು : ತಮ್ಮದು ಇನ್ನು ಮುಗಿದಿಲ್ಲವೇ?

ಶ್ರೀ ಹೆಚ್.ಡಿ.ರೇವಣ್ಣ : ಯಾವುದಾದರೂ ಇದ್ದರೆ ಬೆಳಗಾಂದು......

ಶ್ರೀ ಎಸ್.ಸುರೇಶ್‌ಕುಮಾರ್ : ಮಾನ್ಯ ರೇವಣ್ಣನವರೆ ಒಂದು ನಿಮಿಷ ತಾಳಿ ನಾನು ಮಾತನಾಡುತ್ತೇನೆ. ಈ ಸದನದಲ್ಲಿ......

ಶ್ರೀ ಸಿದ್ದರಾಮಯ್ಯ : ಮಂತ್ರಿಗಳೆಲ್ಲರನ್ನು ಬಿಟ್ಟುಬಿಟ್ಟಿದ್ದೀರಾ?

ಶ್ರೀ ಎಸ್.ಸುರೇಶ್‌ಕುಮಾರ್ : ಅವರೆಲ್ಲರೂ ಕುಳಿತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಒಂದು ನಿಮಿಷ ಅವರು request ಮಾಡಬೇಕು. ಅವರು yield ಆಗುತ್ತೀರಾ ಎಂದು ಕೇಳಬೇಕು. ಇದನ್ನು ಯಾರು ಕೇಳುವುದಿಲ್ಲ. ನೀವು ಅನುಮತಿಯನ್ನು ಕೊಡುತ್ತೀರಾ ಎಂದು ಯಾರೂ ಕೇಳುವುದಿಲ್ಲ. Point of Order raise ಮಾಡಿದ್ದೇವೆಂದು ಅದನ್ನು ಸಹ ಹೇಳುವುದಿಲ್ಲ. ಸುಮ್ಮನೆ ನಿಂತುಕೊಂಡು ಏನಾದರೂ ಹೇಳುತ್ತಾರೆ.

ಶ್ರೀ ಎಸ್.ಸುರೇಶ್‌ಕುಮಾರ್ : ನಾನು ಪಾಠವನ್ನು ಕಲಿತಿದ್ದೇನೆಂದು ಆಯಿತು.

ಶ್ರೀ ಸಿದ್ದರಾಮಯ್ಯ : ನಾನು ನಿಮಗೆಲ್ಲಾ ಹೇಳುತ್ತಿರುವುದು.

ಶ್ರೀ ಎಸ್. ಸುರೇಶ್‌ಕುಮಾರ್ : Thank you.

ಶ್ರೀ ಸಿದ್ದರಾಮಯ್ಯ : Not to you. ನಾನು ನಿಮಗಲ್ಲ ಹೇಳುತ್ತಿರುವುದು ಜನರಲ್ ಆಗಿ ಹೇಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ತಾವು continue ಮಾಡಿ.

ಶ್ರೀ ಸಿದ್ದರಾಮಯ್ಯ : ತಾವು ಕೋಪಿಸಿಕೊಂಡರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ನಾನು ಕಾನೂನು ಸಚಿವರಲ್ಲಿ ಮನವಿಯನ್ನು ಮಾಡುವುದಿಷ್ಟೇ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ನಿಲುವಳಿ ಸೂಚನೆಯನ್ನು ತಂದರು. ರಾಜ್ಯದಲ್ಲಿ ಏನಾಗಿದೆ ಅದರ ಬಗ್ಗೆ ಚರ್ಚೆ ಮಾಡೋಣವೆಂದು ತಂದರು. ಅವರು ಪ್ರಜಾವಾಣಿ ಪತ್ರಿಕೆಯನ್ನು ಕೋರ್ಟ್ ಮಾಡಿದರು. ನಾನು ಅದೇ ಉದ್ದೇಶಕ್ಕಾಗಿ ಮಾನ್ಯ ಕಾನೂನು ಸಚಿವರಿಗೆ ಹೇಳುತ್ತೇನೆ. ವಿರೋಧ ಪಕ್ಷದ ನಾಯಕರಿಗೆ ಇರುವ ಸವಲತ್ತನ್ನು ಸರ್ಕಾರದ ದಾಖಲಾತಿಯಲ್ಲಿ 60,000 ಕೋಟಿ ರೂಪಾಯಿಗಳ ಬಗ್ಗೆ ದಾಖಲಾತಿಯನ್ನು ತೆಗೆದುಕೊಳ್ಳಬೇಕಲ್ಲ. ಒಬ್ಬ ವಿರೋಧ ಪಕ್ಷದ ನಾಯಕರು ಅದರ ಬಗ್ಗೆ ಕೇಳಿದಾಗ ಪ್ರಜಾವಾಣಿ ಪತ್ರಿಕೆಯ editorialನಲ್ಲಿ ಬಂದಿದೆ ಎಂದು

ಹೇಳಿದರು. ಈ ಪ್ರಜಾವಾಣಿ ಪತ್ರಿಕೆಯ editorial ನಲ್ಲಿ ಈ ಮಸೂದೆಯ ಬಗ್ಗೆ ಏನು ಬಂದಿದೆ. ಇದನ್ನು ಓದಬೇಕೇ, ಮಾನ್ಯ ಶ್ರೀನಿವಾಸ್‌ರವರೆ, ಪ್ರಜಾವಾಣಿ ಪತ್ರಿಕೆ ಸೋಮವಾರ 17ನೇ ಜುಲೈ "ರೈತರ ಪ್ರಾತಿನಿಧ್ಯಕ್ಕೆ ಕೊಡಲಿ ಪೆಟ್ಟು" ಇದನ್ನು ಮಾನ್ಯ ಸಭಾಧ್ಯಕ್ಷರೆ ನಿಮಗೂ ಸಹ ಕಳುಹಿಸಿ ಕೊಡುತ್ತೇನೆ. ಇದನ್ನು ತಾವು ದಯಮಾಡಿ ಓದಿ.

ಅಧ್ಯಕ್ಷರು : ಕಳುಹಿಸಿಕೊಡಿ.

ಶ್ರೀ ಹೆಚ್.ಡಿ.ರೇವಣ್ಣ : ಈಗ ಈ ಮಸೂದೆ 56 ಪುಟ ಇದೆ, ಒಬ್ಬ ವಿರೋಧ ಪಕ್ಷದ ನಾಯಕರಿಗೆ ವಿರೋಧ ಪಕ್ಷದ ಸದಸ್ಯರಿಗೆ ಈ ಸರ್ಕಾರ written statement ಮೂಲಕ ಉತ್ತರ ಕೊಡುತ್ತಾರೆ. 60,000 ಕೋಟಿ ರೂಪಾಯಿಗಳ ಬಜೆಟ್ ಮೇಲೆ ಮಾನ್ಯ ಮುಖ್ಯಮಂತ್ರಿಗಳು ನಾಳೆ ಬೆಳಿಗ್ಗೆ 10.00 ಗಂಟೆಗೆ ಉತ್ತರವನ್ನು ಕೊಡುತ್ತಾರೆ. ಈ ಸರ್ಕಾರವು ಅಧಿಕಾರಿಗಳು ಬರೆದುಕೊಟ್ಟ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕಾಗಿದೆ ಎಂದು ತಾವು ನನಗೆ ಮಾತನಾಡುವುದಕ್ಕೆ ಕಾಲಾವಕಾಶವನ್ನು ಕೊಡಲಿಲ್ಲ. ಈ ರಾಜ್ಯದ 5 ಕೋಟಿ ಜನರ ಹಿತ ಮುಖ್ಯವೋ ಅವರ ಪಕ್ಷದ ಕಾರ್ಯಕಾರಿ ಸಮಿತಿಯು ಸಭೆ ಮುಖ್ಯವೋ ಎಂದು ದಯಮಾಡಿ ಹೇಳಲಿ.

ಅಧ್ಯಕ್ಷರು : ತಾವು ಬಿಲ್ ಬಗ್ಗೆ ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ : ನಾನು ಬಿಲ್ ಬಗ್ಗೆಯೇ ಮಾತನಾಡು ತ್ತಿರುವುದು.

(ಗೊಂದಲ)

ಈ ಬಿಲ್‌ನ್ನು ವಾಪಸ್ಸು ತೆಗೆದುಕೊಳ್ಳಬೇಕು. ..

(ಗೊಂದಲ)

ಅಧ್ಯಕ್ಷರು : ಮಾನ್ಯ ರಮಾನಾಥರೈರವರೆ ತಾವು ಮಾತನಾಡಿ.

ಒಬ್ಬ ಮಾನ್ಯ ಸದಸ್ಯರು : ಬಿಲ್ ಬಗ್ಗೆ ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ : ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಬಿಲ್ ತಂದಿರುವುದು ಒಳ್ಳೆಯದು ಎಂದು ತಾವು ಒಪ್ಪಿಕೊಂಡರೆ ನೀವು ಹೇಳಿದನ್ನು ನಾವು ಒಪ್ಪಿಕೊಳ್ಳುತ್ತೇವೆ ಸ್ವಾಮಿ.

ಅಧ್ಯಕ್ಷರು : ಮಾನ್ಯ ರಮಾನಾಥ ರೈರವರೆ ತಾವು ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ : ಈ ಬಿಲ್‌ನಲ್ಲಿ ಇರುವುದೆಲ್ಲಾ ರೈತರ ಪರವಾಗಿದೆ ಎಂದು ತಾವು ಒಪ್ಪಿಕೊಂಡರೆ ತಾವು ರೈತರ ಮಕ್ಕಳಿದ್ದೀರಿ

ಎಂದು ಅರ್ಥ. ಈ ಬಿಲ್ ರೈತರ ಪರವಾಗಿದೆ ಎಂದು ಹೇಳಿದರೆ ನಾವು ಈ ಬಗ್ಗೆ ಏನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಈ ಬಿಲ್ 56 ಪುಟಗಳಷ್ಟಿದೆ. ಒಂದು written statement ಅನ್ನು ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ಗೆ ಉತ್ತರವಾಗಿ ಕೊಟ್ಟಿದ್ದಾರೆ. ಅದೇ ರೀತಿಯಾಗಿ ಈ ಬಿಲ್ ರೈತರ ಪರವಾಗಿದ್ದರೆ ನಾನು ಒಪ್ಪಿಕೊಂಡು ಬಿಡುತ್ತೇನೆ. ನಾನು ರೈತರ ಪರವಾಗಿ ಹೇಳುವುದು ಈ ಬಿಲ್ ರೈತರ ಪರವಾಗಿಲ್ಲ. ಆದ್ದರಿಂದ ದಯಮಾಡಿ ವಾಪಸ್ಸು ತೆಗೆದುಕೊಳ್ಳಿ. Septemberನಲ್ಲಿ ಈ ರಾಜ್ಯದ ಹಗರಣಗಳ ಬಗ್ಗೆ ಚರ್ಚೆ ಮಾಡಲು ವಿಶೇಷ ಅಧಿವೇಶನ ಕರೆಯುತ್ತಿದ್ದೀರಿ. ಆ ಟೈಮ್‌ನಲ್ಲಿ ಸವಿಸ್ತಾರವಾಗಿ ಒಂದು ಅರ್ಧದಿನ ರೈತರ ಪರವಾಗಿ ಚರ್ಚೆ ಮಾಡೋಣ. 1963ರ Act ಪ್ರಕಾರ ರಾಯಚೂರಿನಲ್ಲಿ Agriculture university ಮಾಡುವುದಕ್ಕಾಗುವುದಿಲ್ಲವೇ? ಎರಡು ಕಡೆಯಲ್ಲಿ university ಮಾಡಿ. ನಾವು ಬೇಡವೆಂದು ಹೇಳುವುದಿಲ್ಲ. ಹಳೆಯ act ನಲ್ಲಿಯೇ university ಯನ್ನು ಮಾಡಿ.

ಶ್ರೀ ಕೆ.ಎಸ್.ಈಶ್ವರಪ್ಪ : ನಾನು ಒಂದು ನಿಮಿಷ ಮಾತನಾಡುತ್ತೇನೆ.

ಶ್ರೀ ಬಿ.ರಮಾನಾಥರೈ : ಮಾನ್ಯ ಈಶ್ವರಪ್ಪನವರೆ, ಮಾನ್ಯ ಸಭಾಧ್ಯಕ್ಷರು ನನ್ನ ಹೆಸರನ್ನು ಕರೆದಿದ್ದಾರೆ. ನಮಗೇನು ಮಾತನಾಡುವ ಚಪಲ ಇಲ್ಲ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಒಂದು ಸಾರಿ ಮಾತನಾಡಿ ಮುಗಿಸಲಿ.

ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೆ., ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ಮಾನ್ಯ ನಾಡಗೌಡರೆ ತಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ : ಹಾಗಾದರೆ ಮಾತ್ರ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಸನ್ಮಾನ್ಯ ಅಧ್ಯಕ್ಷರೆ, ಇದು act ನಲ್ಲಿ ಇಲ್ಲ.

ಅಧ್ಯಕ್ಷರು " ಅವರದು ಮುಗಿಯಲಿ ನಿಮಗೂ ಸಹ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಮಾನ್ಯ ಮಂತ್ರಿಗಳು ಏನು intervene ಮಾಡಿದ್ದಾರೆ.

ಶ್ರೀ ಎಸ್.ಎ.ರವೀಂದ್ರನಾಥ್ : ಕೃಷಿ ವಿಶ್ವವಿದ್ಯಾನಿಲಯದ ಬಿಲ್‌ನ್ನು ತಂದಿರುವುದು ಇದು ರೈತರ ಪರವಾಗಿ ಇರುವುದೇ ಹೊರತು ಬೇರೆ ಏನು ಅಲ್ಲ. ನಮ್ಮ ರೈತರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಅಧಿಕಾರೇತರೆಲ್ಲರಿಗೂ ಸಹ ರೈತರ ಪ್ರತಿನಿಧಿಗಳಾಗಿ ಅವರು ಸಹ ಸರ್ಕಾರದ ಪ್ರತಿನಿಧಿಗಳನ್ನಾಗಿ ರಾಜ್ಯಪಾಲರೆ ನಾಮಿನೇಷನ್ ಮಾಡುತ್ತಾರೆ. ಇನ್ನು 3 ಜನರನ್ನು ಸರ್ಕಾರದವರು ಮಾಡುತ್ತಾರೆ. ನಮ್ಮ ಎಲ್ಲಾ ಅಧಿಕಾರಿಗಳು ಇರುವಂತಹದ್ದು ಸ್ಪಷ್ಟವಾಗಿರುವಂತಹದ್ದು.

ಅಧ್ಯಕ್ಷರು : ನಿಮಗೂ ಅವಕಾಶ ಕೊಡುತ್ತೇನೆ ಇಲ್ಲವೆಂದು ಹೇಳುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಕಾನೂನು ಸಚಿವರಿಗೆ ಹೇಳುವುದು ಇಷ್ಟೆ. 1963 ರ ಆಕ್ಟ್‌ನಲ್ಲಿ 6 ಜನ ರೈತಾಪಿ ಜನರು ಇರುತ್ತಿದ್ದರು ಅದನ್ನು ತರಲಿ. 6 ಜನರನ್ನು Nomination ಅವರೇ ಮಾಡಿ ಕೊಳ್ಳಲಿ ನಮ್ಮ ಅಭ್ಯಂತರವೇನಿಲ್ಲ. 1963ರ ಆಕ್ಟ್‌ನಲ್ಲಿ ಏನು ಇತ್ತು ಅದನ್ನು ಮಾಡಲಿ. ಒಂದು ಸಲ Nomination ಆದ ಮೇಲೆ ಅವರ ಅಧಿಕಾರವನ್ನು Vice Chancellor ಯಾವಾಗ ಬೇಕಾದರೂ ತೆಗೆಯಬಹುದು. ಏಕೆಂದರೆ ಸರ್ಕಾರಗಳು ಚೇಂಜ್ ಆಗುತ್ತವೆ ರೈತರು ಮೂರು ವರ್ಷಕ್ಕೆ Nomination ಆದ ಮೇಲೆ ಅವರು ಮೂರು ವರ್ಷ ಇರಬೇಕು. ಅದಕ್ಕೆ ಬೇಕಾದ Amendment ಏನಿದೆ ಅದು ತರಬೇಕು. ಮೂರು--ನಾಲ್ಕು ಜನ ಅಧಿಕಾರಿಗಳು ಸೇರಿ ಮಾಡಿಕೊಳ್ಳುವ ಕೋರಂ ಏನು ಇದೆಯಲ್ಲಾ, ಅದಕ್ಕೆ Amendment ತರಬೇಕಾಗುತ್ತದೆ. 56 ಪುಟಗಳ ಒಂದು ಬಿಲ್ ಇದೆ ಇದನ್ನು ಬೇಕಾದರೆ ಮುಂದಿನ ಅಧಿವೇಶನಕ್ಕೆ ತರಲಿ. ಮಾನ್ಯ ವಿರೋಧ ಪಕ್ಷದ ನಾಯಕರು ಎಲ್ಲಾ ವಿಷಯವನ್ನು ಬಜೆಟ್ ಮೇಲೆ ಹೇಳಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ, ಒಂದಾದರೂ ಉತ್ತರ ಇದೆಯಾ ಸ್ವಾಮಿ. ಇದರಲ್ಲಿ ಉತ್ತರ ಇದ್ದರೆ ನಾನು ಒಪ್ಪಿಕೊಂಡು ಬಿಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ಸದಸ್ಯರುಗಳಿಗೆ ಅವಕಾಶವನ್ನು ಕೊಟ್ಟು ಚರ್ಚೆ ಮಾಡಿದ ಮೇಲೆ ವಿರೋಧ ಪಕ್ಷದ ನಾಯಕರು ಹೇಳಿರುವುದಕ್ಕೆ ಗೌರವವಾದರೂ ಬೇಡವೇ? ಸರ್ಕಾರ ಕೊಟ್ಟ Written statementನಲ್ಲಿ ಸರ್ಕಾರದ ಏನು ಉತ್ತರ ಇದೆ, ಅಧಿಕಾರಿಗಳು ಬರೆದು ಕೊಟ್ಟರು, ಮಾನ್ಯ ಮುಖ್ಯಮಂತ್ರಿಗಳು ಒಂದು Written statement ಕೊಡುತ್ತೇನೆಂದು

ಅಧ್ಯಕ್ಷರಿಗೆ ಹೇಳಿದ ಮೇಲೆ ಅವರು ಏನು ಮಾಡುತ್ತಾರೆ ಅವರು ಅದನ್ನೇ ಬರೆದುಕೊಳ್ಳಬೇಕಾಗುತ್ತದೆ. ಅದೇ ನಾಳೆ ಬೆಳಗ್ಗೆ ಪತ್ರಿಕೆಯಲ್ಲಿ ಬರುತ್ತದೆ. ವಿರೋಧ ಪಕ್ಷದ ನಾಯಕರು ಹೇಳಿದ್ದಕ್ಕೆ ಇಲ್ಲಿ ಉತ್ತರವೇ ಇಲ್ಲವೆಂದು ಹೇಳಬೇಕಾಗುತ್ತದೆ. Written statement ಸರ್ಕಾರದ ಉತ್ತರವೆಂದು ಹೇಳಬೇಕಾಗುತ್ತದೆ. ಆದ್ದರಿಂದ ಈಗ ಈ ಬಿಲ್‌ನ್ನು ವಾಪಸ್ಸು ತೆಗೆದುಕೊಂಡು ಸೆಪ್ಟೆಂಬರ್‌ನಲ್ಲಿ ತೆಗೆದುಕೊಂಡು ಬರಲಿ, ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ) : ಮಾನ್ಯ ಅಧ್ಯಕ್ಷರೆ, ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯಗಳ ವಿಧೇಯಕ-2009ನ್ನು ನಾನು ಸ್ವಾಗತ ಮಾಡುತ್ತೇನೆ. ಇದರಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡುವುದರ ಮುಖಾಂತರ ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ. ಈ ಮೊದಲು ಇದ್ದಂತೆ 6 ಜನ ರೈತ ಪ್ರತಿನಿಧಿಗಳು ಇರಬೇಕು. ಈಗಾಗಲೇ ಈ ವಿಧೇಯಕದಲ್ಲಿ ತಂದಿರತಕ್ಕಂಥ ಕೆಲವು ಅಧಿಕಾರಿಗಳನ್ನು ಕೈಬಿಟ್ಟು ಅಂದರೆ, Commissioner of Agriculture ಮತ್ತು ಒಬ್ಬರು Dean ಏನಿದ್ದಾರೆ ಅವರನ್ನು ಕೈಬಿಡಬೇಕು ಮತ್ತು Registrar ಅವರನ್ನು ಕೈಬಿಟ್ಟು ಅವರ ಜಾಗಕ್ಕೆ ಇನ್ನುಳಿದ ರೈತ ವರ್ಗದವರನ್ನು ಮತ್ತು Agriculture Graduate ಗಳನ್ನು ಇನ್ನು ಹೆಚ್ಚಿಗೆ ಮಾಡಿ ಈ ಒಂದು ವಿಧೇಯಕವನ್ನು ಅಂಗೀಕರಿಸಬೇಕು. ಈ ಮೊದಲು 6 ಜನ ರೈತ ಪ್ರತಿನಿಧಿಗಳ ಅವಕಾಶ ಇತ್ತು ಅದೇ ರೀತಿ ಮಾಡಿ ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ನಾನು ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಕೆ. ಎಂ. ವಿರೂಪಾಕ್ಷಪ್ಪ (ಚನ್ನಗಿರಿ) : ಮಾನ್ಯ ಅಧ್ಯಕ್ಷರೆ, ಕೃಷಿ ವಿಶ್ವವಿದ್ಯಾನಿಲಯಗಳ ವಿಧೇಯಕ-2009ನ್ನು ಏನು ತಂದಿದ್ದಾರೆ, ಇದೊಂದು ಪ್ರಗತಿಪರ ಬದಲಾವಣೆ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಈ ಹಿಂದೆ Nomination ಮಾಡತಕ್ಕಂಥ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಅವಕಾಶ ಇರಲಿಲ್ಲ. ಅಂತಹ ಅವಕಾಶವನ್ನು ಈ ಮಸೂದೆಯನ್ನು ಕಲ್ಪಿಸಿದ್ದಾರೆ, ಇದು ನಿಜಕ್ಕೂ ಮೆಚ್ಚಬೇಕಾದಂಥ ಮತ್ತು ಪರಿಶಿಷ್ಟ ಜಾತಿ:ಪಂಗಡದವರ ಪರವಾಗಿ ಇರತಕ್ಕಂಥ ಸರ್ಕಾರ ಎನ್ನುವುದನ್ನು ತೋರಿಸುವ ಒಂದು ವಿಧೇಯಕ ಇದು. ಆದ್ದರಿಂದ ಇದನ್ನು ಸ್ವಾಗತಿಸ

ಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಕೃಷಿ ಸಚಿವರು ಮಾತನಾಡುತ್ತಾ ಹೇಳಿದರು. ಈಗ ತಿದ್ದುಪಡಿಯನ್ನು ನಾನು ಮಾಡುತ್ತೇನೆಂದು ಹೇಳಿದರು. ಅಧಿಕಾರಿಗಳಿಗಿಂತ ಅಧಿಕಾರೇತರ ಸದಸ್ಯರನ್ನು ಹೆಚ್ಚಾಗಿ ಮಾಡುವುದರ ಮೂಲಕ ಈ ವಿಧೇಯಕವನ್ನು ಇಲ್ಲಿ ಪಾಸ್ ಮಾಡಬೇಕು. ಇಲ್ಲಿ Vice Chancellorಗಳಿಗೆ ಒಂದು termಗೆ ಅವಕಾಶವನ್ನು ಕಲ್ಪಿಸಿದ್ದಾರೆ. ಒಬ್ಬೊಬ್ಬ Vice Chancellor ಗಳು ಎರಡೆರಡು ಭಾರಿ ಆಯ್ಕೆಯಾಗುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಕೃಷಿ ತಜ್ಞರು ಒಂದು ನಿಮಿಷ ಕೇಳಿ ಇದರಲ್ಲಿ ಇದೆ. ಒಂದು ನಿಮಿಷ ಮಾತನಾಡುವುದಕ್ಕೆ ನನಗೆ ಅವಕಾಶವನ್ನು ಕೊಡಿ, ನೀವು ಮಾತನಾಡುವಾಗ ನಾವು ಕೇಳಲಿಲ್ಲವೆ?

ಅಧ್ಯಕ್ಷರು : ದಯವಿಟ್ಟು ಮಧ್ಯೆದಲ್ಲಿ interpret ಮಾಡುವುದರಲ್ಲಿ ಹೋಗಬೇಡಿ.

ಶ್ರೀ ಕೆ.ಎಂ. ವಿರೂಪಾಕ್ಷಪ್ಪ : ಇರುವ ಅವಕಾಶವನ್ನು ಒಂದೇ ಬಾರಿಗೆ nominate ಆಗುವುದಕ್ಕೆ ಅವಕಾಶವನ್ನು ಕಲ್ಪಿಸಿದ್ದಾರೆ. Board of Membersಗೆ ಕೂಡ ಒಂದು termಗೆ ಮಾತ್ರ ಅವಕಾಶವನ್ನು ಕಲ್ಪಿಸಿದ್ದಾರೆ. ಉದಾಹರಣೆಗೆ ಧಾರವಾಡದಲ್ಲಿ ಒಬ್ಬರು ನಾಲ್ಕು ಸಲ ಸದಸ್ಯರಾಗಿದ್ದಾರೆ. ಬೆಂಗಳೂರಿನಲ್ಲಿ ಎರಡೆರಡು ಬಾರಿ ಸದಸ್ಯರಾಗಿದ್ದಾರೆ. ಅಂಥವರಿಗೆ ಅವಕಾಶವಿಲ್ಲದಂತೆ ಒಂದೇ ಬಾರಿಗೆ ಅವಕಾಶ ಮಾಡಿರುವುದರಿಂದ ಬಹಳಷ್ಟು ಜನ ಬುದ್ಧಿವಂತ ಕೃಷಿಕರು ಮತ್ತು ಕೃಷಿ ತಜ್ಞರು ಸದಸ್ಯರಾಗುವುದಕ್ಕೆ ಅವಕಾಶವಿದೆ. ಆದ್ದರಿಂದ ಕೃಷಿ ಸಚಿವರು ತಂದಿರುವ ಈ ಬಿಲ್‌ನ್ನು ಪಾಸ್ ಮಾಡಬೇಕು. ಅಧಿಕಾರೇತರ ಸದಸ್ಯರನ್ನು ಜಾಸ್ತಿ ಮಾಡಬೇಕು. ಸಭೆಯನ್ನು ನಡೆಸತಕ್ಕಂಥ ಸಂದರ್ಭದಲ್ಲಿ ಇರುವ quorum ಗೆ ತಿದ್ದುಪಡಿಯನ್ನು ಮಾಡಬೇಕು. ಅದರಲ್ಲಿ ಕೊನೆಯ ಪಕ್ಷ 50% ಜಾಸ್ತಿ ಸದಸ್ಯರನ್ನು ಇಟ್ಟುಕೊಂಡು ಸಭೆಯನ್ನು ನಡೆಸಬೇಕು. ಸಣ್ಣಪುಟ್ಟ ತಿದ್ದುಪಡಿಗಳೊಂದಿಗೆ ಈ ಬಿಲ್‌ನ್ನು ಪಾಸ್ ಮಾಡಬೇಕೆಂದು ಹೇಳಿ ತಮ್ಮ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಎಸ್.ನಾಡಗೌಡ (ಅಪ್ಪಾಜಿ) : ಮಾನ್ಯ ಅಧ್ಯಕ್ಷರೆ, ಈ ವಿದೇಯಕದ ಮೇಲೆ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತಾ, ಮೊದಲನೆಯದಾಗಿ ನಮ್ಮ ಕೃಷಿ ಮಂತ್ರಿಗಳಿಗೆ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಯಾವ ಕಾರಣಕ್ಕೋಸ್ಕರ ಈ ಮಸೂದೆಯನ್ನು

ತಂದಿದ್ದೀರಿ. ಇದು ನಿಜಕ್ಕೂ ಮೇಲ್ನೋಟಕ್ಕೆ ಆ ಮಸೂದೆ ತಾವು ಹೇಳುವ ರೀತಿಯಲ್ಲಿ ನಾವು ರೈತರ ಮತ್ತು ವ್ಯವಸಾಯ ಮಾಡತಕ್ಕಂಥ ವರ್ಗಕ್ಕೆ ಹೆಚ್ಚು ಪ್ರಾತಿನಿಧ್ಯ ಕೊಡಬೇಕು ಮತ್ತು Universityಗಳಲ್ಲಿ ಒಂದು ಗುಣಮಟ್ಟದ ಆಡಳಿತ ಬರಬೇಕೆಂದು ಏನು ಹೇಳುತ್ತೀರಿ, ಅದರ ಬಗ್ಗೆ ಮಾಜಿ ಉಪ ಕುಲಪತಿಗಳು ಹಿಂದೂ ಪತ್ರಿಕೆಯಲ್ಲಿ 19-1-2009ರಲ್ಲಿ Mr. Dwarakanath, who is also a former Vice Chancellor of University of Agriculture Sciences, Bangalore took exception to increasing the representation to bureaucracy in the University's Governing Board, which is headed by the Vice Chancellor. He told the Hindu. Having 5 IAS officers on the Board will affect the autonomy of the University, as officials will dominate the Board proceedings. This will harm the interest of the university. ಇದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಆಮೇಲೆ ತಾವು ಈಗ ಸ್ಪಷ್ಟೀಕರಣ ಕೊಟ್ಟಿರುತ್ತೀರಿ. ಇದಕ್ಕೆ ತಿದ್ದುಪಡಿ ಮಾಡಿ ರೈತ ಸಮುದಾಯ ದಿಂದ ಹೆಚ್ಚು ಜನ ಬರುವವರಿಗೆ ಅನುಕೂಲವಾಗುವಂತೆ ಒಂದು ತಿದ್ದುಪಡಿ ತಂದು ಇಬ್ಬರನ್ನು ಕಡಿಮೆ ಮಾಡಿ ಪ್ರಾತಿನಿಧ್ಯ ಹೆಚ್ಚಿಸುತ್ತೇವೆಂದು ಹೇಳಿದಿರಿ ಅದನ್ನು ಸ್ವಾಗತಿಸುತ್ತೇವೆ. ಅಲ್ಲಿ ಇನ್ನೊಂದು ಪದವನ್ನು ಉಪಯೋಗ ಮಾಡಿದ್ದಾರೆ. ಏನೆಂದರೆ Second Term ಯಾರು ನಿಮ್ಮ Elected Members ಇದ್ದಾರೆ ಅವರು ಪುನಃ ಅಲ್ಲಿ ಹೋಗುವುದಕ್ಕೆ ಅವಕಾಶವಿಲ್ಲ. ಏಕೆ ಇದನ್ನು ತರುತ್ತಿದ್ದೀರಿ? ಅಲ್ಲಿ ನಾಲ್ಕು ಜನ ಬಂದಿದ್ದಾರೆಂದು ಹೇಳಿದ್ದೀರಲ್ಲಾ? Yes, ನಾನು ಏಕೆ ಹೇಳುತ್ತಿದ್ದೇ ನೆಂದರೆ, ಯಾಕೆ ಈ ಷರತ್ತನ್ನು ಹಾಕುತ್ತಿದ್ದೀರಿ. ಎರಡು ಸಲ ತಮ್ಮ ಪಕ್ಷದ ಬಿಜೆಪಿ ಸದಸ್ಯರು ಅಲ್ಲಿ ಬರಲಿಲ್ಲವೆ? Why do you Prevent them when we feel, they are experts in the subject ಅವರ servicesನ್ನು ತೆಗೆದು ಕೊಳ್ಳೋಣ. ಅವರ ಅನುಭವವನ್ನು ಪಡೆಯಬೇಕು ವಿನಹಃ ಅವರು ಒಂದು ಪಕ್ಷಕ್ಕೆ Loyal ಇಲ್ಲವೆಂದು ದಿಢೀರನೆ ಬದಲಾವಣೆ ಮಾಡತಕ್ಕಂಥ ಈ ಶಾಸನ ಸರಿಯಿಲ್ಲ. ಈ ಶಾಸನ ರೈತರ interestಗೆ ಧಕ್ಕೆ ತರುವಂಥದ್ದು ಆಗುವುದಿಲ್ಲವೆ? ದಯವಿಟ್ಟು ಇದರ ಬಗ್ಗೆ ಚಿಂತನೆಯನ್ನು ಮಾಡಿ. ಕೊನೆಯ ಪಕ್ಷ ಎರಡು term ಎನ್ನುವುದಾದರೂ introduce ಮಾಡಿ. ಇವತ್ತು Reservation

policy ಯನ್ನು let us all admit here. Reservation roster system ಅನ್ನು ಜಿಲ್ಲಾ ಪಂಚಾಯತ್‌ನಲ್ಲಿ 20 ಮತ್ತು 10 ತಿಂಗಳಿಗೊಂದು ಸಲ ಜಿಲ್ಲಾ ಪಂಚಾಯತಿಯಲ್ಲಿ roster systemನ್ನು ತಂದಿದ್ದೇವಲ್ಲಾ ಯಾವ ಮಟ್ಟದಲ್ಲಿ ಇವತ್ತು ಅಲ್ಲಿ ದುಷ್ಪರಿಣಾಮವಾಗಿದೆ ಎನ್ನುವುದು ತಮಗೆ ಗೊತ್ತು ಅದನ್ನು 5 ವರ್ಷಕ್ಕೆಂದು ಸೀಮಿತ ಮಾಡಬೇಕಾಗಿತ್ತು. ಅವನಿಗೆ ಒಂದು term ಎಂದ ಮೇಲೆ ಅವನು ವ್ಯಾಪಾರ ಮಾಡಿಕೊಂಡು ಮನೆಗೆ ಹೋಗುತ್ತಾನೆ. ಅವನು ಒಳ್ಳೆಯ ಹೆಸರು ತೆಗೆದುಕೊಳ್ಳಬೇಕು ಅಥವಾ ನಾನು ಕೀರ್ತಿ ತೆಗೆದುಕೊಳ್ಳಬೇಕು. ಅಲ್ಲಿ ಸೇವೆ ಸಲ್ಲಿಸಬೇಕು ಎನ್ನುವ ಮನೋಭಾವನೆ ಅವನ ಹತ್ತಿರ ಉಳಿದುಕೊಳ್ಳುವುದಿಲ್ಲ. ಅವನು ಮುಂದೆ ಯಾವ ಸರ್ಕಾರ ಬರುತ್ತದೆ ನಾನು nominate ಆಗುತ್ತೇನೋ ಇಲ್ಲವೆಂದು ತಿಳಿದುಕೊಳ್ಳುತ್ತಾನೆ. ಏಕೆ ನೀವು ಈ ತರವಾದಂಥ ಯಾರದೋ ಮಾತನ್ನು ಕೇಳಿಕೊಂಡು ಈ ಬಿಲ್ ತರುತ್ತೀರಿ? ಒಂದನ್ನು ತಮಗೆ ಇಲ್ಲಿ ಹೇಳುತ್ತೇನೆ. ಇಲ್ಲಿ ಕೆಲವರು ಕುಳಿತಿರುತ್ತಾರಲ್ಲಾ ಅವರು ನಮ್ಮ ಅಧಿಕಾರವನ್ನು ಮೊಟಕುಗೊಳಿಸುವಂಥ ರೀತಿಯಲ್ಲಿ ವಿಚಾರವನ್ನು ನಿಮ್ಮ ಹತ್ತಿರ ಬಂದು ಪದೇ ಪದೇ ಹೇಳುತ್ತಾರೆ, ಅದನ್ನು ನೀವು ತಲೆಯಲ್ಲಿ ಹಾಕಿಕೊಳ್ಳಬೇಡಿ. ಶಾಸಕರ ಮತ್ತು ಜನಪ್ರತಿನಿಧಿಗಳ ಅಧಿಕಾರವನ್ನು ಯಾವ ರೀತಿಯಾಗಿ ಮೊಟಕುಗೊಳಿಸಬೇಕೋ ಅದಕ್ಕೆ ಎಲ್ಲಾ ಪ್ರಯತ್ನಗಳು ನಡೆಯುತ್ತವೆ. This Legislature Assembly should not become a victim of that.

ನಮ್ಮ ಸದನ ಇಂಥ ಮಸೂದೆ ತರತಕ್ಕಂಥ ಪೂರ್ವದಲ್ಲಿ ನಾನು ಹೇಳುವುದಿಲ್ಲ, ಈ ಮಸೂದೆ ಬಗ್ಗೆ ಸುಮಾರು ಮೂರು ತಾಸು ಚರ್ಚೆ ಮಾಡಿದ್ದೇವೆ. ಅದೇ ಸಲಹೆಯನ್ನು Parliamentary Affairs and Law Ministerರವರಾದ ಸುರೇಶ್‌ಕುಮಾರ್‌ರವರಿಗೆ ಕೊಡುತ್ತಿದ್ದೆ. ಇಂಥ important billಗಳನ್ನು ತರುವಾಗ ನಿಮ್ಮಲ್ಲಿಯೇ ಒಂದು core committeeಯನ್ನು ಮೊದಲು ರಚನೆ ಮಾಡಿ. ಆ core committee ಯಲ್ಲಿ exports ಅನ್ನು, ಇಲ್ಲಿ ಹಿರಿಯರಾದ, ಅನುಭವಿಗಳಾದ ಉದಾಸಿ ಇದ್ದಾರೆ, ಇಂಥವರನ್ನೆಲ್ಲ involve ಮಾಡಿಕೊಳ್ಳಿ. ಈ ಮಸೂದೆಯನ್ನು ತರುವುದು ಸೂಕ್ತ ಹೌದೋ, ಅಲ್ಲವೋ ಎನ್ನುವ ನಿರ್ಣಯವನ್ನು ನಿಮ್ಮ ಪಕ್ಷದಲ್ಲಿ ತೆಗೆದುಕೊಂಡು ನಂತರ ಸದನಕ್ಕೆ ಬನ್ನಿ. ಇಲ್ಲಿ ಚರ್ಚೆ ಮಾಡುವುದಕ್ಕೂ

ಅನುಕೂಲವಾಗುತ್ತದೆ. ಸಮಯವನ್ನು ನಾವು ವ್ಯರ್ಥವಾಗಿ ಕಳೆಯುವುದಿಲ್ಲ. ಆದ್ದರಿಂದ ದಯವಿಟ್ಟು ಈ ಮಸೂದೆಗೆ ಮಹತ್ವವಾದ ಬದಲಾವಣೆಗಳನ್ನು ತಾವು ತಂದಿದ್ದೇ ಆದರೆ ನಾವು ಇದಕ್ಕೆ ಒಪ್ಪಿಗೆ ಕೊಡುತ್ತೇವೆ.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮೀ ಲೇಔಟ್) : ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ವಿಧೇಯಕ, 2009 ಇದರ ಸುಗ್ರೀವಾಜ್ಞೆಗೆ ತಿದ್ದುಪಡಿ ಬಂದಿದೆ. ನನ್ನ ಮನಸ್ಸಿಗೆ ಬಹಳ ನೋವಾಗುತ್ತದೆ. ರೈತರ ಹೆಸರಿನಲ್ಲಿ ಪ್ರಮಾಣ ವಚನ ಮಾಡಿದಂಥ ಸರ್ಕಾರ ಇಂಥ ತಿದ್ದುಪಡಿಯನ್ನು ಯಥಾವತ್ತಾಗಿ ಅನುಷ್ಠಾನ ಮಾಡಿದರೆ ಇದು ರೈತರಿಗೆ ಪೂರಕವಾಗುವುದಿಲ್ಲ, ಮಾರಕವಾಗುತ್ತದೆ. ಈ ಶಾಸನವನ್ನು ಖಂಡಿತವಾಗಿಯೂ ಯಥಾವತ್ತಾಗಿ ಅನುಷ್ಠಾನ ಮಾಡಿದರೆ ಅದು ಮರಣ ಶಾಸನವಾಗುತ್ತದೆ, ಪ್ರಜಾಪ್ರಭುತ್ವದ ವಿರೋಧಿ ನೀತಿಯಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಏಕೆಂದರೆ, ಈ ವಿಶ್ವವಿದ್ಯಾನಿಲಯದ ಅಧಿವೇಶನಗಳಾಗಲಿ, ಸಂಶೋಧನೆಗಳಾಗಲಿ ಇವತ್ತು ರೈತರಿಗೂ, ಅಲ್ಲಿ ಆಗತಕ್ಕಂಥ ಅಧಿವೇಶನ, ಸಂಶೋಧನೆಗಳಿಗೂ ದಿನೇ ದಿನೇ ಕಂದಕ ಜಾಸ್ತಿಯಾಗುತ್ತಿದೆ. ಈ ತಿದ್ದುಪಡಿ ವಿಧೇಯಕವನ್ನು ನೋಡಿದಾಗ ಬಹುಶಃ ಇದನ್ನು ಯಾರು ಬಹಳ ವ್ಯವಸ್ಥಿತವಾಗಿ ಈ ವಿಧೇಯಕವನ್ನು ಮಾನ್ಯ ಸಚಿವರ ಮುಖೇನ ಮಂಡನೆ ಮಂಡಿಸುತ್ತಿರುವುದನ್ನು ನೋಡಿದಾಗ ವಿರೋಧ ಪಕ್ಷದಲ್ಲಿದ್ದಂಥವರು ಆಡಳಿತ ಪಕ್ಷಕ್ಕೆ ಹೋದಾಗ ಬಹುಶಃ ಆ ಸ್ಥಳ ಮಹಿಮೆಯೋ ಏನೋ ಗೊತ್ತಾಗು ವುದಿಲ್ಲ. ಅಧಿಕಾರಿಗಳ ಕೈಗೊಂಬೆಗಳಾಗಿ ಬಿಡುತ್ತಾರಲ್ಲ ಎಂದು ಮನಸ್ಸಿಗೆ ನೋವಾಗುತ್ತದೆ. ಇದು ಬಹಳ ಮುಖ್ಯವಾಗಿರತಕ್ಕಂಥದ್ದು. ರೈತರ, ರೈತರಿಗೋಸ್ಕರ, ರೈತರಿಂದ, ರೈತರ ಹಿತಕ್ಕೋಸ್ಕರ ಮಾಡಬೇಕಾಗಿದ್ದಂಥ ಈ ತಿದ್ದುಪಡಿ ವಿಧೇಯಕ, ಆದರೆ 1963ರ Act ಪ್ರಕಾರವಾಗಿ ಈ ವಿಧೇಯಕ ಇಲ್ಲ. 1963ರ ಆಕ್ಟ್‌ನಲ್ಲಿ ಬಹುಶಃ ಅಲ್ಲಿನ ಪ್ರತಿಯೊಂದು ಸಂಖ್ಯೆಗಳನ್ನು ನೋಡಿದಾಗ Vice Chancellor ಬರುತ್ತಾರೆ. Officers 6, farmers 6 ಎಂದು ಇದೆ. Comparisonನಲ್ಲಿ ಸಂಖ್ಯೆ University of Agriculture Science Ordinance 2009ರ ಪ್ರಕಾರವಾಗಿ 5 ಜನ ರೈತರು, Officers 10 ಜನ ಇದ್ದಾರೆ. ಇವತ್ತು ICAR model Act ಪ್ರಕಾರವಾಗಿ Officers 8, farmers 5, MLA or MLC 1 ಎಂದು ಬರುತ್ತದೆ. ನಮ್ಮ ನಾಡಗೌಡರವರು ಹೇಳಿದ ಹಾಗೆ, ಇಂಥ ಪ್ರಮುಖವಾದ ವಿಧೇಯಕ, ಮುಂದಿನ 25

ವರ್ಷಗಳ ನಂತರ ತಿದ್ದುಪಡಿ ತರತಕ್ಕಂಥದ್ದು ಇದೆ. ಪದೇ ಪದೇ ತರತಕ್ಕಂಥದ್ದರ ಅಗತ್ಯತೆ ಇಲ್ಲ. ದೇಶದ ಬೆನ್ನಲುಬಾದ ರೈತರ ಬಗ್ಗೆ ಸಮಗ್ರವಾದ ಚಿಂತನೆ ಮಾಡತಕ್ಕಂಥ ಈ ಸದನ ತೀರ್ಮಾನ ಮಾಡುವಾಗ Party levelನಲ್ಲೋ ಅಥವಾ ಇನ್ನೆಲ್ಲೋ ಚರ್ಚೆಯಾಗಿ ಅಥವಾ Joint Committee ಮುಂದೆ refer ಮಾಡಿ ಕೊಡುವುದು ಸೂಕ್ತ. ಇಲ್ಲದಿದ್ದರೆ, ಖಂಡಿತವಾಗಿಯೂ ಇದು ಬಹಳಷ್ಟು ಮಾರಕವಾಗುತ್ತದೆ. They have not at all followed the model Act of ICAR in total ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. Ordinance Sl.No.12, Board of Managementನಲ್ಲಿ 8 ಜನರಲ್ಲಿ, not below the rank of the Professor from the outside ಎಂದು ಹೇಳುತ್ತಾರೆ. ಈ ವಾಕ್ಯವನ್ನು ತೆಗೆಯಬೇಕು ಮತ್ತು ಅದರಲ್ಲಿ 13,14,15 ಇದರ ಪರವಾಗಿ ಅಲ್ಲಿ ಪ್ರಗತಿಪರ ರೈತರನ್ನು ಸೇರಿಸಿಕೊಳ್ಳಬೇಕು. Registrar who shall be the Member Secretary ಎನ್ನತಕ್ಕಂಥ ಪದ ತೆಗೆಯಬೇಕು. ಹಲವಾರು ತಿದ್ದುಪಡಿಗಳನ್ನು ತೆಗೆಯಲೇಬೇಕಾಗಿರುತ್ತೆ. ಇಲ್ಲದಿದ್ದರೆ, ಖಂಡಿತವಾಗಿಯೂ ಮರಣ ಶಾಸನವಾ ಗುತ್ತದೆ. Sl. No.5ರ ಪ್ರಕಾರ, one third of the Members of the Board shall from the quorum ಎನ್ನುವುದು 50% ಎಂದಾಗಬೇಕು. Once in every three months ಎನ್ನುವುದು 2 months ಎಂದು ಆಗಬೇಕು. ಈ ರೀತಿಯಾಗಿ ಹಲವಾರು ವಿಚಾರಗಳನ್ನು ಹೇಳುವುದಿತ್ತು. ಆದರೆ, ನಾವು ಹೇಳಲೇಬೇಕೆಂದಿದ್ದರೂ ಸಹ ಈಗ ಇದು ತುರ್ತಾಗಿ ಆಗಬೇಕೆಂದು ತಾವು ಹೇಳುತ್ತೀರಿ. ನಮ್ಮ ಶಾಸಕರು ಹೇಳಿದ ಹಾಗೆ ಈ ಬಿಲ್ ಕೊನೆಯ ಗಳಿಗೆಯಲ್ಲಿ ಬಂದಿದೆ. ಇದನ್ನು ಅಧ್ಯಯನ ಮಾಡುವುದಕ್ಕೂ ಸಮಯವಿಲ್ಲ, Previous Acts ಬಗ್ಗೆ Academic interest ನಿಂದ ಮೊದಲಿನಿಂದ ಅದರ ಬಗ್ಗೆ ಪರಿಣಿತಿ ಇದ್ದವರಿಗೆ ಗೊತ್ತಾಗುತ್ತದೆ. ಈ ದೃಷ್ಟಿಯಿಂದ ನಾವು ಬಹಳಷ್ಟು ವಿಚಾರಗಳನ್ನು ತಿಳಿದುಕೊಳ್ಳಬೇಕು. ನಾಳೆಯ ದಿವಸ ರೈತರ ಬಳಿಗೆ ಹೋದಾಗ ನಾವು ಉತ್ತರ ಕೊಡಬೇಕಾಗುತ್ತದೆ. ಇದು ರೈತರ ವಿಶ್ವವಿದ್ಯಾಲ ಯವೋ, ಅಥವಾ IAS Officers ವಿಶ್ವವಿದ್ಯಾಲಯವೋ ಎನ್ನುವ ಬಗ್ಗೆ ಉತ್ತರ ಕೊಡಬೇಕಾಗುತ್ತದೆ. ಇದನ್ನು ಯಥಾವತ್ತಾಗಿ ಅನುಷ್ಠಾನ ಮಾಡತ ಕ್ಕಂಥದ್ದು ಸರಿಯಲ್ಲ. ಇದು ರೈತ ವಿರೋಧಿಯಾಗುತ್ತದೆ. ಇದನ್ನು Joint

Committeeಗೆ refer ಮಾಡಿ ನಂತರ September ತಿಂಗಳಲ್ಲಿ ಸದನದ ಮುಂದೆ ತರಲಿಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಶ್ರೀ ಬಿ.ರಮಾನಾಥ ರೈ : ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಗಳ ವಿಧೇಯಕ 2009ರ ಬಗ್ಗೆ ಈ ಸದನದಲ್ಲಿರತಕ್ಕಂಥ ವಿರೋಧ ಪಕ್ಷದ ಸದಸ್ಯರಿರಬಹುದು, ಬಹಳಷ್ಟು ಮಂದಿ ಅನೇಕ ವಿಷಯಗಳನ್ನು ಮಾತನಾಡಿದ್ದಾರೆ. ಮಾನ್ಯ ಬಚ್ಚೇಗೌಡರು ಮಾತನಾಡುವಾಗ ನಿಮಗ್ಯಾಕೆ ರೈತರ ವಿಷಯ ಎನ್ನುವ ಮಾತನ್ನು ಹೇಳಿದರು. ನಾನು ಈ ಸದನದ ಸದಸ್ಯರೆಲ್ಲರ ಗಮನಕ್ಕೆ ತರಬಯಸುವುದೇನೆಂದರೆ, ನಾನು ಕೃಷಿ ಮತ್ತು ಗ್ರಾಮೀಣ ಬ್ಯಾಂಕ್‌ನಲ್ಲಿ 6 ವರ್ಷ ಅಧ್ಯಕ್ಷನಾಗಿ ಕೆಲಸ ಮಾಡಿದ್ದೆ. ಆನಂತರ, 5 ಸಲ ನಾನು ವಿಧಾನ ಸಭೆಗೆ ಬಂದಿದ್ದೇನೆ. ಬಹಳ ಸಣ್ಣ ವಯಸ್ಸಿನಲ್ಲಿ ಪ್ರಾಥಮಿಕ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ನನ್ನ ತಂದೆ ದೊಡ್ಡ ಕೃಷಿಕರಾಗಿ 18 ವರ್ಷ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಈ ಇತಿಹಾಸವನ್ನು ನಾನು ಇಲ್ಲಿ ಹೇಳಬೇಕಾಗಿದೆ. ಸುಮ್ಮನೆ ಲಘುವಾಗಿ ನಿಂತುಕೊಂಡು ನಿಮಗೇನು ಕೃಷಿ ಬಗ್ಗೆ ಗೊತ್ತಿದೆ ಎಂದು ಈ ರೀತಿ ಹೇಳಬಾರದು. ನಾನು ಈ ಶಾಸನ ಸಭೆಗೆ 5 ಸಲ ಆಯ್ಕೆಯಾಗಿ ಬಂದವನು. ನನಗೆ ಮಾತನಾಡುವ ಚಟವಿಲ್ಲ. ಏನಾದರೂ ಮಹತ್ವದ ವಿಷಯವಿದ್ದಾಗ ಮಾತ್ರ ನಾನು ಮಾತನಾಡುತ್ತೇನೆ. ನಾಡಗೌಡರವರು, ಮಾಜಿ ಕೃಷಿ ಸಚಿವರು ಇವರೆಲ್ಲ ಬಹಳಷ್ಟು ಹೇಳಿದ್ದಾರೆ. ಅವರು ಹೇಳಿದ್ದನ್ನು ನಾನು ಪುನಃ ಹೇಳುವುದಕ್ಕೆ ಹೋಗುವುದಿಲ್ಲ. ರೈತರಿಗೆ ಇಲ್ಲಿ ಜಾಸ್ತಿ ಪ್ರಾತಿನಿಧ್ಯ ಇರತಕ್ಕಂಥದ್ದಾಗಬೇಕು. 1963ರ Act ಏನಿತ್ತು ಅದನ್ನೇಕೆ ಬದಲಾಯಿಸಿ, ಈಗ ಈ ಒಂದು ಹೊಸ ವಿಧೇಯಕ ತರಬೇಕೆನ್ನುವ ಪ್ರಶ್ನೆ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ಪರಿಶಿಷ್ಟ ಜಾತಿಯವರಿಗೆ ಅವಕಾಶ ಕೊಡಬೇಕೆನ್ನುವುದರ ಬಗ್ಗೆ ನಮ್ಮದೇನೂ ವಿರೋಧವಿಲ್ಲ. ಆದರೆ, ರೈತರ ಪ್ರಾತಿನಿಧ್ಯವನ್ನು ಕಡಿಮೆ ಮಾಡಿ ಅಧಿಕಾರಿಗಳನ್ನು ಜಾಸ್ತಿ ಮಾಡುವ ಮೂಲಕ ಅಧಿಕಾರಿಗಳ ಕೈಗೆ ಅಧಿಕಾರ ಕೊಡುವುದರ ಮೂಲಕ ರೈತರಿಗೆ ವ್ಯವಸ್ಥಿತವಾಗಿ ವಂಚನೆ ಮಾಡತಕ್ಕಂಥ ದೃಷ್ಟಿಕೋನ ಇದರಲ್ಲಿ ನಮಗೆ ಕಾಣುತ್ತದೆ. ಪರೋಕ್ಷವಾಗಿ ಯಾವುದೋ ಒಂದು ಉದ್ದೇಶ ಇದರ ಹಿಂದೆ ಇದೆ ಎಂದು ಸ್ಪಷ್ಟವಾಗಿ ನಮಗೆ ಗೊತ್ತಾಗುತ್ತದೆ. ಅಧಿಕಾರಶಾಹಿಗಳು ಈ ವಿಶ್ವವಿದ್ಯಾನಿಲಯವನ್ನು ಮಾರಾಟ ಮಾಡತಕ್ಕಂಥ ಒಂದು ಸಂಚು ನಡೆದಿದೆ ಎಂದು

ಹೇಳಿದರೂ ತಪ್ಪಾಗಲಾರದು. ನಾನು ಇದನ್ನು ವಿಮರ್ಶೆ ಮಾಡುವುದಕ್ಕೆ ಹೋಗುವುದಿಲ್ಲ. ನೀವು ಈ ವಿಧೇಯಕವನ್ನು ಯಥಾವತ್ತಾಗಿ ತಂದರೆ ರೈತರಿಗೆ ಮಾರಕವಾಗುವ ವಿಧೇಯಕವಾಗುತ್ತದೆಂದು ನಾವು ಖಂಡಿತ ವಾಗಿಯೂ ಹೇಳಬೇಕಾಗಿದೆ. ಈ ವಿಧೇಯಕವನ್ನು ತರುವುದರಲ್ಲಿ ಯಾವುದೇ ಒಳ್ಳೆಯ ದೃಷ್ಟಿಕೋನವಿಲ್ಲವೆನ್ನುವುದು ತಮಗೆಲ್ಲ ಗೊತ್ತಿರುವ ವಿಚಾರ. ಆದ್ದರಿಂದ, ಹಿಂದೆ 13 ಜನ ಸದಸ್ಯರಿದ್ದಾಗ 6 ಜನ ರೈತ ಪ್ರತಿನಿಧಿಗಳಿದ್ದರು.

ಅಧ್ಯಕ್ಷರು : ಏನಾದರೂ ಹೊಸ points ಇದ್ದರೆ ಹೇಳಿ. ಈಗ ಎಲ್ಲರೂ ಹೇಳಿರುವುದನ್ನೇ ಹೇಳುವುದರ ಬದಲು ಹೊಸ points ಇದ್ದರೆ ಹೇಳಿ. ಎಲ್ಲರೂ ಹೇಳಿದ್ದನ್ನೇ ಹೇಳುವುದರಲ್ಲಿ ಅರ್ಥವಿಲ್ಲ.

ಶ್ರೀ ಬಿ.ರಮಾನಾಥ ರೈ : ಈಗ ತಿದ್ದುಪಡಿ ತಂದಿದ್ದೇವೆಂದು ಹೇಳಿದ್ದಾರೆ. ನಾವು ಹೇಳುವುದೇನೆಂದರೆ, ಈ ವಿಧೇಯಕವನ್ನು ವಾಪಸ್ ತೆಗೆದುಕೊಂಡು ಹೊಸದಾಗಿ ತಿದ್ದುಪಡಿಗಳೊಂದಿಗೆ ತರುವುದನ್ನು ಮಾಡಿ ಮತ್ತು ಅದಕ್ಕೆ ತಜ್ಞರ ಸಮಿತಿಯನ್ನು ಮಾಡಿ, ಆ ಸಮಿತಿಯಿಂದ ಇದರ ಬಗ್ಗೆ ಅಭಿಪ್ರಾಯಗಳನ್ನು ಸಂಗ್ರಹಿಸಿ ಇದ್ದು ತರತಕ್ಕಂಥದ್ದು ಉಚಿತ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕದ ಬಗ್ಗೆ ಈಗಾಗಲೇ ಅನೇಕ ಅನುಭವಿ ಶಾಸಕರು ಮಾತನಾಡಿದ್ದಾರೆ ಮತ್ತು ಏನು ನ್ಯೂನತೆಗಳಿವೆ ಎನ್ನುವುದನ್ನೂ ಕೂಡ ತಮ್ಮ ಗಮನಕ್ಕೆ ತರುವುದನ್ನು ಮಾಡಿದ್ದಾರೆ. ಈಗಾಗಲೇ ಎಲ್ಲಾ ವಿಚಾರಗಳನ್ನೂ ಸದನದ ಮುಂದೆ ತರುವ ಕೆಲಸವಾಗಿದೆ. ಬಹಳ ಪ್ರಾಮುಖ್ಯವಾದುದೆಂದರೆ, ಕೋರಂ ಇಲ್ಲದೇ ಇರುವುದು. ಮೊದಲನೇ ಸಭೆಗೆ ಕೋರಂ ಇಲ್ಲದಿದ್ದರೆ ಮುಂದಕ್ಕೆ ಹಾಕಬೇಕೆನ್ನುವ ನಿಯಮವನ್ನಿಟ್ಟುಕೊಂಡಿದ್ದಾರೆ. ಎರಡನೇ ಸಭೆಗೆ ಕೋರಂ ಇರಲಿಲ್ಲವೆಂದು ಮಾನ್ಯ ಬಾಲುರವರು ಹೇಳಿದರು. ಎರಡನೇ ಸಭೆಗೆ ಕೋರಂ ಇಲ್ಲದ ಸಭೆಯಲ್ಲಿ ನಿರ್ಣಯ ಮಾಡುವ ಅಧಿಕಾರ ಸರಿಯಲ್ಲ. ಅದಕ್ಕೆ ಕೋರಂಗೆ ಅವಕಾಶವಿರಬೇಕು. ಎರಡನೆಯದಾಗಿ, ಕೋರಂ ಇಲ್ಲದೆ ಸಭೆ ನಡೆಸಿ, ಅದರಲ್ಲಿ ಅಧಿಕಾರಿಗಳು ನಿರ್ಣಯ ಮಾಡಿ ರೈತರ ಪರವಾದಂಥ ನಿಲುವನ್ನು ಹೇಗೆ ತೆಗೆದುಕೊಳ್ಳುವುದಕ್ಕಾಗುತ್ತದೆ? ಆ ಕಾರಣಕ್ಕಾಗಿ ಕೋರಂ ಇರಬೇಕೆನ್ನುವ ಆ ನಿಯಮವನ್ನು ಅದರಲ್ಲಿ ಅಳವಡಿಸಬೇಕೆಂದು ನನ್ನ ಕೋರಿಕೆ.

ಎರಡನೆಯದಾಗಿ, ರೈತ ಪ್ರತಿನಿಧಿಗಳು ಹೆಚ್ಚು ಜನ ಇರಬೇಕೆಂದು ಎಲ್ಲರೂ ವಾದ ಮಾಡಿದ್ದಾರೆ. ಅದನ್ನು ನಾವೆಲ್ಲ ಒಪ್ಪಿಕೊಳ್ಳಬೇಕಾಗುತ್ತದೆ. ಸುಮಾರು 5–8 ಜನ ರೈತರನ್ನು ಆ ಸಭೆಯಲ್ಲಿ ಹಾಕುವ ಕೆಲಸವಾಗಬೇಕು. ಆ ಕಾರಣಕ್ಕಾಗಿ ನಾನು ಒತ್ತಾಯಿಸುತ್ತೇನೆ, ಕೃಷಿಗೆ ಸಂಬಂಧಪಟ್ಟ ಸಂಸ್ಥೆಯಲ್ಲಿ ರೈತನಿಗಾಗುವ ಅನ್ಯಾಯಗಳ ಬಗ್ಗೆ ಬೆಳಕು ಚೆಲ್ಲಬೇಕಾಗುತ್ತದೆ. ಅಧಿಕಾರಿಗಳಿಗೆ ರೈತರ basic ತೊಂದರೆಗಳ ಅರಿವು ಇರುವುದಿಲ್ಲ. ಆ ರೈತನಿಗೆ ಸಂಕಷ್ಟ ಏನಾಗಿರುತ್ತದೆ, ಅನುಭವ ಏನಾಗಿರುತ್ತದೆ ಎನ್ನುವ ಬಗ್ಗೆ ಬೆಳಕು ಚೆಲ್ಲಬೇಕಾದರೆ ಸಂಸ್ಥೆಯಲ್ಲಿ ರೈತ ಪ್ರತಿನಿಧಿ ಇರಬೇಕಾಗುತ್ತದೆ. ಮಾನ್ಯ ಕೃಷಿ ಮಂತ್ರಿಯವರೂ ಸಹ ಅದನ್ನು ತಿದ್ದುಪಡಿ ಮಾಡುತ್ತೇನೆಂದು ಹೇಳಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆ ಕಾರಣಕ್ಕಾಗಿ ಈ ಎರಡು ತಿದ್ದುಪಡಿಗಳನ್ನು ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಡಾ: ಎಂ.ಸಿ.ಸುಧಾಕರ : ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಸರ್ಕಾರ ಏನು ಮಂಡಿಸಿದೆ, ಇದರ ಬಗ್ಗೆ ಹೆಚ್ಚಿಗೆ ಮಾತನಾಡುವುದಿಲ್ಲ. ರೈತ ಪ್ರತಿನಿಧಿಗಳ ಸಂಖ್ಯೆಯನ್ನೇನು ಕಡಿಮೆ ಮಾಡಿದ್ದಾರೆ ಅದನ್ನು ಇತರೆ ಸದಸ್ಯರಿಗೆ ಸಮಾನವಾಗಿ ಮಾಡಬೇಕಾಗುತ್ತದೆ. ಅಂದರೆ, ಅಧಿಕಾರಿಗಳು ಮತ್ತು ರೈತರು ಸಮಾನವಾಗಿ ಇರಬೇಕಾಗುತ್ತದೆ. ನಾವು ಎಷ್ಟೇ ವಿದ್ಯಾವಂತರಾದರೂ, ಎಷ್ಟೇ ಸಂಶೋಧನೆ ಮಾಡಿದ್ದರೂ ನಮ್ಮದೇ ಆದ ಪ್ರಯೋಗಗಳನ್ನು ಮಾಡಿ, ಹೊಸ ತಂತ್ರಜ್ಞಾನವನ್ನು ನಾವು ಅಳವಡಿಕೆ ಮಾಡತಕ್ಕಂಥ ಪ್ರಯತ್ನ ಮಾಡಿದ ಸಂದರ್ಭದಲ್ಲಿ ಪ್ರಗತಿಪರ ರೈತರು ಅವರದೇ ಆದಂಥ ಆಲೋಚನೆಯಲ್ಲಿ ಬಹಳಷ್ಟು ಬದಲಾವಣೆಗಳನ್ನು ಕೃಷಿ ವ್ಯವಸ್ಥೆಯಲ್ಲಿ ತರುತ್ತಿರುವುದನ್ನು ನಾವು ಗಮನಿಸಿದ್ದೇವೆ. ಕೋಲಾರ ಜಿಲ್ಲೆಯಲ್ಲಿ ರೈತರದೇ ಆದ ವ್ಯವಸ್ಥೆಯನ್ನು ಕೃಷಿಯಲ್ಲಿ ತಂದಿದ್ದಾರೆ. ರೇಷ್ಮೆಗೆ ಸಂಬಂಧಪಟ್ಟ ಹಾಗೆ, Kolar Gold ಎನ್ನತಕ್ಕಂಥ ಒಂದು ತಳಿಯನ್ನು ಅಲ್ಲಿಯ ರೈತರೇ ತರುವ ಪ್ರಯತ್ನವಾಗಿದೆ. ಈ ರೀತಿಯಾಗಿ ಅಲ್ಲಿ ರೈತರ ಪ್ರಾತಿನಿಧ್ಯವನ್ನು ಅಧಿಕಾರಿಗಳ ಸಮಾನವಾಗಿ ತರಬೇಕು. ಜೊತೆಗೆ, ಈ ವಿಧಾನಸಭೆಯಲ್ಲಿ ನಾವು ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ಅಧಿಕಾರ ಕೊಡುತ್ತೇವೆ. ನಮ್ಮ ಕ್ಷೇತ್ರದಲ್ಲಿಯೇ ಒಂದು ಕೃಷಿ ಕಾಲೇಜು ಮತ್ತು ರೇಷ್ಮೆ ಕಾಲೇಜಿದೆ. ಅಲ್ಲಿ ನಡೆಯುವ ಯಾವುದೇ ಕಾರ್ಯಕ್ರಮಗಳನ್ನು ನಮ್ಮ ಗಮನಕ್ಕೆ ತರುವುದಿಲ್ಲ. ಅವರದೇ ಆದಂಥ ವ್ಯವಸ್ಥೆ ಮಾಡಿಕೊಂಡು ಕನಿಷ್ಠ

ಸೌಜನ್ಯಕ್ಕಾದರೂ ಆ ವಿಷಯವನ್ನು ನಮಗೆ ತಿಳಿಸುವುದಿಲ್ಲ. ಕೇಳಿದರೆ, ಇದು ನಿಮಗೆ ಸಂಬಂಧವಿಲ್ಲ, ಇದು ವಿಶ್ವವಿದ್ಯಾಲಯ, ಶಾಸಕರಿಗಾಗಲಿ, ಸರ್ಕಾರಕ್ಕಾಗಲಿ ಸಂಬಂಧವಿಲ್ಲವೆನ್ನುವ ರೀತಿಯಲ್ಲಿ ಮಾಡುತ್ತಾರೆ. ಈ ವಿದೇಯಕವನ್ನು ಇವತ್ತು ಯಥಾವತ್ತಾಗಿ ಅಂಗೀಕರಿಸಿದರೆ, ಅಧಿಕಾರಶಾಹಿಗಳಿಂದಾಗಿ ಜನರ ಭಾವನೆ ಏನಿದೆ ಅದಕ್ಕೆ ವಿರುದ್ಧವಾಗಿ ನಡೆಯುವ ಕೆಲಸವಾಗುತ್ತದೆ. ನಾನು ಕೃಷಿ ಸಚಿವರಿಗೆ ವಿನಂತಿಸುತ್ತೇನೆ, ನಾವು ಏನೇ ಒಂದು ವ್ಯವಸ್ಥೆ ಮಾಡಿದಾಗ, ಒಂದು ಕಡೆ ಅಧಿಕಾರಿಗಳ ಜೊತೆಯಲ್ಲಿ, ಕೃಷಿಗೆ ಸಂಬಂಧಿಸಿದಂತೆ ರೈತರ ಗಮನವನ್ನಿಟ್ಟುಕೊಂಡು ನಾವು ಈ ವಿಧೇಯ ಕವನ್ನು ತರಬೇಕಾಗುತ್ತದೆ. ದಯವಿಟ್ಟು, ಇದರ ಬಗ್ಗೆ ತಾವು ಮತ್ತೊಮ್ಮೆ ಪರಿಶೀಲಿಸಿ, ನಂತರ ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿ ಮತ್ತೆ ಮಂಡಿಸುವುದು ಸೂಕ್ತವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) : ಈ ವಿಧೇಯಕದ 13ನೇ ಪುಟ (vii) ರಲ್ಲಿ ಸರ್ಕಾರದಿಂದ ನಾಮನಿರ್ದೇಶಿತರಾದ ವಿಶ್ವವಿದ್ಯಾಲಯದ ಅಧಿಕಾರ ಕ್ಷೇತ್ರ ವ್ಯಾಪ್ತಿಯಲ್ಲಿರುವ ಇಬ್ಬರು ಪ್ರಗತಿಪರ ಕೃಷಿಕರು ಇವರ ಪೈಕಿ ಒಬ್ಬರು ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದವರಾಗಿರತಕ್ಕದ್ದು ಎಂದು ಇರುವುದನ್ನು ನಾವೆಲ್ಲರೂ ಕೂಡ ಸ್ವಾಗತ ಮಾಡುತ್ತೇವೆ. ಅದರ ಜೊತೆಯಲ್ಲಿ, ವಿರೋಧ ಪಕ್ಷದ ಮತ್ತು ಆಡಳಿತ ಪಕ್ಷದ ಇಬ್ಬರು ಸ್ನೇಹಿತರು ಮಾತನಾಡುವ ಸಂದರ್ಭದಲ್ಲಿ ಸಲಹೆಗಳನ್ನೇನು ಕೊಟ್ಟಿದ್ದಾರೆ ಅದನ್ನೂ ಸಹ ನಾನು ಸ್ವಾಗತ ಮಾಡುತ್ತೇನೆ. ಪುಟ 13ರ (viii)ರಲ್ಲಿ ಕುಲಾಧಿಪತಿಯವರು ನಾಮನಿರ್ದೇಶನ ಮಾಡಿದ ಕೃಷಿ ಮತ್ತು ಸಂಬಂಧಿಸಿದ ವಿಜ್ಞಾನಗಳ ಕ್ಷೇತ್ರದಿಂದ ವಿಶ್ವವಿದ್ಯಾನಿಲಯದ ಅಧಿಕಾರ ಕ್ಷೇತ್ರ ವ್ಯಾಪ್ತಿಯ ಹೊರಗಿನವರಾದ ಪ್ರೊಫೆಸರ್ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಎಂದಿದೆ. ಹಾಗೆಂದರೇನು ಅರ್ಥ? ಅಂದರೆ, ನಾವು ಇಲ್ಲಿ ಬೇರೆಯವರನ್ನು ಮಾಡಿದ್ದೇವೆಂದು ತೋರಿಸಿ, ಹಿಂದಿನ ಬಾಗಿಲಿನಿಂದ ಇಲ್ಲಿ ಯಾರನ್ನು ಕರೆದುಕೊಂಡು ಬರುತ್ತಿದ್ದೀರೆಂದರೆ, ವಿಶ್ವವಿದ್ಯಾಲಯದ retire ಆಗಿರುವ Professor ಅನ್ನು ಇಲ್ಲಿ ಮತ್ತೆ ತಾವು ನಾಮನಿರ್ದೇಶನ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ಆದ್ದರಿಂದ, ದಯಮಾಡಿ, 'Professor ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ" ಎನ್ನುವುದನ್ನು ತಾವು ತಿದ್ದುಪಡಿ

ಮಾಡಬೇಕು. ಎರಡನೆಯದಾಗಿ, ಪುಟ 14ರ–(5)ರಲ್ಲಿ– "ಮಂಡಳಿಯ ಸಭೆಗಾಗಿ ಮಂಡಳಿಯ ಸದಸ್ಯರ ಮೂರನೇ ಒಂದು ಭಾಗದಷ್ಟು ಸದಸ್ಯರು ಸಭೆಯ ಕೋರಂ ಆಗಿರತಕ್ಕದ್ದು" ಎಂದಿದೆ. ಅಂದರೆ, 15 ಜನರಲ್ಲಿ 5 ಬಂದರೆ ಸಾಕು, ಅದು ಕೋರಂ ಆಗುತ್ತದೆ. ತಾವು ರೈತರ ಪ್ರತಿನಿಧಿಗಳನ್ನು ಹೆಚ್ಚು ಮಾಡಬಹುದು. 8 ಜನರನ್ನೂ ಮಾಡಬಹುದು, 9 ಜನರನ್ನೂ ಮಾಡಬಹುದು. ಆದರೆ, ಇಲ್ಲಿ 5 ಜನರು ಮಾತ್ರ ಬಂದರೆ ಕೋರಂ ಆಗುತ್ತದೆಂದಾದರೆ, 5 ಜನ ಅಧಿಕಾರಿಗಳು ಸೇರಿಕೊಂಡು ಕೋರಂ ಮಾಡುತ್ತಾರೆ. ಅದರಲ್ಲಿ 15ರಲ್ಲಿ 1/3rd ಕೋರಂ ಮಾಡುವುದಕ್ಕಾಗದಿದ್ದರೂ ಕನಿಷ್ಠ ಅರ್ಧದ ಷ್ಟಾದರೂ ಅಂದರೆ, 15ರಲ್ಲಿ 8 ಜನರಾದರೂ ಇದ್ದರೆ ಮಾತ್ರ ಕೋರಂ ಆಗುತ್ತದೆಂದು ದಯಮಾಡಿ ತಾವು ತಿದ್ದುಪಡಿ ತರಬೇಕು. ಅದರಲ್ಲಿಯೇ ಇನ್ನೊಂದು ಅಂಶವಿದೆ, "ಪರಂತು ಕೋರಂ ಇಲ್ಲದಿರುವು ದರಿಂದಾಗಿ ಮಂಡಳಿಯ ಒಂದು ಸಭೆಯನ್ನು ಮುಂದೂಡಿದ್ದರೆ, ಅದೇ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಕರೆದ ಮುಂದಿನ ಸಭೆಯಲ್ಲಿ ಕೋರಂನ ಅವಶ್ಯಕತೆ ಇರುವುದಿಲ್ಲ." ಅಂದರೆ, ಇದರಲ್ಲಿ ಸಂಪೂರ್ಣವಾದ ಸರ್ವಾಧಿ ಕಾರವನ್ನು ಕೊಟ್ಟಂಥ ಮಸೂದೆಯಾಗಿದೆ. ಇದರ ಜೊತೆಗೆ, ಪುಟ 14ರ (3)ರಲ್ಲಿ– "ಪದ ನಿಮಿತ್ತ ಸದಸ್ಯರುಗಳನ್ನು ಹೊರತುಪಡಿಸಿ ಮಂಡಳಿಯ ಸದಸ್ಯರ ಪದಾವಧಿಯು ಸಂದರ್ಭಾನುಸಾರ ಸರ್ಕಾರ ಅಥವಾ ಕುಲಾಧಿಪತಿ ಯವರ ಇಚ್ಛೆಗೊಳಪಟ್ಟು" ಅಂದರೆ, under the pleasure of Government or under the pleasure of Vice Chancellor. ಅಂದರೆ, ಅವರ ಇಚ್ಛೆಗೊಳಪಟ್ಟು ಮೂರು ವರ್ಷಗಳಾಗಿ ರತಕ್ಕದ್ದು ಅಂದರೆ ಅವರು ಬೇಡವೆಂದರೆ, ಅವರನ್ನು ತಕ್ಷಣ ತೆಗೆದು ಹಾಕಬಹುದು. ಸರ್ಕಾರದಿಂದ ಯಾರಿಗೆ ಅಲ್ಲಿಗೆ ನಾಮನಿರ್ದೇಶನ ಮಾಡಿರುತ್ತೇವೆ, ಅಲ್ಲಿ ಅಕಸ್ಮಾತ್ ಆಗಿ Vice Chancellor, ಅಧಿಕಾರಿಗಳು ತೆಗೆದುಕೊಂಡಿರುವ ನಿರ್ಧಾರಗಳು ಒಂದು ವೇಳೆ ರೈತರ ವಿರುದ್ಧವಾಗಿದ್ದರೆ, ಅಲ್ಲಿ ತಾವೇ ನೇಮಿಸಿರುವ ರೈತರ ಪ್ರತಿನಿಧಿಗಳು ಅದರ ವಿರುದ್ಧ ಮಾತನಾಡಿದರೆ ತಕ್ಷಣ ಅವನನ್ನು ತೆಗೆದುಹಾಕತಕ್ಕಂಥ ಅಧಿಕಾರವಿದೆ. ಅಂದರೆ, ಕೇವಲ ಹೆಸರಿಗೆ ಮಾತ್ರ ರೈತರನ್ನು ನಾಮನಿರ್ದೇಶನ ಮಾಡುತ್ತೇವೆ ಎಂದು ಹೇಳಿ ಇಲ್ಲಿ ಸಂಪೂರ್ಣ ವಾದ ಅಧಿಕಾರವನ್ನು ಆಡಳಿತ ಮಂಡಳಿಗೆ ಮತ್ತು Vice Chancellorಗೆ ಕೊಟ್ಟಿದ್ದೀರಿ. ಅವರಿಗಿಲ್ಲಿ ಅಧಿಕಾರವನ್ನು ಏತಕ್ಕೆ ಕೊಟ್ಟಿದ್ದೀರಿ? ವಿಶ್ವವಿದ್ಯಾ

ಲಯದ ಹಣಕಾಸು ಅಂದಾಜುಗಳ ಮತ್ತು ಆಯವ್ಯಯಗಳನ್ನು ಪರಿಗಣಿಸುವುದು ಮತ್ತು ಅನುಮೋದಿಸುವುದು ಎಂದು ಇದೆ. ನೂರಾರು ಕೋಟಿ ರೂಪಾಯಿಗಳು ರೈತರ ಹಣವಾಗಿದೆ. ಇವರಿಗೆ ಅಧಿಕಾರ ಕೊಟ್ಟಿದ್ದೀರಿ. ಹಾಗಾದರೆ, ನಾಳೆ ಕುಲಾಧಿಪತಿಗಳು ಇಷ್ಟೆಲ್ಲಾ ಅಧಿಕಾರವನ್ನು ಪಡೆದುಕೊಂಡು, ವಿಶ್ವವಿದ್ಯಾನಿಲಯಕ್ಕೆ ಬಂದಿರುವ ಸಂಪೂರ್ಣ ಹಣಕಾಸಿನ ಅವ್ಯವಹಾರ ನಡೆಯಿತೆಂದು ಇಟ್ಟುಕೊಳ್ಳಿ, ನಿಮಗೆ, ಸರ್ಕಾರಕ್ಕೆ ವಿಶ್ವವಿದ್ಯಾನಿಲಯವನ್ನು ಕಂಟ್ರೋಲ್ ಮಾಡುವ ಅಧಿಕಾರವಿಲ್ಲ. ಇವರು ಇದರಲ್ಲಿ, ಹೈಕೋರ್ಟ್ ನ್ಯಾಯಾಧೀಶರಿಂದಲೇ ತನಿಖೆಯಾಗಬೇಕೆಂದು ಹೇಳಿದ್ದಾರೆ.

ಮೂರುವರ್ಷ ಮುಗಿದು ಹೋಗುತ್ತದೆ, ಮನೆಗೆ ಹೋಗಿರುತ್ತಾರೆ, ಆಗ ತಾವು ಯಾರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೀರಿ? ಎಂಬುದಕ್ಕೆ ಸರ್ಕಾರ ಜವಾಬ್ದಾರಿಯಾಗಬೇಕಾಗುತ್ತದೆ. ರೈತ ವಿರೋಧಿಯಾಗಿರತಕ್ಕಂಥ ಈ ವಿಧೇಯಕವನ್ನು ಸರ್ಕಾರ ದಯಮಾಡಿ ವಾಪಸ್ ತೆಗೆದುಕೊಳ್ಳಬೇಕು. ಏಕೆಂದರೆ, ಆಡಳಿತ ಪಕ್ಷದಲ್ಲಿರುವಂಥ ನಮ್ಮ ಅನೇಕ ಜನಶಾಸಕ ಮಿತ್ರರೆಲ್ಲರೂ ಕೂಡ ರೈತರು ಇದ್ದಾರೆ. ಅವರೆಲ್ಲರಿಗೂ ಕೂಡ ಮಾತನಾಡುವುದಕ್ಕೆ ಅವಕಾಶ ಕೊಡಿ. ಇನ್ನು ಎರಡು ಗಂಟೆಯಾದರೂ ಪರವಾಗಿಲ್ಲ. ದಯಮಾಡಿ ಅವರಿಗೆ ಅವಕಾಶ ಕೊಟ್ಟಾಗ ಅವರ ಅಭಿಪ್ರಾಯವೂ ನಮ್ಮ ಅಭಿಪ್ರಾಯದಂತೆ ಇರುತ್ತದೆ ಎನ್ನುವ ವಿಶ್ವಾಸ ವ್ಯಕ್ತಪಡಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಯು.ಟಿ.ಖಾದರ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ಇವತ್ತು ಮಂಡಿಸಿರುವ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ವಿಧೇಯಕವನ್ನು ನಾವು ಎಲ್ಲರೂ ವಿರೋಧಿಸುವ ಕೆಲಸ ಇದು ನಮ್ಮ ಜವಾಬ್ದಾರಿ ಎಂದು ಹೇಳುವುದಕ್ಕೆ ಇಚ್ಚಿಸುತ್ತೇನೆ. ಏಕೆಂದರೆ, ಇವತ್ತು ಭಾರತ ದೇಶ ವಿಶ್ವದಲ್ಲಿ ಒಂದನೇ ಸ್ಥಾನಕ್ಕಾಗಿ ಸ್ವಾಭಿಮಾನದಿಂದ ಮುನ್ನುಗ್ಗುತ್ತಿದ್ದರೆ, ಅದು ಯಾವುದೇ ಅಧಿಕಾರಿಗಳ ಕೊಡುಗೆ ಅಲ್ಲ. ಅದು ಈ ದೇಶ ರೈತರ ದುಡಿಮೆಯ ಕೊಡುಗೆ ಎಂದು ಹೇಳಲಿಕ್ಕೆ ಇಚ್ಛಿಸುತ್ತೇನೆ. ಸ್ವತಂತ್ರ ಪೂರ್ವದಲ್ಲಿ ಭಾರತ ದೇಶದ ಜನಸಂಖ್ಯೆ 37 ಕೋಟಿ ಇದ್ದಾಗಲೂ ಕೂಡ ಸರಾಗವಾಗಿ ಅಕ್ಕಿ, ಗೋಧಿ, ಬೇಳೆ, ಇನ್ನಿತರ ಆಹಾರ ಧಾನ್ಯಗಳು ಸಿಗುತ್ತಿರಲಿಲ್ಲ. ವಿದೇಶದಿಂದ ನಾವು ಇಂಪೋರ್ಟ್ ಮಾಡುವ ವ್ಯವಸ್ಥೆಯಿತ್ತು. ಆದರೆ, ಭಾರತ ದೇಶ 60 ವರ್ಷಗಳ ನಂತರ ಸುಮಾರು 107 ಕೋಟಿ ಜನಸಂಖ್ಯೆಯಿದ್ದರೂ ಕೂಡ ಇಷ್ಟು ಜನರಿಗೂ ಆಹಾರ ಒದಗಿಸಿ ಹೆಚ್ಚಿಗೆ export ಮಾಡುವ ಶಕ್ತಿ ಭಾರತ

ದೇಶಕ್ಕೆ ಬಂದಿದ್ದರೆ ಅದು ಈ ರೈತರ ಕೊಡುಗೆ ಎಂದು ಆಲೋಚನೆ ಮಾಡಿಕೊಂಡು ಅದು ನಮ್ಮ ಜವಾಬ್ದಾರಿ, ಅವರ ಹಿತವನ್ನು ಕಾಯುವ ಕೆಲಸ ನಾವೆಲ್ಲ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಯಾರು ಕೂಡ ನಮ್ಮನ್ನು ಕ್ಷಮಿಸಲಿಕ್ಕೆ ಸಾಧ್ಯವಿಲ್ಲ. ಆದಕಾರಣ ಇದರಲ್ಲಿ ಹಲವಾರು ಲೋಪದೋಷಗಳಿವೆ. ಅದನ್ನೆಲ್ಲಾ ನಮ್ಮ ಎಲ್ಲಾ ಹಿರಿಯ ನಾಯಕರು, ಸದಸ್ಯರು ತಮ್ಮ ಮುಂದೆ ಇಟ್ಟಿದ್ದಾರೆ. ನಾನು ಅದರ ಬಗ್ಗೆ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ನನ್ನ ಕಳಕಳಿಯ ಮನವಿ ಇಷ್ಟೆ. ಎಲ್ಲಾ ಲೋಪದೋಷಗಳನ್ನು ಸರಿಪಡಿಸಿ, ತಿದ್ದುಪಡಿ ಮಾಡಿ ವಿಧೇಯಕವನ್ನು ಮಂಡಿಸಿದಾಗ, ಅದರಲ್ಲಿ ಏನಾದರೂ ಲಾಭವಿದ್ದರೆ, ಅಥವಾ ಅಧಿಕಾರ ಜಾಸ್ತಿಯಿದ್ದರೆ, ಆ ಅಧಿಕಾರ ರೈತ ವರ್ಗಕ್ಕೆ ಹೋಗಬೇಕೆಂದು ಹೇಳುತ್ತೇನೆ. ಇವತ್ತೇನು ಎಲ್ಲಾ ಇಲಾಖೆಯಲ್ಲಿ ಅಧಿಕಾರಿಗಳು octopuses ತರಹ ಮುಂದೆ ಹೋಗುತ್ತಾರೆ, ಅವರ ಸಂಪೂರ್ಣ ಸಹಕಾರ ನಮಗೆ ಬೇಕು, ನಾವು ಕೂಡ ಅವರಿಗೆ ಸಂಪೂರ್ಣ ಸಹಕಾರ ಕೊಡುತ್ತಿದ್ದೇವೆ. ಅವರ ಶ್ರಮಕ್ಕೆ ನಮ್ಮ ಗೌರವ ಇದೆ. ಆದರೆ, ಈ ಸಮಾಜದಲ್ಲಿ ನೈಜವಾದ ಪರಿಸ್ಥಿತಿಯನ್ನು ಅರಿತುಕೊಂಡು ಮುಂದಿನ ಕ್ರಮ ಕೈಗೊಳ್ಳಬೇಕೆಂದು ಕಳಕಳಿಯಿಂದ ಕೇಳಿಕೊಂಡು ಆದಷ್ಟು ಬೇಗನೆ ಉತ್ತಮವಾದ ತಿದ್ದುಪಡಿಯ ಮೂಲಕ ಮತ್ತೆ ಈ ಒಂದು ವಿಧೇಯಕ ಈ ಸದನದಲ್ಲಿ ಮುಂದಿನ ದಿನಗಳಲ್ಲಿ ಮಂಡನೆಯಾಗಲಿ, ಅದರ ಮುಖಾಂತರ ಈ ರಾಜ್ಯದ ಎಲ್ಲಾ ರೈತರ ಪ್ರೀತಿಗೆ ಪಾತ್ರರಾಗಿ ಭಾರತ ದೇಶದಲ್ಲಿ ಮಾದರಿಯಾದ ವಿಧೇಯಕವನ್ನು ಮಂಡಿಸಿದ ಕೀರ್ತಿ ನಿಮಗೆ ಬರಲಿ ಎಂದು ಶುಭ ಹಾರೈಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಟಿ. ಕೃಷ್ಣಪ್ಪ : ಬಜೆಟ್ ಮೇಲೂ ಇಷ್ಟು ಅವಕಾಶ ಸಿಗಲಿಲ್ಲ. 56 ಸಾವಿರ ಕೋಟಿಯ ಬಜೆಟ್ ಮೇಲೂ ಇಷ್ಟು ವ್ಯಾಪಕವಾಗಿ ಚರ್ಚೆ ಮಾಡಲು ಅವಕಾಶ ಸಿಗಲಿಲ್ಲ. ಆದರೆ ಈ ವಿಧೇಯಕ ಮೇಲೆ ಇಷ್ಟು ಅವಕಾಶ ಸಿಕ್ಕಿದೆ.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) : ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ಕ್ಲೋಸ್ ಮಾಡಿಬಿಡಿ.

ಅಧ್ಯಕ್ಷರು : ಅದಕ್ಕೆ ಈಗ compensate ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇನ್ನೊಂದು ದಿನ demands ಮೇಲೆ ಚರ್ಚಿಸುವುದಕ್ಕೆ ಅವಕಾಶ ಸಿಕ್ಕಿದ್ದರೆ, ಪಾಪ ಎಲ್ಲರಿಗೂ

ಸಮಾಧಾನ ಆಗುತ್ತಿತ್ತು. ಸಿಗದೇ ಇರುವುದರಿಂದ ಈ ಪರಿಸ್ಥಿತಿ ನಿರ್ಮಾಣ ವಾಗಿದೆ. ಶಿವಣ್ಣನವರೆ ಏಕೆ ನೀನು ಮಾತನಾಡುತ್ತಿಲ್ಲ?

ಶ್ರೀ ಎಸ್.ಶಿವಣ್ಣ : ಭತ್ತ ಕುಟ್ಟಿದ್ದೇ ಕುಟ್ಟುತ್ತಾರೆ ಎಂದು ಹಳ್ಳಿಕಡೆ ಹೇಳುತ್ತಾರೆ, ನೀವು ಕುಟ್ಟಿದ್ದೇ ಕುಟ್ಟುತ್ತಿದ್ದರೆ ನಾವು ಕೇಳಿಕೊಂಡು ಕುಳಿತಿದ್ದೇವೆ, ನಾವು ಇನ್ನೇನು ಮಾಡೋಣ?

ಶ್ರೀ ಸಿ.ಎಸ್.ಪುಟ್ಟೇಗೌಡ : ಶಿವಣ್ಣನಿಗೆ ಮಂತ್ರಿ ಮಾಡಿಲ್ಲ. ವೈರಾಗ್ಯ ಬಂದು ಬಿಟ್ಟಿದೆ.

ಶ್ರೀ ಎಸ್. ಶಿವಣ್ಣ : ತಾವು ಅಲ್ಲ ಸಾರ್, ತಪ್ಪು ತಿಳಿದುಕೊಳ್ಳಬೇಡಿ. ಬೇರೆಯವರು ಕುಟ್ಟುತ್ತಾರಲ್ಲ ಅದಕ್ಕೆ ಬೇಸರ ಅಷ್ಟೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ, ದಿನ ಸಾಯುವವರ ಮನೆಯಲ್ಲಿ ಅಳುವವರು ಯಾರು?

ಶ್ರೀ ಸಿದ್ದರಾಮಯ್ಯ : ಹಾಗಾದರೆ ನೀವು ಒಂದು ಕೆಲಸ ಮಾಡಿ. ನೀವು ಈ ಕಡೆ ಕುಳಿತುಕೊಳ್ಳಿ ನಾವು ಆ ಕಡೆ ಕುಳಿತುಕೊಳ್ಳುತ್ತೇವೆ, ಆಗ ನಿಮಗೆ ಕೇಳುವುದು ತಪ್ಪಿ ಹೋಗುತ್ತದೆ.

ಶ್ರೀ ಎಸ್.ಶಿವಣ್ಣ : ಅಲ್ಲಿ ಇದ್ದು ಇದ್ದು ಸಾಕಾಗಿ ಹೋಗಿದೆ. ಅದಕ್ಕೆ ಈ ಕಡೆಗೆ ಬಂದಿದ್ದೇವೆ.

ಶ್ರೀ ಸಿದ್ದರಾಮಯ್ಯ : ಹಾಗಾದರೆ ನಾವು ಹೇಳುವುದನ್ನು ನೀವು ಹೇಳಿ.

ಶ್ರೀ ಎಸ್.ಶಿವಣ್ಣ : ನಿಮ್ಮದು ಕೇಳುತ್ತೇವೆ, ಬೇರೆಯವರು ಕೇಳುವುದಕ್ಕೆ ಬಹಳ ಕಷ್ಟವಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಈ ವಿಧೇಯಕ ತಂದಿದ್ದೀರಲ್ಲಾ, ಯಾವಾಗಲೂ ಹೊಸ amendments ತರುವುದು, ಹೊಸ ಕಾನೂನುಗಳನ್ನು ಮಾಡುವುದು ಸಮಾಜದಲ್ಲಿ ಹೊಸ ಹೊಸ ಸಮಸ್ಯೆಗಳಿಗೆ ಪರಿಹಾರ ಹುಡುಕಬೇಕಾದಾಗ. These are new challengers. ಆ Challengesಗಳನ್ನು meet ಮಾಡಲಿಕ್ಕೆ ಬದಲಾವಣೆಗಳನ್ನು ಮಾಡಬೇಕು. ಸುಮ್ಮನೆ ಇರುವ ಕಾಯಿದೆ ಬದಲಾಯಿಸಿ ಇನ್ನೊಂದು ಕಾಯಿದೆ ಬದಲಾಯಿ ಸುವುದರಿಂದ You cannot call it, this bill is a very progressive Bill. Progressive Bill ಆಗಬೇಕಾದರೆ ಯಾವಾಗ, ನೀವು ತಂದಿರುವ Bill ನಿಂದ ಗ್ರಾಮೀಣ ಜನರ ಬದುಕಿನಲ್ಲಿ ಒಂದು ಹೊಸ ಬದಲಾವಣೆ

ತರುತ್ತದೆ, ಒಂದು ಕ್ರಾಂತಿಕಾರಕ ಬದಲಾವಣೆ ಆಗುತ್ತದೆ, ಈಗ ಈ ವಿಧೇಯಕದಲ್ಲಿ Vice Chancellorsಗೆ 1963ರ Actನಲ್ಲಿ ಇರುವುದಕ್ಕಿಂತ ಹೆಚ್ಚು Powers ಕೊಟ್ಟರೆ ಇನ್ನೊಂದು ಹಸಿರು ಕ್ರಾಂತಿಯಾಗುತ್ತದೆಯೇ? I don't think, ಒಬ್ಬ bureaucratಗೆ, Vice Chancellorಗೆ more powers ಕೊಟ್ಟರೆ ಕ್ರಾಂತಿ ಆಗುತ್ತದೆಯೆ? ಇದ್ದಕ್ಕಿದ್ದ ಹಾಗೆ ಒಂದು ಲಕ್ಷ ಮೂವತ್ತು ಮಿಲಿಯನ್ ಟನ್ ಆಹಾರದಿಂದ ಎರಡೂವರೆ ಲಕ್ಷ ಮಿಲಿಯನ್ ಟನ್ ಆಹಾರ ಉತ್ಪಾದನೆಯಾಗುತ್ತದೆಯೆ? O.k. ಕೊಡೋಣ. What purpose is going to be served. Board of Regents ಇರುವುದನ್ನು Board of Management ಎಂದ ತಕ್ಷಣ ಏನು ಬದಲಾವಣೆ ಆಗುತ್ತದೆ? What is that you are going to achieve? Board of Regents ಎನ್ನುವುದರಲ್ಲಿ ಈಗಿರುವ ನಮ್ಮ ಕೃಷಿ ಪದ್ಧತಿಗೆ ಏನು ಮಾರಕವಾಗುತ್ತದೆ? Why you have to change? ಅವು ಏನಾದರೂ ಕೆಟ್ಟ ಪದಗಳೆ? ಅಥವಾ ಇಡೀ ಜಗತ್ತಿನಲ್ಲಿ ಈ ತರಹದ ಪದಗಳು ಇಲ್ಲವೆ? Board of Regents ಇರುವುದನ್ನು Board of Management ಎಂದರೆ ಚೆನ್ನಾಗಿ ಕಾಣಿಸುತ್ತದೆಯೆ? ಇದರಲ್ಲಿ ಯಾವುದಾದರೊಂದು ಮಹತ್ವದ ಉದ್ದೇಶವಿದೆ, ಇವತ್ತು ಇಂತಿಂಥ ಬದಲಾವಣೆಗಳಾಗಿವೆ ಆ ಬದಲಾವಣೆಗಳಿಗಾಗಿ ಈ ಕಾನೂನು ಮೂಲಕ ಪರಿಹರಿಸಲಿಕ್ಕೆ ಈ ವಿಧೇಯಕ ತಂದಿದ್ದೇವೆ. ಅದೇನು ಇದರಲ್ಲಿ ಇಲ್ಲ. 1963ರ Act itself ನೀವು ಹೊಸ University ಮಾಡಬೇಕನ್ನುವಂತಹದ್ದು, ನೀವು ರಾಯಚೂರಿನಲ್ಲಿ ಒಂದು ಹೊಸ ಯೂನಿವರ್ಸಿಟಿ ಮಾಡಿದ್ದೀರಿ. ಮಾಡಿ fine. We also welcome it. But why do you want to bring this Bill? ಅದನ್ನು 1963ರ ಆಕ್ಟ್‌ನಲ್ಲಿ ಮಾಡುವುದಕ್ಕೆ ಬರುವುದಿಲ್ಲವೆ? Is there any problem? ಅಲ್ಲಿಯೇ amendment ಮಾಡಿ ತರಬಹುದಾಗಿತ್ತಲ್ಲವೆ? Bangalore Agriculture University ಆದಮೇಲೆ ನಾವು Dharwad Agriculture University ಮಾಡಿಲ್ಲವೆ? Under the same 1963 Act ಮಾಡಿದ್ದೇವೆ. ಹಾಗೆಯೇ ರಾಯಚೂರಿನಲ್ಲಿ ಮಾಡಿ. Increasing the official Members for Board of Management ಇದರಿಂದ ಯಾವ ಪುರುಷಾರ್ಥ ಸಾಧನೆಯಾ

ಗುತ್ತದೆ? ಅಲ್ಲಿ ಆಗಬೇಕಾಗಿರುವುದು ನಮ್ಮ ಬೋಧನೆ ಮಟ್ಟ ಹೆಚ್ಚಾಗಬೇಕು. Research ಹೆಚ್ಚಾಗಬೇಕು. Agriculture Servicesನಲ್ಲಿ ಹೊಸ ಹೊಸ ತಳಿಗಳು ಬರಬೇಕು. Food Productivity ಹೆಚ್ಚಾಗಬೇಕು. Cost of production ಕಡಿಮೆಯಾಗಬೇಕು. Cost of cultivation ಕಡಿಮೆಯಾಗಬೇಕು. ಆ ತರಹದ ಯಾವುದೇ Researchಗೆ ಅನುಕೂಲವಾಗುತ್ತದೆ ಎಂದರೆ ಮಾಡೋಣ. ಅಂಥ ಬಹಳ ದೊಡ್ಡ Research ಆಗುತ್ತದೆ ಎಂದರೆ ಮಾಡೋಣ. Bill ಬದಲಾಯಿಸಿ ಬಿಟ್ಟರೆ ಅದಕ್ಕೇನು ಅನುಕೂಲವಾಗುತ್ತದೆ? ಹೆಚ್ಚು ಅಧಿಕಾರಿಗಳನ್ನು ಹಾಕಿ ಬಿಟ್ಟರೆ ಅದರಿಂದ ಬರುತ್ತದೆಯೆ? Then, why do you want to give more sweeping powers to the Vice Chancellors? ನನಗೆ ಅರ್ಥವಾಗುವುದಿಲ್ಲ. What warranted the Government to take this type of step? ರೈತರನ್ನು ಕಡಿಮೆ ಮಾಡಿ, ನನ್ನ ಪ್ರಕಾರ ಹಳೆಯ ಆಕ್ಟ್‌ನಲ್ಲಿ 13 ಜನ ಇದ್ದರಲ್ಲ ಅದಕ್ಕೆ ಇನ್ನೊಂದೆರಡು ಜನ ರೈತರನ್ನು ಜಾಸ್ತಿ ಮಾಡಿ 8 ಜನ ಮಾಡಿ. ಹಾಗಾದರೆ ನೀವು ಚೈನಾ ದೇಶಕ್ಕೆ ಏಕೆ ರೈತರನ್ನು ಕಳುಹಿಸಿದಿರಿ?

ಶ್ರೀ ಬಿ.ಎನ್.ಬಚ್ಚೇಗೌಡ : ತಾವು Academic ಮಾತನಾಡಿ, ಈ ತರಹ ಮಾತನಾಡಬಾರದು.

ಶ್ರೀ ಸಿದ್ದರಾಮಯ್ಯ : ಇನ್ನು ಯಾವ ತರಹ ಮಾತನಾಡುವುದು? Academic ಎಂದರೇನು ಎಂಬುದನ್ನು ಸ್ವಲ್ಪ ಹೇಳಿ ಕೊಡಿ.

ಶ್ರೀ ಬಿ.ಎನ್. ಬಚ್ಚೇಗೌಡ : ತಾವು Vice Chancellor ಬೇಡವೆಂದರೆ ಹೇಗೆ, He will be the head of the University. Agriculturist, can he become the head of the University? Board is different, University is different. There are so many faculties. ತಾವು ಆ ರೀತಿಯಾಗಿ ಮಾತನಾಡಿದರೆ ಹೇಗೆ? If you generalize the issues as an Opposition Leader ಏನು ಇಂಪ್ರೆಷನ್ ಬರುತ್ತದೆ ನೀವೇ ಹೇಳಿ? This is the way you are presenting……..

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಮಗೇನು ಹೇಳಿಕೊಡುವುದು ಬೇಕಾಗಿಲ್ಲ, This is the way one should not talk.

ಶ್ರೀ ಬಿ.ಎನ್.ಬಚ್ಚೇಗೌಡ : ನಾನು ನಿಮಗೆ ಹೇಳುವುದೇನೆಂದರೆ, ತಾವು ಇದನ್ನು ಓದಿದ್ದೀರೋ ಅಥವಾ ಇಲ್ಲವೋ ಗೊತ್ತಿಲ್ಲ.

ಶ್ರೀ ಸಿದ್ದರಾಮಯ್ಯ : ನಾನು ಓದಿಕೊಂಡು ಬಂದಿದ್ದೇನೆ.

ಶ್ರೀ ಬಿ.ಎನ್.ಬಚ್ಚೇಗೌಡ : ತಾವು ದಯಮಾಡಿ ಓದಿ.

ಶ್ರೀ ಸಿದ್ದರಾಮಯ್ಯ : ಏನೆಂದು ನೀವೇ ಓದಿ ಹೇಳಿ?

SRI B.N. BACHE GOWDA : what is the authority of the University? Who is the Board of Management? Who is the Academic Council? Who is the Research Council? Who is the Academic Schools and Education Council?

ಶ್ರೀ ಸಿದ್ದರಾಮಯ್ಯ : ನಾನು ಅದನ್ನೆ ಹೇಳುತ್ತಿದ್ದೇನೆ. ತಾವು ಸ್ವಲ್ಪ ಕುಳಿತುಕೊಳ್ಳಿ ನಾನು ಹೇಳುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ : ಇದನ್ನು ತೆಗೆದುಕೊಂಡು ಬಂದು ಅಗ್ರಿಕಲ್ಚರಿಸ್ಟ್‌ಗಳ ಕೈಗೆ ಕೊಟ್ಟುಬಿಡೋಣವೆ? I object to this. ತಾವು ವಕೀಲ ರಿದ್ದೀರಿ. ತಮ್ಮಿಂದ ಈ ರೀತಿ ನಾನು ನಿರೀಕ್ಷೆ ಮಾಡರಲಿಲ್ಲ. ಇದರ ಬಗ್ಗೆ ಯೋಚನೆ ಮಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾವು ಹೇಳುವುದನ್ನು ಶಾಂತವಾಗಿ ಕುಳಿತುಕೊಂಡು ಕೇಳಿ. ಆಮೇಲೆ you object ಮಾಡಿ. Give a reply.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಈಗಾಗಲೇ ರೈತರ ಜಾಗವೆಲ್ಲವನ್ನು ಮಾರಾಟ ಮಾಡಲಾಗಿದೆ. ಈಗ ರೈತರನ್ನು ಮಾರಾಟ ಮಾಡಿಬಿಡಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಬಚ್ಚೇಗೌಡರೆ, ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಈಗ ಕುಳಿತುಕೊಳ್ಳಿ. ನೀವು ಉತ್ತರ ಕೊಡುವಾಗ this is not the academic argument ಎಂದು ಬೇಕಾದರೆ ಹೇಳಿ. It is not in the interest of the …

(ಗೊಂದಲ)

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಮೊದಲು ಹೇಳಲಿ. ಆನಂತರ ತಾವು ಉತ್ತರ ಕೊಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ತಾವು ಅವರ ಕಡೆಯಿಂದಲೇ ಮಾತನಾಡಿಸಿ.

(ಗೊಂದಲ)

ಶ್ರೀ ಬಿ.ಎನ್.ಬಚ್ಚೇಗೌಡ : Vice Chancellor ಏಕೆ ಬೇಕೆಂದು ಅವರು ಹೇಳಿದ್ದಕ್ಕೆ ನಾನು ಹೇಳಿದೆ. Sorry, ಅವರೇ ಮಾತನಾಡಲಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಬಚ್ಚೇಗೌಡರೆ, ನಾನು ಹೇಳುವುದೇನೆಂದರೆ, ಇದೇ ರೀತಿಯಾಗಿ, ಇದೇ ವಿಷಯವನ್ನು ಮಾತನಾಡಬೇಕೆಂದು ನೀವು ಅವರಿಗೆ ಡಿಕ್ಟೇಟ್ ಮಾಡುವುದಕ್ಕೆ ಬರುವುದಿಲ್ಲ. ಮಂತ್ರಿಗಳಿಗೆ ನೀವು ಇದೇ ರೀತಿಯಾಗಿ ಉತ್ತರ ಕೊಡಬೇಕೆಂದು ಅವರೂ ಸಹ ಹೇಳುವುದಕ್ಕೆ ಬರುವುದಿಲ್ಲ. ಆದ್ದರಿಂದ, ಅವರು ಮಾತನಾಡಿ ಮುಗಿಸಲಿ. ಆನಂತರ ಅದಕ್ಕೆ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಆರು ಮಂದಿಯನ್ನು ತೆಗೆದು ಅಲ್ಲಿ ಎಲ್ಲರು ಅಧಿಕಾರಿಗಳೆ ಬೇಕಾದರೆ ಇರಲಿ. ಇದಕ್ಕೆ ನಮ್ಮದೇನು ಅಭ್ಯಂತರ ಇಲ್ಲ. ಸರ್ಕಾರ ಬೇಡವೆಂದರೆ ನಾವೇಕೆ ಬೇಕೆಂದು ಹೇಳಬೇಕು? ಇದನ್ನು ರೈತರಿಗೆ ಕೊಡಿ ಎಂದು ನಾವೇನು ಕೇಳಿಲ್ಲ.

(ಗೊಂದಲ)

ಅಧ್ಯಕ್ಷರು : ಆಯಿತು. ತಾವು ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ನಾವು ಹೇಗೆ ಮಾತನಾಡಬೇಕೆಂಬುದು ನಮಗೆ ಗೊತ್ತಿದೆ. ನೀವು ಹೇಗೆ ಉತ್ತರ ಕೊಡಬೇಕೆಂದು ನೀವು ಕೊಡಿ. ಯಾವ ರೀತಿಯಾಗಿ ಮಾತನಾಡಬೇಕೆಂದು ಮತ್ತು ಯಾವರೀತಿಯಾಗಿ argument ಮಾಡಬೇಕೆಂದು ನಾವು ನಿಮ್ಮಿಂದ ಕಲಿಯಬೇಕೇ? ಮತ್ತೆ academic and non academic ಆಗಿ ಹೇಗಿರಬೇಕೆಂದು ನಾವೇನು ನಿಮ್ಮಿಂದ ಕಲಿಯ ಬೇಕಾಗಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನೀವೆಲ್ಲರೂ ಹೇಳಿದ ಹಾಗೆ ಕೇಳಿಕೊಂಡು ಕುಳಿತುಕೊಳ್ಳುವುದಕ್ಕೆ ನಾವು ಇಲ್ಲಿಗೆ ಬರುವುದೇ?

ಅಧ್ಯಕ್ಷರು : ನಾನು ಎಷ್ಟು ಸಾರಿ ಹೇಳಬೇಕು. ನೀವು ಸುಮ್ಮನೆ ಕುಳಿತುಕೊಳ್ಳಿ. ನಿಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಅವರು ಮಾತನಾಡುತ್ತಿಲ್ಲ. ತಾವೇಕೆ ಕುಳಿತುಕೊಂಡು ಅಕ್ಕಪಕ್ಕದಲ್ಲಿ argument ಮಾಡುತ್ತೀರಿ? ನೀವು ಸುಮ್ಮನೆ ಕುಳಿತುಕೊಳ್ಳಿ, ಸಂಬಂಧಪಟ್ಟ ಸಚಿವರು ಉತ್ತರ ಕೊಡುತ್ತಾರೆ. ಪದೇ ಪದೇ ಎಷ್ಟು ಸಲ ನಿಮಗೆ ಹೇಳಬೇಕು? ನನಗೂ ಕೂಡ ಸಾಕಾಗಿದೆ. ಅಲ್ಲೇ ಕುಳಿತುಕೊಂಡು ಪರಸ್ಪರ ಮಾತನಾಡಿಕೊಳ್ಳುತ್ತೀರಿ ಮತ್ತೆ argument ಕೂಡ ಮಾಡುತ್ತಿದ್ದೀರಿ. ಇದು ಸದನಕ್ಕೆ ಗೌರವತರತಕ್ಕಂಥದ್ದೆ? ಇದಕ್ಕೆ ಸಂಬಂಧ ಪಟ್ಟಂಥ ಸಚಿವರು ಉತ್ತರ ಕೊಡುತ್ತಾರೆ. ಎಲ್ಲರೂ ನಿಂತುಕೊಂಡರೆ ಹೇಗೆ? ಅವರು ಮಾತನಾಡುತ್ತಿದ್ದಾರೆ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, 9ನೇ ತಾರೀಖಿನಿಂದ ಸದನ ನಡೆಯುತ್ತಿದೆ. ಹೈದರಾಬಾದ್ ಕರ್ನಾಟಕದ ಬಗ್ಗೆ ಯಾವತ್ತಾದರು ಚರ್ಚೆ ಮಾಡಿದ್ದಾರೆಯೇ? ಮತ್ತೆ ಗಮನ ಸೆಳೆಯುವ ಸೂಚನೆ ಅಥವಾ ನಿಲುವಳಿ ಸೂಚನೆ ತಂದು ಏನಾದರೂ ಚರ್ಚೆ ಮಾಡಿದ್ದಾರೆಯೇ? ಇಷ್ಟು ದಿವಸ ಏತಕ್ಕೋಸ್ಕರ ಚರ್ಚೆ ಮಾಡಲಿಲ್ಲ? ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ಕೂಡ ಅವರಿಗೆ ಅಗೌರವ ಆಗುವ ರೀತಿಯಲ್ಲಿ ನಡೆದುಕೊಂಡರು. ನಾನು ಅದರ ಬಗ್ಗೆ ಹೇಳಿದೆ ಅಷ್ಟೆ.

(ಗೊಂದಲ)

ಅಧ್ಯಕ್ಷರು : ಯಾರಿಗೆ ಏನು ಹೇಳಬೇಕಾಗಿದೆಯೋ ಅದನ್ನು ನಾನು ಈಗಾಗಲೇ ಹೇಳಿದ್ದೇನೆ. ಸಭಾಧ್ಯಕ್ಷರಿಗೆ ಈ ರೀತಿಯಾಗಿ argument ಮಾಡುವುದು ಸರಿಯಲ್ಲ. ತಾವೊಬ್ಬ ಸಚಿವರಾಗಿ ಈ ರೀತಿಯಾದ ನಿಮ್ಮ ನಡವಳಿಕೆಗಳು ಸರಿಯಲ್ಲ. ಒಬ್ಬ ಮಂತ್ರಿಯಾಗಿ ಈ ರೀತಿಯಾಗಿ argument ಮಾಡುವುದು ಒಳ್ಳೆಯದಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಿಮ್ಮಿಂದ ನಾನು ಏನು ಕಲಿಯಬೇಕಾಗಿಲ್ಲ, ತಾವು ಕುಳಿತುಕೊಳ್ಳಿ.

ಅಧ್ಯಕ್ಷರು : ನಿಮಗೆಷ್ಟು ಸಲ ಹೇಳಬೇಕು. ಅವರು ನಿಮ್ಮ ಇಲಾಖಾ ಬೇಡಿಕೆ ಬಗ್ಗೆ ಚರ್ಚೆ ಮಾಡುತ್ತಿದ್ದಾರೆಯೇ? ಏಕೆ intervene ಆಗುತ್ತೀರಿ?

ಶ್ರೀ ಸಿದ್ದರಾಮಯ್ಯ : ನಮಗಿಂಥ ಬಹಳ ವರ್ಷಗಳಿಂದ ನಾನು ಇಲ್ಲಿದ್ದೇನೆ. ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಅವರವರ knowledgeಗೆ ತಕ್ಕಂತೆ ಮಾತನಾಡುತ್ತಾರೆ.

ಶ್ರೀ ಸಿದ್ದರಾಮಯ್ಯ : ನಿಮ್ಮ knowledge ನ್ನು ನೀವು ಇಟ್ಟುಕೊಳ್ಳಿ. ನನ್ನ knowledge ನನ್ನ ಹತ್ತಿರ ಇರುತ್ತದೆ. ನೀವ್ಯಾರು ನನಗೆ ಹೇಳುವುದಕ್ಕೆ? ಸುಮ್ಮನೆ ಕುಳಿತುಕೊಳ್ಳಿ. It is none of your busines.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿಂದ ಬಿಲ್ ಪಾಸ್ ಆಗಿ ಬರುತ್ತದೆಂದು ಆ ಮನೆಯಲ್ಲಿಯೂ ಕೂಡ ಕಾಯುತ್ತಿದ್ದಾರೆ. ಅವರ ಸಲಹೆಗಳು ಏನಿವೆಯೋ ಅದನ್ನು ಶಾಂತವಾಗಿ ಕೇಳಿ. ಇಲ್ಲಿಂದ ಇನ್ನು ಎರಡು-ಮೂರು ಬಿಲ್ ಪಾಸ್ ಆಗಿ ಆ ಮನೆಗೆ ಹೋಗಬೇಕಾಗಿದೆ.

ಶ್ರೀ ಬಿ.ಎನ್.ಬಚ್ಚೇಗೌಡ : ನಾವು ಮಧ್ಯೆ ಎದ್ದು ಮಾತನಾಡುವುದಕ್ಕೆ ಹೋದರೆ ಅವರು ಸುಮ್ಮನೆ ಕೋಪ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ನೀವೇ ಮಾತನಾಡಿ.

ಅಧ್ಯಕ್ಷರು : ನೀವು ಮಧ್ಯೆ ಮಧ್ಯೆ intervene ಮಾಡಿದರೆ ಹೇಗೆ? ಸಂಬಂಧಪಟ್ಟ ಸಚಿವರು intervene ಮಾಡಲಿ.

(ಗೊಂದಲ)

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು : ಎಲ್ಲದಕ್ಕೂ ದಬ್ಬಾಳಿಕೆ ಮಾಡಿಕೊಂಡು ಬರುತ್ತಿದ್ದೀರಿ. ಯಾವ ವಿಷಯದ ಬಗ್ಗೆ ಸರಾಗವಾಗಿ ಮಾತನಾಡುವುದಕ್ಕೆ ಅವರು ಬಿಟ್ಟಿದ್ದಾರೆ. 9ನೇ ತಾರೀಖಿನಿಂದ ಸದನ ಪ್ರಾರಂಭವಾಗಿದೆ. ಅವತ್ತಿನಿಂದ ಇವತ್ತಿನವರೆಗೆ ವಿರೋಧ ಪಕ್ಷ ಯಾವುದಕ್ಕೆ ಸಹಕಾರ ಕೊಟ್ಟಿದೆ? ಬಜೆಟ್, ಬೇಡಿಕೆಗಳ ಬಗ್ಗೆ ಯಾವತ್ತು ಚರ್ಚೆ ಮಾಡಿದ್ದೀರಿ? ಯಾವತ್ತೂ ಕೂಡ ಮಾಡಿಲ್ಲ. ಅವತ್ತಿನಿಂದ ಇವತ್ತಿನವರೆಗೂ ಕೂಡ ಸಹಕಾರ ಕೊಟ್ಟಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಏಕೆ ಕೊಡಬೇಕು? ಇಲ್ಲಿ ಹುಡುಗಾಟ ಆಡುತ್ತಿದ್ದೀರಿ. ನೀವು ಹೇಳಿದಂತೆ ನಾವು ಕೇಳಬೇಕೆ? ಈ ಬಿಲ್ ಬಗ್ಗೆ ಮಾತನಾಡಬೇಡಿ ಎಂದು ಇಷ್ಟು ಹೊತ್ತು ಮಾತನಾಡಿ ಹೇಳಬೇಕಾಗಿಲ್ಲ.

ನಾವು ಏನು ಹೇಳುತ್ತೇವೆಯೋ ಅದಕ್ಕೆ ಸಂಬಂಧಪಟ್ಟಂಥ ಸಚಿವರು ಉತ್ತರ ಕೊಡುತ್ತಾರೆ. ಸರಿ ಇಲ್ಲದಿದ್ದರೆ ಅವರು ಏನು ಬೇಕಾದರು ಹೇಳುತ್ತಾರೆ. ಈ ರೀತಿಯಾದರೆ ಬಹಳ ಕಷ್ಟವಾಗುತ್ತದೆ. I am sorry. ನಾವು ಯಾವುದೊ ಒಂದು ವಿಷಯದ ಬಗ್ಗೆ ಹೇಳುತ್ತಾ ಇರುತ್ತೇವೆ. ಆಗ academic ಆಗಿ ಹೇಳಿ, un-academic ಆಗಿ ಹೇಳಿ ಎಂದು ಹೇಳುವುದಕ್ಕೆ ಬರುತ್ತಾರೆ. ರೈತರನ್ನು ಕಡಿಮೆ ಮಾಡುವುದು ಮತ್ತು ಅಧಿಕಾರಿಗಳನ್ನು ಜಾಸ್ತಿ ಮಾಡುವುದು academic? ನಾವು ಹೇಳುವುದೇನೆಂದರೆ, ಈಗ ಇರುವ ಆಕ್ಟ್‌ನಲ್ಲಿ 6 ಜನ ರೈತರಿದ್ದರು. ಮತ್ತೆ ಇದರಲ್ಲಿ ಒಟ್ಟು 13 ಜನ ಇದ್ದರು, ಈಗ ಅದನ್ನು 15 ಜನ ಮಾಡಿದ್ದೀರಿ. ಇದರಲ್ಲಿ ಏನು ಡಿಫರೆನ್ಸ್ ಆಯಿತು? ಗುಣಾತ್ಮಕವಾಗಿ ಏನು ಬದಲಾವಣೆಯಾಯಿತ್ತೆಂಬುದರ ಬಗ್ಗೆ I want to know. ವಿಶ್ವವಿದ್ಯಾಲಯಗಳಿಗೆ ಎಂಎಲ್‌ಎ ಮತ್ತು ಎಂಎಲ್‌ಸಿಗಳನ್ನು ಕಳುಹಿಸಿಕೊಡುತ್ತೇವೆ. ಇಲ್ಲಿಂದ 3 ಜನ ಎಂಎಲ್‌ಎ ಗಳನ್ನು ಹಿಂದೆ ಕಳುಹಿಸಿಕೊಡುತ್ತಿದ್ದೆವು. ಎಂ.ಎಲ್.ಎ.ಗಳು ಅಲ್ಲಿದ್ದರೆ ಯೂನಿವರ್ಸಿಟಿಗಳು ಕೆಟ್ಟು ಹೋಗುತ್ತದೆಯೇ? ಹಾಗಾದರೆ Traditional Universityಗಳಿಗೆ ಎಂಎಲ್‌ಎ ಮತ್ತು ಎಂಎಲ್‌ಸಿ ಗಳನ್ನು ಏಕೆ ಕಳುಹಿಸಿಕೊಡುತ್ತೇವೆ. ಅವರುಗಳು ಶಾಸಕರಾಗಿರುತ್ತಾರೆ ಮತ್ತೆ ಅವರ ಅನುಭವಗಳು ಉಪಯೋಗಕ್ಕೆ ಬರಲೆಂಬ ಉದ್ದೇಶದಿಂದ ಮತ್ತು ಅವರು ರೈತರ ಜೊತೆ ಇರುತ್ತಾರೆ ಹಾಗೆಯೇ ಹಳ್ಳಿಗಾಡಿನ ಬದುಕು ಮತ್ತು ಕೃಷಿ ಗೊತ್ತಿರುವುದರಿಂದ ಇಂಥವರೆಲ್ಲರೂ ಅಲ್ಲಿದ್ದರೆ ಅನುಕೂಲವಾಗುತ್ತದೆಂಬ ಉದ್ದೇಶದಿಂದ ಕಳುಹಿಸಿಕೊಡುತ್ತೇವೆ. ನನ್ನ ಪ್ರಕಾರ 1963ರ ಆಕ್ಟ್‌ನಲ್ಲಿದ್ದಂತದನ್ನು ಬದಲಾವಣೆ ಮಾಡುವ ಅಗತ್ಯತೆ ಇಲ್ಲವೆಂಬುದು ನನ್ನ ಭಾವನೆ. ನೀವು ಯಾರನ್ನಾದರು ಹಾಕಿಕೊಳ್ಳಿ. ಏಕೆಂದರೆ ನಾವು ಹೇಳುವವರನ್ನು ತಾವೇನು ಹಾಕುವುದಿಲ್ಲ. ನೀವು ಯಾರನ್ನಾದರು ಹಾಕಿಕೊಳ್ಳಿ, ಅಧಿಕಾರದಲ್ಲಿದ್ದಾಗ ನಾವು ಹಾಕಿಕೊಳ್ಳುತ್ತೇವೆ. ನೀವು ಅಧಿಕಾರದಲ್ಲಿರುವಾಗ ನೀವು ಹಾಕಿಕೊಳ್ಳಿ. Vice Chancellor ಗೆ at the pressure of the Government 3 ವರ್ಷ ಮೆಂಬರ್ ಇರುವುದಕ್ಕೆ ಬಿಡಬೇಕು. ಆದರೆ, ಏಕೆ ತೆಗೆದು ಹಾಕುತ್ತೀರಿ? ರೈತ ಮೆಂಬರ್ ಆಗಿದ್ದರೆ ಆತ ಮೂರು ವರ್ಷಗಳು ಅಲ್ಲಿರಬೇಕು. ಆದರೆ, at the preasure of the Government or at the preasure of the Vice

Chancellor ಎಂದು ಎರಡು ರೀತಿಯಲ್ಲಿ ಕೂಡ ಇದರಲ್ಲಿ ಹೇಳಿದ್ದಾರೆ. ನಾಮಿನೇಟೆಡ್ ಮೆಂಬರ್ ಮೂರು ವರ್ಷ ಅಲ್ಲಿರುವುದಕ್ಕೆ ಬಿಡದೆ Vice Chancellor ತೆಗೆದುಹಾಕಬಹುದೆ? ನಾಮಿನೇಟೆಡ್ ಮೆಂಬರ್ ಅಲ್ಲಿ ಮೂರು ವರ್ಷ ಇರುವುದಕ್ಕೆ ಬಿಡುವುದಿಲ್ಲ ಮತ್ತೆ ಅಲ್ಲಿರುವವರು ಏನನ್ನು ಮಾತನಾಡು ವಂತಿಲ್ಲ. ಮತ್ತೆ ಕೋರಂ ಇಲ್ಲದೆ ಸಭೆಯನ್ನು ಒಂದು ಸಾರಿ ಮುಂದಕ್ಕೆ ಹಾಕಿದರೆ ಮತ್ತೆ ಸಭೆ ನಡೆಸುವುದಕ್ಕೆ ಕೋರಂ ಬೇಡ ಎಂದು ಇದೆ. ಅವರಿಗೆ ಇಷ್ಟ ಬಂದ ಹಾಗೆ ವಿಷಯಗಳನ್ನು ಪಾಸ್ ಮಾಡಿಕೊಂಡು ಹೋಗಬಹುದೆ? ಈ ರೀತಿಯಾದರೆ ಕೋರಂ ಏಕೆ ಬೇಕು? ಮುಂದಿನ ಸಭೆಗೂ ಕೋರಂ ಇರಬೇಕೆಂದು ಹೇಳಿ. ಇಲ್ಲಿ ಒಂದು ಸಾರಿ assembly adjourn ಆದರೆ, ಮತ್ತೆ ಸೇರುವುದಕ್ಕೆ ಕೋರಂ ಬೇಡವೇ? ಕೋರಂ ಇಡಬೇಕು, ಈಗ ಏಕೆ ಅದನ್ನು ಬದಲಾವಣೆ ಮಾಡಿದ್ದೀರಿ? ಯಾರದೋ personal interest ಗೋಸ್ಕರ ಈ ರೀತಿಯಾಗಿರಬೇಕೆಂಬ ಭಾವನೆಗಳು ಬರುತ್ತವೆ. ಯಾರದೋ ಆಸಕ್ತಿಯನ್ನು ಕಾಪಾಡುವುದಕ್ಕೋಸ್ಕರ ಈ ರೀತಿಯಾಗಿ ಬಂದಿರಬಹುದು. ಮತ್ತೆ ಈ ರೀತಿಯಾಗದೆ ಇರಬಹುದು. I don't know. But the question is, ಅಲ್ಲಿರತಕ್ಕಂಥ ಸದಸ್ಯರನ್ನು at the pressure of Vice Chancellor ತೆಗೆದು ಹಾಕಬಹುದೆಂದರೆ ಏನರ್ಥ? ಗೌರವಯುಕ್ತರಾಗಿರುವಂಥವರನ್ನು ಮತ್ತು ಅವರಿಂದ ಉಪಯೋಗವಾ ಗುತ್ತದೆಂಬ ಉದ್ದೇಶದಿಂದ ಸರ್ಕಾರ ಕೆಲವರನ್ನು ನಾಮಿನೇಟ್ ಮಾಡುತ್ತದೆ. Vice Chancellors ಹೇಳಿದಂತೆ ಕೇಳುವುದಕ್ಕೋಸ್ಕರ ನಾವು ನಾಮಿನೇಟ್ ಮಾಡುವುದೇ? Vice Chancellors ಮೇಲೆ ಎಲ್ಲದಕ್ಕೂ ಕಡಿವಾಣ ಹಾಕಿ ಎಂದು ಮತ್ತು ಅವರಿಗೆ ಕೊಟ್ಟಿರುವ ಅಧಿಕಾರವೆಲ್ಲವನ್ನು ಸರ್ಕಾರ ಕಿತ್ತುಕೊಳ್ಳಿ ಎಂದು ನಾನು ಹೇಳುವುದಿಲ್ಲ. ಅಲ್ಲಿ ಚರ್ಚೆ ಮಾಡುವುದಕ್ಕೆ ರೈತರ ಸಮಸ್ಯೆ ಹೇಳುವುದಕ್ಕೆ ಮತ್ತು ಅನುಭವ ಇರತಕ್ಕಂಥ ರೈತರು ಮತ್ತು rural background ಇರತಕ್ಕಂಥವರು ಮತ್ತು ಸ್ವತಃ ವ್ಯವಸಾಯ ಮಾಡಿಕೊಂಡು ಬಂದಿರುವವರು ಅಲ್ಲಿದ್ದರೆ ಹೆಚ್ಚು ಅನುಕೂಲವಾಗುತ್ತದೆ. ಅಲ್ಲಿ ಯಾರೊಬ್ಬ ಅಧಿಕಾರಿಯನ್ನು ಹೆಚ್ಚಿಗೆ ಮಾಡಿರುತ್ತೀರೆಂದು ತಿಳಿದುಕೊಳ್ಳೋಣ. ಉದಾಹರಣೆಗೆ ಹೇಳುವು ದಾದರೆ, Secretary to the Co-operative Department ಇರಬಹುದು. ಅಲ್ಲಿ ಇವರಿಗಿಂಥ ಒಬ್ಬ ರೈತ ಉಪಯೋಗಕ್ಕೆ ಬರುತ್ತಾನೋ ಅಥವಾ Co-

operative Departmentನ Secretary ಅಲ್ಲಿ ಉಪಯೋಗಕ್ಕೆ ಬರುತ್ತಾರೆಯೇ? ಆದರೆ, ಅಲ್ಲಿ ಕೃಷಿ ಇಲಾಖೆಯ ಕಾರ್ಯದರ್ಶಿಗಳು ಮತ್ತು ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳು ಇರಬೇಕಾಗುತ್ತದೆ. Because so many financial implications ಇರುತ್ತವೆ. ರೈತರನ್ನು ಏಕೆ ಕಡಿಮೆ ಮಾಡುತ್ತೀರಿ? ಇಲ್ಲಿ ಇನ್ನು ಇಬ್ಬರು ಅಧಿಕಾರಿಗಳನ್ನು ಹೆಚ್ಚು ಮಾಡಬೇಕಾದರೆ ಇಲ್ಲಿ ಇನ್ನು ಇಬ್ಬರು ರೈತರನ್ನು ಸಹ ಹೆಚ್ಚು ಮಾಡಿ. ಇನ್ನಿಬ್ಬರನ್ನು ಜಾಸ್ತಿ ಮಾಡಿದರೆ ಏನು ಆಗುವುದಿಲ್ಲ. 15 ಇರತಕ್ಕಂಥದ್ದನ್ನು 17 ಮಾಡಿ, ಅಲ್ಲಿ ಹೆಚ್ಚಾಗಿ ರೈತರು ಸಹ ಇರಲಿ. ಹೆಚ್ಚಾಗಿ ರೈತರು ಇರಲಿ. Why you are reducing the representation of the farmers? Because it is the University of Agriculture. This University is meant for the farming community. That is my point. ಇದು ಬಹಳ progressive bill ಏನಲ್ಲ. Progressive ಆಗಿದ್ದರೆ ಒಪ್ಪಿಕೊಳ್ಳೋಣ. ರೈತರಿಗೆ ಒಳ್ಳೆಯದು ಆಗುತ್ತದೆಂದರೆ ಒಪ್ಪಿಕೊಳ್ಳೋಣ. Farming Communityಗೆ ಅನುಕೂಲ ಆಗುತ್ತದೆಂದರೆ ಒಪ್ಪಿಕೊಳ್ಳೋಣ. Agricultural production · ಹೆಚ್ಚಾಗುತ್ತ ದೆಂದರೆ ಒಪ್ಪಿಕೊಳ್ಳೋಣ. ಅದು ಏನು ಇಲ್ಲದೆ ಈ ತರಹ ತೆಗೆದುಕೊಂಡು ಬಂದು ICARನವರು ಈ ಆಕ್ಟ್ ಬದಲಾಯಿಸಿ ಹೊಸ ಆಕ್ಟ್ ತೆಗೆದುಕೊಂಡು ಬನ್ನಿ ಎಂದು ಹೇಳಿದ್ದಾರಾ? ಅವರು ಏನು ಹೇಳಿಲ್ಲ. ಮಾನ್ಯ ಎಲ್ಲಾ ಸದಸ್ಯರ ಭಾವನೆಗಳು ಏನಿದೆ ಎಂದರೆ, ಈ ತರಹದು ಬೇಡ. ನೀವು ಇದನ್ನು ಈಗ ವಾಪಸ್ಸು ತೆಗೆದುಕೊಂಡು ತಿದ್ದುಪಡಿ ಮಾಡಿ ಇನ್ನೊಂದು ಸಲ ತೆಗೆದುಕೊಂಡು ಬನ್ನಿ. ಅದಕ್ಕೆ ಅಮೆಂಡ್‌ಮೆಂಟ್ ಮಾಡಿ, 1963ರ ಆಕ್ಟ್ ಮೇಲೆ University ಮಾಡಲಿ. ಇದನ್ನು ಇನ್ನು ಸಮಗ್ರವಾಗಿ ಇಡಿ ದೇಶದಲ್ಲಿ ಅಗ್ರಿಕಲ್ಚರ್ ಬಗ್ಗೆ ಏಕರೂಪದ ಒಂದು ಕಾನೂನು ಬರಲಿ ಎನ್ನುವಂತೆ ಇದ್ದರೆ ಒಂದು ಕಾನೂನು ಮಾಡಿ. We have no objection. ಅದು ಬಿಟ್ಟು ಸುಮ್ಮನೆ ಇಲ್ಲಿ ತೆಗೆದುಕೊಂಡು ಬಂದು ಯಾರಿಗೊ ಅನುಕೂಲವಾಗು ತ್ತದೆಂದು ಮಾಡಿದರೆ ವಿರೋಧ ಮಾಡಲೇ ಬೇಕಾಗುತ್ತದೆ. ನಾವು ಇದನ್ನು ವಿರೋಧ ಮಾಡುತ್ತಿದ್ದೇವೆ. ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಂಡು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ.

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರವನ್ನು ಕೊಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1986 ರಿಂದ ಇಲ್ಲಿ ಶಾಸಕರು ಸದಸ್ಯರಾಗಿ ಇಲ್ಲ. ಹಿಂದೆ ಇರಲಿಲ್ಲ ಈಗ ಮಾಡಬಾರದೆಂದು ನಾನೇನು ಹೇಳುತ್ತಿಲ್ಲ. ಆದರೆ ಇಲ್ಲಿರುವಂಥ ನಮ್ಮ ಸನ್ಮಾನ್ಯ ಸದಸ್ಯರಿಗೆ ಶಾಸಕರು ಇದ್ದದ್ದನ್ನು ತೆಗೆದರೂ ಎನ್ನುವ ಭಾವನೆ ಬರುವುದು ಬೇಡ. ಆದ್ದರಿಂದ ನೀವು ಏನು ಸಲಹೆಯನ್ನು ಕೊಟ್ಟಿದ್ದೀರಿ, ಅದರಂತೆ ಮೂರು ಜನ ಹೆಚ್ಚುವರಿಯಾಗಿ ರೈತರನ್ನು ಮೂರು ಜನ ಶಾಸಕರಿಗೆ ಅವಕಾಶ ಮಾಡಿಕೊಡುತ್ತೇವೆ. ದಯಮಾಡಿ ಈ ಬಿಲ್‌ನ್ನು ಒಪ್ಪಿಕೊಳ್ಳಿ.

ಶ್ರೀ ಸಿದ್ದರಾಮಯ್ಯ : The term at the pleasure of the Government and at the pleasure of the Vice Chancellor ಎಂದು ಇರುವುದನ್ನು ತೆಗೆದು ಹಾಕಬೇಕು.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಮಾನ್ಯ ಕಾನೂನು ಸಚಿವರೆ, ಇದರಲ್ಲಿ ಇನ್ನು ಬಹಳಷ್ಟು ತಿದ್ದುಪಡಿ ಮಾಡಬೇಕೆಂದು ನಿಮ್ಮ ಮನಸ್ಸಿನಲ್ಲಿದೆ. ಅದರ ಬಗ್ಗೆ ಸಮರ್ಪಕವಾಗಿ ಎಲ್ಲರೂ ಪೂರ್ಣವಾಗಿ ಹೇಳಿ ಏಕೆಂದರೆ ಇನ್ನು ಅದರಲ್ಲಿ 4–5 ತಿದ್ದುಪಡಿಯನ್ನು ಮಾಡಬೇಕಾಗಿದೆ. ಅದನ್ನು ತಾವು ಹೇಳಬೇಕು. ನಿಮ್ಮ ಮನಸ್ಸಿನಲ್ಲಿ ಇದೆ. ಆದರೆ ಏಕೋ ನೀವು ಹೇಳುತ್ತಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನೀವು ಇನ್ನೊಂದು ತೋಟಗಾರಿಕೆ ಬಿಲ್ ನೋಡಿ ಅದರಲ್ಲಿ 8–4 ಎಂದಿದೆ. ಬೇಕಾದರೆ ಅದನ್ನು 8–6 ಮಾಡಿ.

ಶ್ರೀ ಎಸ್.ಸುರೇಶ್‌ಕುಮಾರ್: Section 12(3) ಪ್ರಕಾರ, it is ~~very~~ clear. ಅದೆಲ್ಲೋ ಸ್ವಲ್ಪ communication gap ಆಗುತ್ತಿದೆ. "ಪದ ನಿಮಿತ್ತ ಸದಸ್ಯರುಗಳನ್ನು ಹೊರತುಪಡಿಸಿ ಮಂಡಳಿಯ ಸದಸ್ಯರ ಪದಾವಧಿಯು ಸಂದರ್ಭಾನುಸಾರ ಸರ್ಕಾರ ಅಥವಾ ಕುಲಾಧಿಪತಿಯವರ ಇಚ್ಛೆಗೊಳಪಟ್ಟು" ಎಂದಿದೆ, not Vice Chancellor, Governor or the Government. So, ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, Vice Chancellor ಕಂಟ್ರೋಲ್ ನಲ್ಲಿ ಇರುವುದಿಲ್ಲ. ಏಕೆಂದರೆ they are not nominated by the Vice Chancellor.

ಶ್ರೀ ಸಿದ್ದರಾಮಯ್ಯ : ಅವರ conduct ಸರಿಯಿಲ್ಲದೆ ಹೋಗಿದ್ದರೆ, ಅವರು ಕೆಟ್ಟದಾಗಿ ನಡೆದುಕೊಂಡರೆ ತೆಗೆದು ಹಾಕಿ.

ಶ್ರೀ ಎಸ್.ಸುರೇಶ್‌ಕುಮಾರ್ : ಅದೇ ಇರುವುದು.

ಶ್ರೀ ಸಿದ್ದರಾಮಯ್ಯ : ಆ ತರಹ ಇಲ್ಲ.

ಶ್ರೀ ಸುರೇಶ್‌ಕುಮಾರ್ : ಸುಮ್ಮಸುಮ್ಮನೆ ಯಾರು ತೆಗೆದು ಹಾಕುತ್ತಾರೆ. Government ಯಾರನ್ನೋ ಒಬ್ಬರನ್ನು nominate ಮಾಡುತ್ತದೆ. Any Government, this Government or that Governmnet, ಅವರು ತಾವೇ nominate ಮಾಡಿದವರನ್ನು ಏಕೆ ತೆಗೆದು ಹಾಕುತ್ತಾರೆ, unless there is a misconduct.

ಶ್ರೀ ಸಿದ್ದರಾಮಯ್ಯ : Let him complete his three years term. ಮಧ್ಯೆ ಮಧ್ಯೆ ತೆಗೆದು ಹಾಕುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ನೀವೇ ಒಂದು ಮಾತನ್ನು ಹೇಳಿದಿರಿ, unless there is a misconduct. Misconduct ಇದ್ದರೆ ಯಾರು ತೆಗೆದು ಹಾಕಬೇಕು.

SRI SIDDARAMAIAH : It is always understood.

ಶ್ರೀ ಸುರೇಶ್‌ಕುಮಾರ್ : But, there should be a provision.

ಶ್ರೀ ಸಿದ್ದರಾಮಯ್ಯ : ಬೇರೆ ಕಡೆ ಮೂರು ವರ್ಷಕ್ಕೆ ಮಾಡಲಾಗಿದೆ.

ಶ್ರೀ ಎಸ್.ಸುರೇಶ್‌ಕುಮಾರ್: ಸರ್ ತಾವು ಇದನ್ನು ಒಪ್ಪಿಕೊಳ್ಳಬೇಕು. Vice Chancellor, official, casual ಎಂದು ಇರುವುದಿಲ್ಲ, only the Governor, definitely he will consider all those things. ಇದನ್ನು ಯಾರು misconduct ಎನ್ನುತ್ತಾರೆ. Government which has nominated. ಇದನ್ನು ತಾವು ಒಪ್ಪಿಕೊಳ್ಳಬೇಕು. ಪದನಿಮಿತ್ತ ಸದಸ್ಯರುಗಳನ್ನು ಹೊರತುಪಡಿಸಿ ಮಂಡಳಿಯ ಸದಸ್ಯರ ಪದಾವಧಿಯು ಸಂದರ್ಭಾನುಸಾರ ಸರ್ಕಾರ ಅಥವಾ ಕುಲಾಧಿಪತಿಗಳ ಇಚ್ಛೆಗೊಳಪಟ್ಟು ಅದಕ್ಕೆ ಎಲ್ಲಾ ಸೆಕ್ಷನ್‌ನಲ್ಲೂ ಇದ್ದದ್ದೇ ಇದು.

ಶ್ರೀ ಹೆಚ್.ಡಿ.ರೇವಣ್ಣ : Point of order, Court matter ತಮಗೆ ಕಳುಹಿಸಿ ಕೊಡುತ್ತೇನೆ.

ಅಧ್ಯಕ್ಷರು : Court matter ಬೇರೆ ಇದೆ. ನೀವು ಕಳುಹಿಸದ್ದನ್ನು ನಾನು ನೋಡಿರುತ್ತೇನೆ.

ಶ್ರೀ ಹೆಚ್. ಡಿ. ರೇವಣ್ಣ : Sir, members ವಿಷಯನೇ ಇದು.

ಅಧ್ಯಕ್ಷರು : Interim order ನಾನು ನೋಡಿದ್ದೇನೆ. ಇದಕ್ಕೆ ಯಾವುದು stay ಇಲ್ಲ, ಇದಕ್ಕೆ ಏನು ಸಂಬಂಧವಿಲ್ಲ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, The term of the office of the members of the Board other than the Ex-officio member, shall be subject to the pleasure of the Government or the Chancellor as the case may be for three years and they shall not be eligible for re-nomination. What does it mean? ನೀವು ಬೇರೆ ಆಕ್ಟ್‌ನ್ನು ನೋಡಿಕೊಂಡು ಬನ್ನಿ. ಒಂದು term MLC ಆದವರು ಇನ್ನೊಂದು termಗೆ MLC ಆಗಬಾರದೆ? Power vested with the Government ಯಾರಾದರೂ ಬರಲಿ, ಅದನ್ನು ಏಕೆ ಮಾಡಬೇಕು. Unnecessary ಆಗಿ ಇದನ್ನು develop ಮಾಡುತ್ತಿದ್ದೀರಿ? ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಸ್. ಎ. ರವಿಂದ್ರನಾಥ್ : ಬೇರೆ ರೈತರು ಆಗಲಿ ಎನ್ನುವುದು ಅಷ್ಟೆ ನನ್ನ ಉದ್ದೇಶ, ಬೇರೆ ಉದ್ದೇಶ ಏನು ಇಲ್ಲ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ : ನೋಡಿ ನಾನು ಹೇಳಿ ಬಿಡುತ್ತೇನೆ. ನೀವು ನಾವು ಚಿಂತನೆ ಮಾಡುತ್ತಿರುವುದಕ್ಕೆ ಏನು ತುಂಬಾ ಬದಲಾವಣೆ ಇಲ್ಲ. ಈಗ Section-11 ರಲ್ಲಿ "Board of Regents" ಎನ್ನುವುದಕ್ಕೆ ಬದಲಾಗಿ "Board of Management" ಎಂದು ಇಡಿ ಎಂದು ನಾವು ಕೇಳುತ್ತಿದ್ದೇವೆ. ಅದರಲ್ಲಿ ಏನು ಮಹಾ ಬದಲಾವಣೆ ಆಗುತ್ತದೆ.

ಅಧ್ಯಕ್ಷರು : ಈಗ nomination ನನ್ನು ಒಪ್ಪಿಕೊಂಡಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ : Section-12ರಲ್ಲಿ Board of Management ಅಂದರೆ Board of Regent ಎಂದು.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಬಹಳ important demand ಏನು? ಬೋರ್ಡಿನಲ್ಲಿ ಕೃಷಿಕರು, ರೈತರು, Non-

official ಸಂಖ್ಯೆ ಜಾಸ್ತಿ ಇರಬೇಕು. That is the Government has conceded. ಎರಡನೇಯದು, ಇಲ್ಲಿ ಒಂದು ಗ್ರಹಿಕೆ ಇತ್ತು. Vice Chancellor ನ್ನು ಮೂರು ವರ್ಷದಲ್ಲಿ ತೆಗೆದುಹಾಕಬಹುದು ಅಂತ, that has been made it very clear. ದಯವಿಟ್ಟು ಇದಕ್ಕೆ ಒಪ್ಪಿಗೆ ಕೊಡಿ.

ಅಧ್ಯಕ್ಷರು : ಇದನ್ನು ಮುಗಿಸೋಣ.

ಶ್ರೀ ಟಿ. ಬಿ. ಜಯಚಂದ್ರ : Universityಯಲ್ಲಿ ನಾನು Pro-Chancellor ಆಗಿದ್ದವನು ನನಗೆ ಗೊತ್ತಿದೆ ಅಲ್ಲಿ ಏನು ನಡೆಯುತ್ತಿದೆ ಎಂದು. ಈಗ 1/3rd of the Board Members ಅನ್ನುವ ಬದಲು 50% ಇಡಿ. ಏಕೆಂದರೆ, 1/3rd ಆದರೆ ಬರೀ officials membersನ್ನೇ ಇಟ್ಟುಕೊಂಡು ಸಭೆ ಮಾಡಿ ಬಿಡುತ್ತಾರೆ. ಅದು ಅಲ್ಲಿ ಬರುವ problem.

(ಗೊಂದಲ)

ಇಲ್ಲಿ ಏನಾಗಿದೆ ಎಂದರೆ, Board ಅಂದರೆ ಬರೀ promotion, transfer ಇನ್ನೊಂದು politics ಬಿಟ್ಟರೆ, ಸಂಶೋಧನೆ ಬಗ್ಗೆ ಚರ್ಚೆಯಾಗುವುದಿಲ್ಲ, ಬೇರೆ ಏನು ವಿಚಾರಗಳು ಚರ್ಚೆಯಾಗುವುದಿಲ್ಲ. ಅದಕ್ಕೋಸ್ಕರ ನಾನು ಹೇಳುವುದು. ರೈತ ಪ್ರತಿನಿಧಿಗಳು ಜಾಸ್ತಿ ಇರಬೇಕು.

ಅಧ್ಯಕ್ಷರು : ಅವರು ಮೀಟಿಂಗ್‌ಗೆ ಹೋಗುವುದಿಲ್ಲವೆಂದರೆ ಏನು ಮಾಡುವುದಕ್ಕಾಗುವುದಿಲ್ಲ. ಅಂದರೆ ಅವರಿಗೆ ಜವಾಬ್ದಾರಿ ಇಲ್ಲವೆಂದು ಆಗುತ್ತದೆ. ತಾವು ತಾವೇ ಮಾಡಿಕೊಳ್ಳುವುದಕ್ಕೆ ಹೇಗಾಗುತ್ತದೆ. ಮೆಂಬರ್ ಆದ ಮೇಲೆ ಅವರು ಸಭೆಗೆ ಬರಬೇಕಾಗುತ್ತದೆ.

ಶ್ರೀ ಟಿ. ಬಿ. ಜಯಚಂದ್ರ : ಅವರು ಹೇಳುವುದಕ್ಕೂ ನಾವು ಹೇಳುವುದಕ್ಕೂ ಏನು difference ಇಲ್ಲ. Smooth ಆಗಿ ನಡೆಯಬೇಕಾದರೆ, ಅದರಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಬೇಕು.

ಅಧ್ಯಕ್ಷರು : ಎಲ್ಲಿ ಇದೆ ರೂಲ್ಸ್. ಕೋರಂ ಎಲ್ಲಾ ಕಡೆ ನೋಡಲಾಗಿದೆ. ಆಯಿತು ಮುಗಿಸೋಣ.

ಶ್ರೀ ಹೆಚ್. ಡಿ. ರೇವಣ್ಣ : ಅಮೆಂಡ್‌ಮೆಂಟ್ ಬಗ್ಗೆ ಏನು ಹೇಳಲಿಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್ : 1/3 ಕೋರಂ ಇರಬೇಕು. ಎರಡು ಸಂಗತಿಗಳನ್ನು ನಾವು Clarification ಮಾಡಿದ್ದೇವೆ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಮೊದಲ ಬಾರಿ ಕೋರಂ ಇಲ್ಲದಿದ್ದರೆ ಸಭೆ ಮಾಡುವಂತಿಲ್ಲ. ಆದರೆ, ಎರಡನೇ ಸಲ ಕೋರಂ ಇಲ್ಲದಿದ್ದರೂ ಸಭೆ ಮಾಡಬಹುದು ಎಂದು ಇರುವುದನ್ನು ಮಾತ್ರ ಬದಲಾವಣೆ ಮಾಡಬೇಕು. ಸಭೆ ಮಾಡುವುದಕ್ಕೆ ಕೋರಂ ಅವಶ್ಯಕತೆ ಇರಬೇಕು ಎಂಬುದನ್ನು ಮಾಡಿ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಈಗ ಒಂದು ಸ್ಪಷ್ಟೀಕರಣವನ್ನು ಸಭೆಗೆ ಕೊಡುತ್ತಿದ್ದೇನೆ. ಸಭೆಯ ಎಲ್ಲರ ಭಾವನೆಯನ್ನು ಒಪ್ಪಿಕೊಂಡು ಅಧಿಕಾರೇತರ ಸಂಖ್ಯೆಯನ್ನು ಜಾಸ್ತಿ ಮಾಡಿ ಮೂರು ಜನ ರೈತರು, ಮೂರು ಜನ ಶಾಸಕರನ್ನು ಇವತ್ತು ನೇಮಕ ಮಾಡುತ್ತಿದ್ದೇವೆ. ಮೂರು ಜನ ರೈತರು ಮೂರು ಜನ ಶಾಸಕರನ್ನು ಹೆಚ್ಚಾಗಿ ನೇಮಕ ಮಾಡುತ್ತಿದ್ದೇವೆ. ಎರಡನೆಯದು, ವೈಸ್‌ಚಾನ್ಸಲರ್ ರವರ ಕಂಟ್ರೋಲ್‌ಗೆ ಬರುತ್ತದೆಂದು ಏನು ಹೇಳಿದ್ದೀರಿ, ಆ ರೀತಿ ಅಲ್ಲ. ಇಲ್ಲಿ Government ಮತ್ತು Governorರವರ ಕಂಟ್ರೋಲ್ ನಲ್ಲಿದೆ. ಕೋರಂ ವಿಚಾರವನ್ನು ಹೇಳಿದ್ದೀರಿ. ಯಾವುದೇ ಸಭೆಯಲ್ಲೂ ಮೂರನೇ ಒಂದು ಭಾಗ ಕೋರಂ ಇರಲೇ ಬೇಕು.

ಪರ್ಯಾಲೋಚನಾ ಪ್ರಸ್ತಾವ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "2009ರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು
ಖಂಡ 2 ರಿಂದ 68 ರವರೆಗೆ

ಅಧ್ಯಕ್ಷರು : "ಖಂಡ 2 ರಿಂದ 68ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು
(ಖಂಡ 2 ರಿಂದ 68ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಕಂಡ 2ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

(a) for item (vii) the following shall substituted, namely:-

"(vii) Five progressive farmers from the jurisdiction of the university of which two persons belonging to the Scheduled Castes or the Scheduled Tribes to be nominated by the State Government.

(viii) Two members of the Karnataka State Legislative Assembly to be nominated by the Speaker and one Member of the Karnataka Legislative Council to be nominated by the Chairman"
(b) The item (viii) to (xv) shall be respondent-numbered as item (ix) to (xvi) ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ವಿಧೇಯಕದ 2ನೇ ಖಂಡದಲ್ಲಿ (a) For item (vii) the following shall be substituted, namely:-

"(vii) Five progressive farmers from the jurisdiction of the university of which two persons belonging to the Scheduled Castes or the Scheduled Tribes to be nominated by the State Government.

(viii) Two members of the Karnataka State Legislative Assembly to be nominated by the Speaker and one Member of the Karnataka Legislative Council to be nominated by the Chairman"
(b) The item (viii) to (xv) shall be respondent-numbered as item (ix) to (xvi) ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 2 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 2 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್.ಎ.ರವೀಂದ್ರನಾಥ್ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ "2009ರ ಕೃಷಿ ವಿಜ್ಞಾನಗಳ ವಿಧೇಯಕವನ್ನು" ತಿದ್ದುಪಡಿಯೊಂದಿಗೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "2009ರ ಕೃಷಿ ವಿಜ್ಞಾನಗಳ ವಿಧೇಯಕವನ್ನು" ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಅನುಬಂಧ–12)